# ಯುಗಶ್ರೀ

* ಉತ್ತಮ ಸ್ವಭಾವ
* ಮಸೀದಿ – ಶಾಂತಿಧಾಮ
* ಇಸ್ಲಾಮಿಕ ಲೋಕದ ಸಮಸ್ಯೆಗಳಿಗೊಂದು ಪರಿಹಾರ
* ಯೇಸು ಶಿಲುಬೆಯ ಮೇಲೆ ಮೃತಪಟ್ಟಿದ್ದರೇ?
* ಧರ್ಮದ ನಾಮದಲ್ಲಿ ರಕ್ತಪಾತ

ಜುಲೈ 2009

ತ್ರೈಮಾಸಿಕ
ಬೆಲೆ ರೂ. 5/-

"ಎಲೈ ಸತ್ಯವಿಶ್ವಾಸಿಗಳೇ, ನೀವು ಅಲ್ಲಾಹನಿಗೆ ಭಯಪಡಿರಿ. ನಾಳೆಗೋಸ್ಕರ ತಾನು ಏನನ್ನು ಸಿದ್ಧಪಡಿಸಿಟ್ಟಿದ್ದೇನೆ ಎಂದು ಪ್ರತಿಯೊಬ್ಬನೂ ನೋಡಿಕೊಳ್ಳಲಿ. ನೀವು ಅಲ್ಲಾಹನ ಭಯಭಕ್ತಿ ಇರಿಸಿಕೊಳ್ಳಿರಿ. ನೀವು ಮಾಡುವುದನ್ನೆಲ್ಲ ಖಂಡಿತವಾಗಿಯೂ ಅಲ್ಲಾಹನು ಚೆನ್ನಾಗಿ ತಿಳಿಯುವವನಾಗಿದ್ದಾನೆ."

ಪವಿತ್ರ ಖುರ್‌ಆನ್ (59:19)

# ಯುಗರಶ್ಮಿ

ತ್ರೈಮಾಸಿಕ

10-23-1008/1, 1ನೇ ಮಹಡಿ, ಅನ್ಸಾರಿ ರಸ್ತೆ, ಬಂದರ್, ಮಂಗಳೂರು - 575 001

ಬಿಡಿ ಪ್ರತಿ : ರೂ.5/- ವಾರ್ಷಿಕ ಚಂದಾ : ರೂ.20/-- ಅಂಚೆ ಮೂಲಕ : ರೂ.30/-

## -ವಿಷಯ ಸೂಚಿಕೆ

ಪುಟ

★ ಇಸ್ಲಾಮ್ ಶಾಂತಿ ಮಾರ್ಗ 1
★ ಮುಹಮ್ಮದ್ ಪೈಗಂಬರರ(ಸ) ನುಡಿಮುತ್ತುಗಳು 2
★ ಉತ್ತಮ ಸ್ವಭಾವ 3
★ ಮಸೀದಿ – ಶಾಂತಿಧಾಮ 6
★ ಇಸ್ಲಾಮಿಕ ಲೋಕದ ಸಮಸ್ಯೆಗಳಿಗೊಂದು ಪರಿಹಾರ 10
★ ಯೇಸು ಶಿಲುಬೆಯ ಮೇಲೆ ಮೃತಪಟ್ಟಿದ್ದರೇ? 15
★ ಇಸ್ಲಾಮಿನ ಪ್ರಾಥಮಿಕ ಪಾಠಗಳು 20
★ 117ನೇ ಅಹ್ಮದಿಯಾ ವಾರ್ಷಿಕ ಸಮ್ಮೇಳನ 24
★ ಅಹ್ಮದಿಯಾ ಜಮಾಅತಿನ ಅಭಿವೃದ್ಧಿ ವಿರೋಧಿಗಳನ್ನು ಪ್ರಕೋಪಗೊಳಿಸುತ್ತದೆ. 25
★ ಅಹ್ಮದಿಯರಿಗೆ ಸುತ್ತೋಲೆ 25
★ ನಿಧನ ವಾರ್ತೆ 26
★ ಪುಸ್ತಕ ವಿಭಾಗ : ಧರ್ಮದ ನಾಮದಲ್ಲಿ ರಕ್ತಪಾತ 27
★ ಸಂಪಾದಕರಿಗೆ ಪತ್ರ 36

**ಇಸ್ಲಾಂ ಧರ್ಮ ತತ್ವಜ್ಞಾನ**

ಗ್ರಂಥಕರ್ತ
ಹಝ್ರತ್ ಮಿರ್ಝಾ ಗುಲಾಂ ಅಹ್ಮದ್

*ಈ ಕೆಳಗಿನ ಐದು ಪ್ರಶ್ನೆಗಳಿಗೆ ಇಸ್ಲಾಮಿಕ ದೃಷ್ಟಿಯ ಉತ್ತರ :*

1. ಮಾನವನ ಶಾರೀರಿಕ, ನೈತಿಕ ಮತ್ತು ಆಧ್ಯಾತ್ಮಿಕ ಸ್ಥಿತಿಗಳು.
2. ಮಾನವನ ಮರಣಾನಂತರದ ಸ್ಥಿತಿ.
3. ಮಾನವನ ಐಹಿಕ ಜೀವಿತೋದ್ದೇಶ ಮತ್ತು ಅದನ್ನು ಗಳಿಸುವ ಮಾರ್ಗಗಳು.
4. ಧರ್ಮ ನಿಯಮಾನುಸರಣೆ ಇಹಪರ ಜೀವಿತದಲ್ಲಿ ಉಂಟುಮಾಡುವ ಫಲಗಳು.
5. ದೈವಿಕ ಜ್ಞಾನ ಸಿದ್ಧಿಯ ಮಾರ್ಗಗಳು.

ಬೆಲೆ : ರೂ. 25/-

**ಸನ್ಮಾರ್ಗ ದರ್ಶಕ**

ಗ್ರಂಥಕರ್ತ
ಹಝ್ರತ್ ಮಿರ್ಝಾ ಬಶೀರ್ ಅಹ್ಮದ್

ಅಹ್ಮದಿಯಾ ಜಮಾಅತಿನ ವಿಶ್ವಾಸಾದರ್ಶಗಳ ಬಗ್ಗೆ ತಿಳಿಯಲು ಒಂದು ಉತ್ತಮ ಕೃತಿ.

ಬೆಲೆ : ರೂ. 65/-

ಮೇಲಿನ ಎರಡೂ ಪುಸ್ತಕಗಳಿಗಾಗಿ ಸಂಪರ್ಕಿಸಿರಿ :

**Ahmadiyya Muslim Mission, No. 1, 3rd Cross Road, Wilson Garden, Bangalore - 560 027**

بسم الله الرحمن الرحيم
نحمده ونصلي على رسوله الكريم


# ಯುಗರಶ್ಮಿ

ಸಂಪಾದಕ : ಮುಹಮ್ಮದ್ ಯೂಸುಫ್

| ಆರಂಭ : 1975 | ಸಂಪುಟ : 26 | ಜುಲೈ 2009 | ವರ್ಷ 1388 | ಸಂಚಿಕೆ : 2 |
| --- | --- | --- | --- | --- |


## ಇಸ್ಲಾಮ್ ಶಾಂತಿ ಮಾರ್ಗ

ಈಗಿನ ಕಾಲದ ಮುಸ್ಲಿಮೇತರ ಸಮುದಾಯದ ರಾಜರು ಇಸ್ಲಾಮ್ ಧರ್ಮದ ಧಾರ್ಮಿಕ ಸ್ವಾತಂತ್ರ್ಯಕ್ಕೆ ಅಡ್ಡಿಪಡಿಸುವುದಿಲ್ಲ; ಇಸ್ಲಾಮ್ ಧರ್ಮದ ಕಡ್ಡಾಯ ಅನುಷ್ಠಾನ ಕರ್ಮಗಳನ್ನು ತಡೆಯುವುದಿಲ್ಲ; ತನ್ನ ಸಮುದಾಯದಿಂದ ಮುಸ್ಲಿಮರಾಗಿ ಪರಿವರ್ತನೆ ಹೊಂದುವವರರನ್ನು ಕೊಲ್ಲುವುದಿಲ್ಲ; ಅವರನ್ನು ಬಂಧಿಸಿ ಸೆರೆಮನೆಯಲ್ಲಿಡುವುದಿಲ್ಲ; ಅವರಿಗೆ ನಾನಾವಿಧಗಳ ಕಷ್ಟಕೊಡುವುದಿಲ್ಲ. ಹೀಗಿರುವಾಗ ಇಂತಹ ಸರಕಾರದ ವಿರುದ್ಧ ಇಸ್ಲಾಮ್ ಖಡ್ಗವೆತ್ತಬೇಕಾದುದಾದರೂ ಏಕೆ?

ಇಸ್ಲಾಮ್ ಎಂದೂ ಬಲಾತ್ಕಾರವನ್ನು ಕಲಿಸಲಿಲ್ಲ. ಪವಿತ್ರ ಖುರ್‌ಆನ್, ಹದೀಸಿನ ಎಲ್ಲಾ ಗ್ರಂಥಗಳು ಮತ್ತು ಚರಿತ್ರೆಯ ಗ್ರಂಥಗಳನ್ನು ಗಾಢವಾಗಿ ಅಧ್ಯಯನ ಮಾಡುವುದಾದರೆ ಈ ಎಲ್ಲಾ ಗ್ರಂಥಗಳ ಮೂಲಕ ನಿಖರವಾಗಿ ತಿಳಿದು ಬರುವುದೇನೆಂದರೆ, ಇಸ್ಲಾಮ್ ಧರ್ಮವು ಬಲಾತ್ಕಾರದಿಂದ ಧರ್ಮ ಪ್ರಚಾರಮಾಡಲಿಕ್ಕಾಗಿ ಖಡ್ಗವೆತ್ತಿತು ಎಂಬ ಆಕ್ಷೇಪವು ಅತ್ಯಂತ ನಿರಾಧಾರವೂ ನಾಚಿಕೆಗೇಡಿನದೂ ಆಗಿದೆ. ದ್ವೇಷಾಸೂಯೆಗಳಿಂದ ಮುಕ್ತವಾಗಿ, ಪವಿತ್ರ ಖುರ್‌ಆನ್, ಹದೀಸ್ ಮತ್ತು ವಿಶ್ವಾಸಾರ್ಹ ಚಾರಿತ್ರಿಕ ಗ್ರಂಥಗಳನ್ನು ಪಾರಾಯಣ ಮಾಡದೆ ಸುಳ್ಳು ಮತ್ತು ಕಪೋಲಕಲ್ಪಿತ ಆರೋಪಗಳನ್ನು ಹೊರಿಸುವವರೇ ಹೀಗೆ ಇಸ್ಲಾಮಿನ ವಿರುದ್ಧ ದೋಷಾರೋಪ ಮಾಡುತ್ತಿದ್ದಾರೆ.

ಆದರೆ ಈ ಕಪೋಲಕಲ್ಪಿತ ಆರೋಪಗಳು ಸುಳ್ಳೆಂದು ವಾಸ್ತವಿಕವಾಗಿ ಸತ್ಯಾನ್ವೇಷಿಗಳು ಅರಿತುಕೊಳ್ಳುವ ಕಾಲವು ಸಮೀಪವಾಗಲಿದೆ ಎಂದು ನಾನು ತಿಳಿದುಕೊಂಡಿದ್ದೇನೆ. ಯಾವ ಧರ್ಮದ ಗ್ರಂಥವಾದ ಪವಿತ್ರ ಖುರ್‌ಆನ್‌ನಲ್ಲಿ "ಲಾ ಇಕ್ರಾಹ ಫಿದ್ದೀನ್"- ಇಸ್ಲಾಮ್ ಧರ್ಮಕ್ಕೆ ಸೇರಿಸಲು ಬಲಾತ್ಕಾರ ಮಾಡಬಾರದು ಎಂಬ ಉಪದೇಶವಿದೆಯೋ ಅಂತಹ ಧರ್ಮವನ್ನು, ಬಲಾತ್ಕಾರವನ್ನು ಪ್ರತಿಪಾದಿಸುವ ಧರ್ಮ ಎಂದು ಹೇಳಲು ಹೇಗೆ ತಾನೆ ಸಾಧ್ಯ? ಹಝ್ರತ್ ಪ್ರವಾದಿ(ಸ) ಮಕ್ಕ ನಗರದಲ್ಲಿ ಹದಿಮೂರು ವರ್ಷಗಳ ಕಾಲ ತನ್ನ ಎಲ್ಲಾ ಸ್ನೇಹಿತರಿಗೆ ಬಹುದೇವಾರಾಧಕರನ್ನು ಎದುರಿಸದೆ ಸಹನೆದೋರಿರಿ ಎಂದು ಉಪದೇಶಿಸಿರುವಾಗ, ಅವರ ವಿರುದ್ಧ ಬಲಾತ್ಕಾರ ಮಾಡಿದರೆಂದು ದೋಷಾರೋಪ ಹೊರಿಸಲು ಸಾಧ್ಯವೇ?

ಆದರೆ ಶತ್ರುಗಳ ದೌರ್ಜನ್ಯ ಮಿತಿಮೀರಿದಾಗ ಮತ್ತು ಇಸ್ಲಾಮ್ ಧರ್ಮವನ್ನು ನಾಶಮಾಡಲು ಎಲ್ಲಾ ಜನಾಂಗಗಳು ಪ್ರಯತ್ನಿಸಿದಾಗ ದೇವನಿಗೆ ತನ್ನ ದಾಸರ ಕುರಿತು ಇದ್ದ ಅಭಿಮಾನವು ಖಡ್ಗ ಎತ್ತುವವರ ವಿರುದ್ಧ ಖಡ್ಗವನ್ನು ಚಲಾಯಿಸಲು ಅನುಮತಿ ನೀಡಿತು.

ಪವಿತ್ರ ಖುರ್‌ಆನ್ ಖಂಡಿತವಾಗಿಯೂ ಬಲಾತ್ಕಾರ ಮಾಡಬೇಕೆಂಬ ಉಪದೇಶ ನೀಡಲಿಲ್ಲ. ಪವಿತ್ರ ಖುರ್‌ಆನ್

# ಮುಹಮ್ಮದ್ ಪೈಗಂಬರರ(ಸ) ನುಡಿಮುತ್ತುಗಳು

❖ ಭೂಮಿ ನಿನಗೆ ಮಸೀದಿಯಾಗಿದೆ. ಎಲ್ಲಿ ನಮಾಝ್ ಸಮಯವಾಗುತ್ತದೋ, ಅಲ್ಲಿ ನೀನು ನಮಾಝ್ ಮಾಡು. (ಬುಖಾರಿ, ಮುಸ್ಲಿಂ)

❖ ಅಲ್ಲಾಹನಾಣೆ, ಪ್ರತಿ ದಿನ ನಾನು ಎಪ್ಪತ್ತಕ್ಕಿಂತ ಹೆಚ್ಚು ಸಲ ಅಲ್ಲಾಹನೊಡನೆ ಪಶ್ಚಾತ್ತಾಪಪಟ್ಟು ಕ್ಷಮೆಯಾಚಿಸುತ್ತೇನೆ. (ಬುಖಾರಿ)

❖ ನನ್ನ ಅನುಯಾಯಿಗಳೆಲ್ಲರೂ ಸ್ವರ್ಗವನ್ನು ಪ್ರವೇಶಿಸುವರು – ನನ್ನ ಆಜ್ಞೆಯನ್ನು ತಿರಸ್ಕರಿಸುವವರು ಹೊರತು. (ಬುಖಾರಿ)

❖ ಬಹು ಸಂಖ್ಯಾತ ಜನರು ಆರೋಗ್ಯ, ವಿಶ್ರಾಂತಿ ಎಂಬ ಅಲ್ಲಾಹನಿಂದಿರುವ ಎರಡು ಅನುಗ್ರಹಗಳು ನಷ್ಟಹೊಂದಿದವರಾಗಿದ್ದಾರೆ. (ಬುಖಾರಿ)

❖ ಖುರ್‌ಆನಿನ ಜ್ಞಾನವಿರುವವರೂ ಅದನ್ನು ಕಲಿಸುವವರೂ ನಿಮ್ಮ ಪೈಕಿ ಅತಿ ಶ್ರೇಷ್ಠರು. (ಬುಖಾರಿ)

❖ ರಾತ್ರಿಯ ಆಹಾರ ಮಗ್ರಿಬ್‌ಗೆ ಮುಂಚೆ ನಿಮ್ಮ ಮುಂದೆ ತಂದಿಟ್ಟರೆ, ಮೊದಲು ನೀವು ಆಹಾರ ಸೇವಿಸಿರಿ. ಆಹಾರವನ್ನು ಬಿಟ್ಟು ನಮಾಝ್ ಮಾಡಲು ನೀವು ಅವಸರಿಸಬೇಡಿರಿ. (ಬುಖಾರಿ)

❖ ಜನರಲ್ಲಿ ಒಂದು ಕಾಲ ಬರುವುದು. ಅಂದು ಮನುಷ್ಯನು ಸಂಪಾದಿಸುವ ಧನ ಧರ್ಮನಿಷಿದ್ಧವೋ (ಹರಾಂ) ಧರ್ಮಬದ್ಧವೋ (ಹಲಾಲ್) ಎಂದು ಯಾರೂ ನೋಡಲಿಕ್ಕಿಲ್ಲ. (ಬುಖಾರಿ)

❖ ಮಾರುವಾಗಲೂ ಖರೀದಿಸುವಾಗಲೂ ಕೊಟ್ಟ ಸಾಲವನ್ನು ಕೇಳುವಾಗಲೂ ರಿಯಾಯಿತಿ ತೋರಿಸುವವನನ್ನು ಅಲ್ಲಾಹನು ಅನುಗ್ರಹಿಸಲಿ. (ಬುಖಾರಿ)

❖ ಕಾವಲು ಕಾಯಲು ಹೊರತು ಯಾರಾದರೂ ನಾಯಿಯನ್ನು ಸಾಕಿದರೆ ಅವನ ಸತ್ಕರ್ಮಗಳಲ್ಲಿ ದೊಡ್ಡ ಒಂದಂಶ ದಿನಂಪ್ರತಿ ಕಮ್ಮಿಯಾಗುವುದು. (ಬುಖಾರಿ)

❖ ಅಲ್ಲಾಹನ ದೃಷ್ಟಿಯಲ್ಲಿ ಅತ್ಯಂತ ದ್ವೇಷಿಸಲ್ಪಟ್ಟ ಮನುಷ್ಯನು ಮರ್ಕಟ ಮುಷ್ಟಿಯವನೂ ಹಟಮಾರಿಯೂ ಆಗಿದ್ದಾನೆ. (ಬುಖಾರಿ)

ಬಲಾತ್ಕಾರವನ್ನು ಪ್ರತಿಪಾದಿಸಿದ್ದರೆ ಮತ್ತು ಅಂತಹ ಬಲಾತ್ಕಾರಕ್ಕೆ ಗುರಿಯಾಗಿ ಧರ್ಮಾವಲಂಬಿಗಳಾಗಿರುತ್ತಿದ್ದರೆ ಹಝ್ರತ್ ಪ್ರವಾದಿಯವರ(ಸ) ಶಿಷ್ಯರು ಪರೀಕ್ಷೆಗಳಿಗೆ ಗುರಿಯಾದಾಗ ತೋರಿಸಿದಂತಹ ಸತ್ಯವಾದ ಪ್ರಾಮಾಣಿಕತೆಯನ್ನು ಪ್ರದರ್ಶಿಸಲು ಅವರಿಗೆ ಸಾಧ್ಯವಿರಲಿಲ್ಲ. ಆದರೆ ನಮ್ಮ ನಾಯಕರೂ ಯಜಮಾನರೂ ಆದ ಹಝ್ರತ್ ಪ್ರವಾದಿಯವರ(ಸ) ಶಿಷ್ಯರ ನಿಷ್ಠೆಯು ಎಷ್ಟು ಸತ್ಯವಾಗಿತ್ತು ಎಂದರೆ ಅದರ ಬಗ್ಗೆ ಹೇಳುವ ಅಗತ್ಯವಿಲ್ಲ. ಅವರ ಸತ್ಯ ಮತ್ತು ಪ್ರಾಮಾಣಿಕತೆ ಎಷ್ಟು ಉನ್ನತಮಟ್ಟದ್ದು ಆಗಿತ್ತೆಂದರೆ ಅವುಗಳಿಗೆ ಸಮವಾದುದು ಅನ್ಯ ಸಮುದಾಯಗಳಲ್ಲಿ ಕಾಣುವುದು ಅಸಾಧ್ಯವಾಗಿದೆ.

ಈ ನಿಷ್ಠಾವಂತ ಜನರು ಖಡ್ಗಗಳ ಕೆಳಭಾಗದಲ್ಲಿದ್ದಾಗ ಕೂಡ ತಮ್ಮ ನಿಷ್ಠೆಯನ್ನೂ ಸತ್ಯವನ್ನೂ ಬಿಟ್ಟುಬಿಡಲಿಲ್ಲ. ಅವರು ತಮ್ಮ ಮಹಾನ್ ಮತ್ತು ಪರಿಶುದ್ಧ ಪ್ರವಾದಿಯವರಿಗೆ(ಸ) ಎಂತಹ ಪ್ರಾಮಾಣಿಕತೆ ಮತ್ತು ನಿಷ್ಠೆಯನ್ನು ಪ್ರಕಟಿಸಿದರೆಂದರೆ, ಅಂತಹ ನಿಷ್ಠೆ ಮತ್ತು ಸತ್ಯ, ಹೃದಯ ಮತ್ತು ಮನಸ್ಸು ಸತ್ಯವಿಶ್ವಾಸದಿಂದ ಬೆಳಗಿಸಲ್ಪಡದೆ ಇರುವ ಯಾವ ಮನುಷ್ಯನಲ್ಲೂ ಗೋಚರಿಸಲಾರದು. ಒಟ್ಟಾರೆ ಹೇಳುವುದಾದರೆ, ಇಸ್ಲಾಮ್‌ನಲ್ಲಿ ಬಲಾತ್ಕಾರಕ್ಕೆ ಸ್ಥಾನವಿಲ್ಲ. (ಮಸೀಹ್ ಹಿಂದೂಸ್ತಾನ್ ಮೆ – 1899)

**ಹಝ್ರತ್ ಮಿರ್ಝಾ ಗುಲಾಂ ಅಹ್ಮದ್**
ಅಹ್ಮದಿಯಾ ಮುಸ್ಲಿಂ ಜಮಾಅತಿನ ಸ್ಥಾಪಕರು

# ಉತ್ತಮ ಸ್ವಭಾವ

(ಅಹ್ಮದಿಯಾ ಮುಸ್ಲಿಂ ಜಮಾಅತಿನ ಚತುರ್ಥ ಖಲೀಫ ಹಝ್ರತ್ ಮಿರ್ಝಾ ತಾಹಿರ್ ಅಹ್ಮದ್ ಸಾಹೇಬರು 2-2-2001ರಂದು ಲಂಡನಿನ ಮಸ್‌ಜಿದ್ ಫಝ್ಲ್‌ನಲ್ಲಿ ನೀಡಿದ ಜುಮಾ ಖುತುಬ)

يَوْمَ تَشْهَدُ عَلَيْهِمْ أَلْسِنَتُهُمْ وَأَيْدِيهِمْ وَأَرْجُلُهُمْ بِمَا كَانُوا يَعْمَلُونَ ۝٢٥

يَوْمَئِذٍ يُوَفِّيهِمُ اللَّهُ دِينَهُمُ الْحَقَّ وَيَعْلَمُونَ أَنَّ اللَّهَ هُوَ الْحَقُّ الْمُبِينُ ۝٢٦

"ಅವರ ಕೃತ್ಯಗಳ ಬಗ್ಗೆ ಅವರ ನಾಲಗೆಗಳೂ ಅವರ ಕೈಗಳೂ ಅವರ ಕಾಲುಗಳೂ ಅವರ ವಿರುದ್ಧ ಸಾಕ್ಷ್ಯ ನೀಡುವ ದಿನ –

"ಆ ದಿನದಂದು ಅಲ್ಲಾಹನು ಅವರಿಗೆ ತಕ್ಕುದಾದ ಪ್ರತಿಫಲ ನೀಡುವನು. ಅಲ್ಲಾಹನೇ ಸ್ಪಷ್ಟವಾದ ಸತ್ಯಸ್ವರೂಪನೆಂದು ಅವರು ಮನಗಾಣುವರು."

(ಪವಿತ್ರ ಖುರ್‌ಆನ್ 24:25,26)

ಉತ್ತಮ ಸ್ವಭಾವಗಳು ಎಂಬುದು ಇಂದಿನ ಖುತುಬದ ವಿಷಯ. ಹೆಚ್ಚಿನವರು ತಮ್ಮ ಸ್ವಭಾವಗಳು ಉತ್ತಮವೆಂದು ತಿಳಿದಿರುತ್ತಾರೆ. ಆದರೆ ಖುರ್‌ಆನಿನ ಅಧ್ಯಾಪನೆಗಳು ಮತ್ತು ಪ್ರವಾದಿ ವಚನಗಳೊಂದಿಗೆ ಅವನ್ನು ಹೋಲಿಸಿ ನೋಡುವಾಗ ಅವೆಲ್ಲ ಯಾರಿಗಾದರೂ ತೋರಿಸಲಿಕ್ಕಾಗಿ ಮಾಡಿದ್ದೆಂದು ಮನಗಾಣಬಹುದು. ಪುನರುತ್ಥಾನ ದಿನದಂದು ಅವರ ಕೈಕಾಲು ಮೊದಲಾದವು ಅವರು ದುಸ್ಸ್ವಭಾವಿಗಳಾಗಿದ್ದರೆಂದು ಸಾಕ್ಷಿ ಹೇಳುವುವು. ದುಸ್ಸ್ವಭಾವಿಗಳು ಸ್ವರ್ಗದಲ್ಲಿ ಪ್ರವೇಶಿಸಲಾರರೆಂದು ಹಝ್ರತ್ ಮುಹಮ್ಮದ್ ಪೈಗಂಬರ್ (ಸಲ್ಲಲ್ಲಾಹು ಅಲೈಹಿ ವಸಲ್ಲಂ) ಮುನ್ನೆಚ್ಚರಿಕೆ ನೀಡಿದ್ದಾರೆ.

ಮರ್ಫೂಅ್ ಆದ ಒಂದು ಹದೀಸ್ ಹಝ್ರತ್ ಅಬೂ ಸಈದ್ ಖುದ್‌ರೀ (ರಝಿಯಲ್ಲಾಹು ಅನ್‌ಹು) ವರದಿ ಮಾಡುತ್ತಾರೆ. ಅವರು ಹೇಳಿದರು: ಪೈಗಂಬರ್(ಸ) ಹೀಗೆ ನುಡಿದಿದ್ದಾರೆ: ಮನುಷ್ಯನು ಪುನರುತ್ಥಾನಗೊಳಿಸಲ್ಪಟ್ಟಾಗ ಎಲ್ಲ ಅವಯವಗಳು ಅವನ ನಾಲಗೆಯನ್ನು ಅನುಸರಿಸುವುವೆಂದು ಹೇಳುವುವು. ಅವು ಹೀಗೆ ಹೇಳುವುವು: 'ನಮ್ಮನ್ನು ಸ್ಮರಿಸಿ ಅಲ್ಲಾಹನ ಭಯಭಕ್ತಿ ಇರಿಸಿಕೋ. ಏಕೆಂದರೆ ನಾವು ನಿನಗೆ ವಿಧೇಯರಾಗಿದ್ದೇವೆ. ನೀನು ನೇರವಾಗಿದ್ದರೆ ನಾವು ಸಹ ನೇರವಾಗಿರುತ್ತೇವೆ. ನೀನು ಬಾಗಿದರೆ ನಾವು ಸಹ ಬಾಗುವೆವು.'

ಹಝ್ರತ್ ಸೂಫಿಯಾನಿಬ್ನು ಅಬ್ದುಲ್ಲಾಹ್(ರ) ವರದಿ ಮಾಡುತ್ತಾರೆ. ಅವರು ಹಿಗೆ ಹೇಳಿದರು: "ಬಿಗಿಯಾಗಿ ಹಿಡಿಯಲು ಏನಾದರೂ ಒಂದು ವಿಚಾರವನ್ನು ಹೇಳಿಕೊಡಲು ನಾನು ಪೈಗಂಬರರೊಡನೆ(ಸ) ಕೇಳಿದೆನು. ಪೈಗಂಬರ್(ಸ) ನುಡಿದರು: ನೀನು ರಬ್ಬಿಯಲ್ಲಾಹ್ ಎಂದು ಹೇಳು. ಅಂದರೆ, ನನ್ನ ಪ್ರಭು ಅಲ್ಲಾಹನು. ಇದನ್ನು ನೀನು ಬಿಗಿಯಾಗಿ ಹಿಡಿದುಕೋ."

ಅಲ್ಲಾಹನು ಪ್ರಭುವೆಂದು ಔಪಚಾರಿಕವಾಗಿ ಹೇಳುವುದು ಉದ್ದೇಶವಲ್ಲ. ಮನುಷ್ಯನು ತನ್ನ ಶಿಕ್ಷಣಕ್ಕಾಗಿ ಇಡೀ ಜೀವನವನ್ನು ಇತರರ ಮುಂದೆ ಸಮರ್ಪಿಸುತ್ತಾನೆ. ವಾಸ್ತವದಲ್ಲಿ ಈ ಶಿಕ್ಷಣವೇ ಅವನಿಗೆ ಪರೀಕ್ಷೆ ಸಹ ಆಗಿದೆ. ಆದುದರಿಂದ ಕೇವಲ ನನ್ನ ಪ್ರಭು ಅಲ್ಲಾಹನೆಂದು ಹೇಳಿದರೆ ಸಾಲದು. ಸಂದಿಗ್ಧ ಘಟ್ಟದಲ್ಲಿ ಅದನ್ನು ಪಾಲಿಸಬೇಕಾಗಿದೆ. ಕಷ್ಟಗಳನ್ನು ಎದುರಿಸುವಾಗ, ಯಾರದಾದರೂ ಹಣವನ್ನು ಅಪಹರಿಸಿ ತಿನ್ನುವಾಗ, ಅನ್ಯರನ್ನು ವಂಚಿಸುವಾಗ, ಶರೀಅತ್ ಪ್ರಕಾರ ಇತರರಿಗೆ ಸಿಗಬೇಕದ ಹಕ್ಕನ್ನು ಕಿತ್ತುಕೊಳ್ಳುವಾಗ ಕೆಲವರಿಗೆ ಸುಳ್ಳು 'ರಬ್ಬ್'(ಪ್ರಭು) ಆಗುತ್ತದೆ. ಇದು ಅತ್ಯಂತ ಕೆಟ್ಟ ಸ್ವಭಾವವಾಗಿದೆ. ಆದರೆ ಜನರು ಇದನ್ನು ಮನಗಾಣುವುದೇ ಇಲ್ಲ. ಕೆಲವರು ತಮ್ಮ ಸಹೋದರಿಯರ ಹಕ್ಕನ್ನು ಕಸಿದುಕೊಳ್ಳುತ್ತಾರೆ. ಕೆಲವರು ತಮ್ಮ ಸಹೋದರರ ಹಕ್ಕನ್ನು ಕಸಿದುಕೊಳ್ಳುತ್ತಾರೆ. ಇಂತಹ ಜನರಿಗೆ ಅಲ್ಲಾಹನ ದೃಷ್ಟಿಯಲ್ಲಿ ಏನೂ ಬೆಲೆಯಿಲ್ಲ. ಅನ್ಯರ ಹಕ್ಕನ್ನು ಸ್ವಾಧೀನಪಡಿಸುವುದು ಅತಿ ದೊಡ್ಡ ದುಸ್ಸ್ವಭಾವವಾಗಿದೆ. ಯಾರದಾದರೂ ಹಕ್ಕನ್ನು ಕಸಿದುಕೊಳ್ಳಬೇಕೆಂಬ ಚಿಂತೆಯಾಗಲಿ ಸತ್ಸ್ವಭಾವಿಗಳಿಗೆ ಇರಲಾರದು. ಅಷ್ಟೇ ಅಲ್ಲ, ಅವರು ಅನ್ಯರಿಗೋಸ್ಕರ ತಮ್ಮ ಹಕ್ಕನ್ನು ಸಹ ಬಿಟ್ಟುಕೊಡುವವರಾಗಿದ್ದಾರೆ. ಆದುದರಿಂದಲೇ ಈ ವಿಷಯವನ್ನು ಬಿಗಿಯಾಗಿ ಹಿಡಿಯಬೇಕೆಂದು ನಾನು ಹೇಳುವುದು. 'ರಬಿಯಲ್ಲಾಹ್' – ನನ್ನ ಪ್ರಭು, ಪರಿಪಾಲಕ ಅಲ್ಲಾಹನೆಂದು ಹೇಳುವಾಗ ಯಥಾರ್ಥದಲ್ಲಿ ಅದನ್ನು ನೀವು ಸ್ವಾಯತ್ತ ಮಾಡಿರಬೇಕು.

ವರದಿಗಾರ ಹೇಳುತ್ತಾರೆ: ನಾನು ಕೇಳಿದೆ: ತಾವು ನನಗೆ ಸಂಬಂಧಿಸಿ ಯಾವುದರ ಕುರಿತು ಭಯಪಡುತ್ತೀರಿ. ಪೈಗಂಬರ್(ಸ) ತನ್ನ ನಾಲಗೆಯ ಕಡೆಗೆ ಬೆರಳು ತೋರಿಸುತ್ತಾ ಹೇಳಿದರು: ಇದರ ಕುರಿತು.

ಇದರಿಂದ ಮನವರಿಕೆಯಾಗುವುದೇನೆಂದರೆ, ಶಿಷ್ಯರ ಸ್ಥಿತಿಯನ್ನು ತಿಳಿದುಕೊಂಡು ಪೈಗಂಬರ್(ಸ) ಅವರ ಪ್ರಶ್ನೆಗಳಿಗೆ ಉತ್ತರ ಕೊಡುತ್ತಿದ್ದರು. ಇಲ್ಲಿ ಪ್ರಶ್ನಿಸಿದ ವ್ಯಕ್ತಿ ದೊಡ್ಡ ವಾಚಾಳಿಯೂ ಕಠಿಣ ಪದಗಳನ್ನು ಪ್ರಯೋಗಿಸುವವನೂ ಆಗಿದ್ದನೆಂದು ತಿಳಿದುಬರುತ್ತದೆ. ಆದುದರಿಂದ ಪೈಗಂಬರ್(ಸ) ಆತನಿಗೆ ಬೇಕಾದ ರೀತಿಯಲ್ಲಿ ಉತ್ತರಕೊಟ್ಟರು. ಪೈಗಂಬರ್(ಸ) ಒಂದೇ ಪ್ರಶ್ನೆಗೆ ಹಲವು ರೀತಿಯಲ್ಲಿ ಉತ್ತರ ನೀಡಿರುವುದಾಗಿ ಕಾಣಬಹುದು. ಇದರಲ್ಲಿ ವೈರುದ್ಧ್ಯವೇನೂ ಇಲ್ಲ. ಒಬ್ಬನನ್ನು ತಿಳಿದುಕೊಳ್ಳುವ ಪೈಗಂಬರರ(ಸ) ಅಪಾರವಾದ ಶಕ್ತಿ ಇದರಿಂದ ಪ್ರಕಟವಾಗುತ್ತದೆ. ಪ್ರಶ್ನಿಸುವವನ ಉದ್ದೇಶ ಮತ್ತು ಆತನ ಸ್ವಭಾವವನ್ನು ಮನಗಂಡು ಅದಕ್ಕನುಸಾರವಾಗಿ ಪೈಗಂಬರ್(ಸ) ಕ್ಷಣಮಾತ್ರದಲ್ಲಿ ಉತ್ತರಿಸುತ್ತಿದ್ದರು.

ಹಝ್ರತ್ ಉಮ್ಮು ಹಬೀಬ(ರ) ವರದಿಮಾಡುತ್ತಾರೆ: ಪೈಗಂಬರ್(ಸ) ನುಡಿದ್ದಾರೆ: ಮನುಷ್ಯನ ಪ್ರತಿಯೊಂದು ಮಾತು ಅವನ ವಿರುದ್ಧವಾಗಿದೆ– ಒಳಿತನ್ನು ಉಪದೇಶಿಸುವುದು, ಕೆಡುಕನ್ನು ತಡೆಯುವುದು ಮತ್ತು ದೇವಸ್ಮರಣೆ ಹೊರತು.

ಇದೊಂದು ಬಹಳ ಚಿಂತಾರ್ಹವಾದ ವಿಚಾರವಾಗಿದೆ. ಮನುಷ್ಯನ ಎಲ್ಲ ವಿಚಾರ ಅವನಿಗೆದುರಾಗುವುದು; ಅವನಿಗೆ ಪ್ರಯೋಜನ ನೀಡದಿರುವುದು. ಆದರೆ ಒಳಿತು ಉಪದೇಶಿಸುವುದನ್ನು, ಕೆಡುಕು ತಡೆಯುವುದನ್ನು ಮತ್ತು ದೇವಸ್ಮರಣೆಯನ್ನು ಅದರಲ್ಲಿ ಸೇರಿಸಿಲ್ಲ. ಅವುಗಳನ್ನು ಹೊರತುಪಡಿಸಲಾಗಿದೆ. ಜನರನ್ನು ಒಳಿತಿನ ಕಡೆಗೆ ಕೊಂಡೊಯ್ಯುವಾಗ ಅದು ನಿಮಗೆ ವಿರುದ್ಧವಾಗಲಾರದು. ಕೆಡುಕನ್ನು ತಡೆಯುವಾಗ ಅದು ಸಹ ನಿಮಗೆ ವಿರುದ್ಧವಾಗಲಿಕ್ಕಿಲ್ಲ. ದೇವಸ್ಮರಣೆ ನಿಮಗೆ ವಿರುದ್ಧವಾಗುವ ಪ್ರಶ್ನೆಯೇ ಉದ್ಭವಿಸುವುದಿಲ್ಲ. ಆದರೆ ಕೆಲವೊಮ್ಮೆ ಒಳಿತನ್ನು ಉಪದೇಶಿಸುವುದರಿಂದ ಮತ್ತು ಕೆಡುಕನ್ನು ತಡೆಯುವುದರಿಂದ ಅವರು ಹಿಮ್ಮೆಟ್ಟುತ್ತಾರೆ. ಅದಕ್ಕೆ ಕಾರಣ ಅವರ ಭಯಭಕ್ತಿಯಾಗಿದೆ. ಏಕೆಂದರೆ, ಇತರರ ಕೆಡುಕನ್ನು ತಡೆಯಲು ತಮ್ಮ

ಕರ್ಮಗಳು ಸಾಕಷ್ಟು ಉತ್ತಮವಲ್ಲವೆಂದು ಅವರು ತಿಳಿದುಕೊಳ್ಳುತ್ತಾರೆ. ಆದರೆ, ಒಳಿತನ್ನು ಉಪದೇಶಿಸಬೇಕು, ಕೆಡುಕನ್ನು ತಡೆಯಬೇಕು ಎಂಬುದು ಅಲ್ಲಾಹನ ಆಜ್ಞೆಯಾಗಿದೆ ಎಂಬ ವಿಚಾರವನ್ನು ಅವರು ಮರೆತುಬಿಡುತ್ತಾರೆ. ಪ್ರತಿಯೊಬ್ಬರೂ ಅವರವರ ಕರ್ಮಗಳ ಆಳಕ್ಕೆ ಇಳಿದು ನೋಡುವಾಗ, ಇತರರನ್ನು ಯಾವುದಾದರೂ ವಿಚಾರದಲ್ಲಿ ತಡೆಯಲು ತಾವು ಅರ್ಹರಲ್ಲವೆಂದು ಅವರಿಗೆ ತೋಚಬಹುದು. ಆದರೆ ಪೈಗಂಬರರ(ಸ) ಆದೇಶಾನುಸಾರ ಕೆಡುಕನ್ನು ತಡೆಯವಾಗ ತನ್ನ ಕೆಡುಕುಗಳನ್ನು ಕಾಣಲು ತೊಡಗುವನು. ಒಳಿತನ್ನು ಉಪದೇಶಿಸುವಾಗ ತನ್ನ ಕರ್ಮಪುಸ್ತಕ ಕಣ್ಣ ಮುಂದೆ ಬರುವುದು. ಹಾಗೆ ನಿಮ್ಮಲ್ಲಿ ಸಹ ಸ್ಪಷ್ಟವಾದ ಅಭಿವೃದ್ಧಿಯುಂಟಾಗಲು ತೊಡಗುವುದು.

ಹಝ್ರತ್ ಇಬ್ನು ಉಮರ್(ರ) ವರದಿಮಾಡುತ್ತಾರೆ: ಹಝ್ರತ್ ಪೈಗಂಬರ್(ಸ) ನುಡಿದರು: "ಅಲ್ಲಾಹನು ತಿಳಿಸಿದ್ದಾನೆ – ನಾಲಗೆ ಜೇನಿಗಿಂತ ಮಧುರವಾಗಿರುವ ಮತ್ತು ಹೃದಯ ಬೇವಿಗಿಂತ ಕಹಿಯಾಗಿರುವ ಸೃಷ್ಟಿಗಳನ್ನು ನಾನು ಸೃಷ್ಟಿಸಿದ್ದೇನೆ."

ಹಝ್ರತ್ ಅಬೂಹುರೈರ(ರ) ವರದಿಮಾಡುತ್ತಾರೆ: ಪೈಗಂಬರ್(ಸ) ನುಡಿದರು: "ಅಲ್ಲಾಹನ ಸಂತೃಪ್ತಿಯನ್ನು ಆಶಿಸುತ್ತಾ ಯಾರಾದರೂ ಏನಾದರೂ ಮಾತನಾಡುವಾಗ – ಆತನು ಅದಕ್ಕೆ ಅಷ್ಟು ಪ್ರಧಾನತೆ ನೀಡದಿದ್ದರೂ ಅಲ್ಲಾಹನು ಆ ಕಾರಣದಿಂದ ಆತನ ಪದವಿಯನ್ನು ಉನ್ನತಗೊಳಿಸುತ್ತಾನೆ. ಅಲ್ಲಾಹನಿಗೆ ಕೋಪವನ್ನುಂಟುಮಾಡುವ ಏನಾದರೂ ಯಾರಾದರೂ ಮಾತನಾಡಿದರೆ, ಆ ಕಾರಣದಿಂದ ಅವನು ನರಕಕ್ಕೆ ಬೀಳುವನು."

ಹಝ್ರತ್ ಅಬೂಹುರೈರ(ರ) ವರದಿ ಮಾಡುತ್ತಾರೆ: ಅವರು ಹಝ್ರತ್ ಪೈಗಂಬರ್(ಸ) ಹೀಗೆ ನುಡಿದುದನ್ನು ಕೇಳಿದರು:

"ಕೆಲವು ಸಂದರ್ಭಗಳಲ್ಲಿ ಮನುಷ್ಯನು ಚಿಂತಿಸದೆ, ಆಲೋಚಿಸದೆ ಏನಾದರೂ ಹೇಳಿಬಿಡುವನು. ಆ ಕಾರಣದಿಂದ ಅವನು ನರಕದಲ್ಲಿ ಬೀಳುತ್ತಾನೆ. ನಿಜವಾಗಿ ಅವನಿಗೆ ಮತ್ತು ನರಕದ ಮಧ್ಯೆ ಪೂರ್ವ ಮತ್ತು ಪಶ್ಚಿಮಕ್ಕೆ ಮಧ್ಯೆ ಇರುವ ದೂರಕ್ಕಿಂತ ಹೆಚ್ಚು ದೂರವಿತ್ತು."

ಪವಿತ್ರ ಖುರ್‌ಆನ್ ಸಹ ಕಿಂವದಂತಿ ಹಬ್ಬಿಸುವುದನ್ನು ನಿಷೇಧಿಸಿದೆ. ಏನಾದರೂ ಕೇಳಿದರೆ ಕೂಡಲೇ ಅದನ್ನು ಇನ್ನೊಬ್ಬನ ಕಿವಿಗೆ ಹಾಕುವುದು ದೊಡ್ಡ ಪಾಪವಾಗಿದೆ. ತತ್ಫಲವಾಗಿ ಸಮೂಹದಲ್ಲಿ ಕಲಹಗಳು ಉಂಟಾಗುತ್ತವೆ. ಕೆಲವೊಮ್ಮೆ ನಿಷ್ಕಳಂಕರಾದ ಜನರ ಬಗ್ಗೆ ಇಲ್ಲದ ಸುಳ್ಳು ಸುದ್ದಿಗಳನ್ನು ಪ್ರಚಾರ ಮಾಡಲಾಗುತ್ತದೆ. ಆ ಕಾರಣದಿಂದ ಇಡೀ ಸಮೂಹ ಆತನ ಬಗ್ಗೆ ತಪ್ಪು ಭಾವಿಸುತ್ತದೆ. ನಿಷ್ಕಳಂಕರಾದ ಜನರ ಮೇಲೆ ದೋಷಾರೋಪಣೆ ಮಾಡುವವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲು ಪವಿತ್ರ ಖುರ್‌ಆನ್ ಆಜ್ಞಾಪಿಸುತ್ತದೆ. ಆದುದರಿಂದ ಸದಾ ಅಲ್ಲಾಹನೊಡನೆ ಕ್ಷಮೆ ಬೇಡುತ್ತಿರಬೇಕು.

ಉಖ್‌ಬ ಇಬ್ನು ಆಮಿರ್(ರ) ವರದಿ ಮಾಡುತ್ತಾರೆ. ಅವರು ಹೇಳುತ್ತಾರೆ: ಮೋಕ್ಷಕ್ಕೆ ಮಾರ್ಗವೇನೆಂದು ನಾನು ಪೈಗಂಬರರೊಡನೆ(ಸ) ಕೇಳಿದೆನು. ಪೈಗಂಬರ್(ಸ) ನುಡಿದರು: ನಿನ್ನ ನಾಲಗೆಗೆ ಕಡಿವಾಣ ಹಾಕು. ನಿನ್ನ ಮನೆಯವರು ನಿನಗೆ ಜಾಮೀನು ನೀಡುವವರಾಗಲಿ. ಮಾಡಿದ ತಪ್ಪುಗಳಿಗೋಸ್ಕರ ನೀನು ಅಳುತ್ತಿರು."

ಮುಸ್ನದ್ ಅಹ್ಮದ್ ಇಬ್ನು ಹಂಬಲ್ ಮೂಲಕ ದೊರೆತ ಒಂದು ಹದೀಸ್ ಹೀಗಿದೆ: ಹಝ್ರತ್ ಅನಸ್ ಇಬ್ನು ಮಾಲಿಕ್(ರ) ವರದಿ ಮಾಡುತ್ತಾರೆ: ಪೈಗಂಬರ್(ಸ) ಹೀಗೆ ನುಡಿದಿದ್ದಾರೆ: "ಹೃದಯ ಶುದ್ಧವೂ ನೇರವೂ ಅಲ್ಲದ ಒಬ್ಬನ ವಿಶ್ವಾಸ ಶುದ್ಧವಾಗಿರದು. ನಾಲಗೆ ನೇರವಾಗಿರದೆ ಇರುವ ತನಕ ಅವನ ಹೃದಯ ಸಹ ನೇರವಾಗಿ ಇರಲಾರದು. ನೆರೆಕರೆಯವರನ್ನು ಉಪದ್ರವಿಸುವವನು ಸ್ವರ್ಗದಲ್ಲಿ ಪ್ರವೇಶಿಸಲಾರ."

ಕ್ರಮ ಪ್ರಕಾರ ಹೇಳಿದ ಈ ವಿಚಾರಗಳಲ್ಲಿ ಅಡಕವಾಗಿರುವುದು ಏನೆಂದು ಚಿಂತನೆ ಮಾಡಬೇಕಾಗಿದೆ. ಹೃದಯ ಶುದ್ಧವಾಗದೆ ಈಮಾನ್ (ವಿಶ್ವಾಸ) ಶುದ್ಧವಾಗಿರಲಿಕ್ಕಿಲ್ಲ. ನಾಲಗೆ ಶುದ್ಧವಾಗದೆ ಹೃದಯ ಶುದ್ಧವಾಗಲಾರದು. ಇದು ಎರಡು ಸಹ ಒಂದು ಮತ್ತೊಂದರೊಂದಿಗೆ ಜೋಡಿಸಲ್ಪಟ್ಟಿದೆ. ಹೃದಯ ಶುದ್ಧವಲ್ಲದಿದ್ದರೆ ನಾಲಗೆ ಮೂಲಕ ಹೊರಗೆ ಬರುವುದೆಲ್ಲ ಅಶುದ್ಧಿ ತುಂಬಿಕೊಂಡಿರುವುದು. ನಾಲಗೆ ಅಶುದ್ಧವಾದರೆ ಅಂತಹವನ ಹೃದಯ ಶುದ್ಧವಾಗಿರಲಿಕ್ಕಿಲ್ಲ. ಹೃದಯ ಅಶುದ್ಧ ಮತ್ತು ನಾಲಗೆ ಪರಿಶುದ್ಧವಾಗುವುದು ಅಸಂಭ್ಯಾವ್ಯವಾಗಿದೆ.

ನೆರೆಕರೆಯವನು ತನ್ನ ನೆರೆಮನೆಯವರ ಕುರಿತು ಚೆನ್ನಾಗಿ ತಿಳಿದಿರುತ್ತಾನೆ. ವಿಶ್ವಾಸ ವಂಚನೆ ಮಾಡಿದರೆ ಅದನ್ನು ಸಹ ನೆರೆಮನೆಯವನು ತಿಳಿಯುತ್ತಾನೆ. ವಿವಾಹ ಸಮಾಲೋಚನೆ ವೇಳೆಗಳಲ್ಲಿ ಹೆಚ್ಚಾಗಿ ಹೆಣ್ಣಿನ ಅಥವಾ ಗಂಡಿನ ನೆರೆಮನೆಗೆ ಹೋಗಿ ವಿಚಾರಿಸುವುದು ಸಾಮಾನ್ಯವಾಗಿ ರೂಢಿಯಲ್ಲಿರುವ ರೀತಿಯಾಗಿದೆ. ಕಾರಣವೇನೆಂದರೆ, ಅವರು ಸತ್ಯವನ್ನು ಹೇಳುತ್ತಾರೆ. ಆದುದರಿಂದ ಪೈಗಂಬರರು(ಸ) ಮೂರನೆಯದಾಗಿ ನೆರೆಕರೆಯವರ ಕುರಿತು ನುಡಿದಿದ್ದಾರೆ.

ಮುಸ್ನದ್ ಅಹ್ಮದ್ ಇಬ್ನು ಹಂಬಲ್‌ನಿಂದ ಬಂದ ಇನ್ನೊಂದು ಹದೀಸನ್ನು ಅಬೂ ಹುರೈರ(ರ) ವರದಿ ಮಾಡಿದ್ದಾರೆ. ಪೈಗಂಬರ್(ಸ) ಹೀಗೆ ನುಡಿದುದಾಗಿ ಅವರು ಹೇಳಿದರು:

"ಯಾವ ಮುಸ್ಲಿಮನ ಕೈಯಿಂದ ಮತ್ತು ನಾಲಗೆಯಿಂದ ಜನರು ಸುರಕ್ಷಿತರೋ ಆತನು ಯಥಾರ್ಥ ಮುಸ್ಲಿಂ. ಯಾರ ಕೈಯಲ್ಲಿ ಜನರು ಅವರ ಜೀವ ಮತ್ತು ಧನವನ್ನು ವಿಶ್ವಾಸದಿಂದ ಒಪ್ಪಿಸುತ್ತಾರೋ ಆತನು ಯಥಾರ್ಥ ವಿಶ್ವಾಸಿ." ಅಂದರೆ ಯಾರ ಸಂಬಂಧಿಸಿ ವಿಶ್ವಾಸ ವಂಚನೆ ಮಾಡಲಿಕ್ಕಿಲ್ಲವೆಂದು ಖಾತರಿ ಇದೆಯೋ ಅವನೇ ಯಥಾರ್ಥ ಮೂಮಿನ್ (ವಿಶ್ವಾಸಿ).

ಅಬೂಹುರೈರ(ರ) ವರದಿಮಾಡುತ್ತಾರೆ. ಹಝ್ರತ್ ಪೈಗಂಬರ್(ಸ) ನುಡಿದರು: "ಅಲ್ಲಾಹನಲ್ಲಿ ಮತ್ತು ಪುನರುತ್ಥಾನ ದಿನದಲ್ಲಿ ನಂಬಿಕೆಯುಳ್ಳವನು ಒಳ್ಳೆಯ ಮಾತನ್ನು ಹೇಳಬೇಕು ಅಥವಾ ಮೌನ ಪಾಲಿಸಬೇಕು. ಅಲ್ಲಾಹನಲ್ಲಿ ಮತ್ತು ಪುನರುತ್ಥಾನದಲ್ಲಿ ನಂಬಿಕೆಯುಳ್ಳವನು ನೆರೆಕರೆಯವನಿಗೆ ಉಪದ್ರವಿಸಬಾರದು. ಅಲ್ಲಾಹನಲ್ಲಿ ಮತ್ತು ಪುನರುತ್ಥಾನದಲ್ಲಿ ನಂಬಿಕೆಯುಳ್ಳವನು ಅತಿಥಿಗಳನ್ನು ಗೌರವಿಸಬೇಕು."

ಒಳ್ಳೆಯ ಮಾತನ್ನು ಹೇಳುವುದು ಸಹ ಸದಖ (ದಾನಧರ್ಮ) ಆಗಿದೆ. ಒಳ್ಳೆಯ ಮಾತನ್ನು ಹೇಳಲಾಗದಿದ್ದರೆ ಮೌನ ಪಾಲಿಸುವುದು ಉತ್ತಮ. ಕಾರಣವೇನೆಂದರೆ, ಕೆಟ್ಟ ಮಾತು ಬಾಯಿಯಿಂದ ಹೊರಟರೆ ಅದು ಮನುಷ್ಯನನ್ನು ನಿಂದಿತನೂ ಪಾಪಿಯೂ ಆಗಿ ಮಾಡುವುದು.

ಅಬೂ ಅಯ್ಯೂಬ್ ಅನ್‌ಸಾರಿ(ರ) ವರದಿಮಾಡುತ್ತಾರೆ: ಒಬ್ಬನು ಹಝ್ರತ್ ಪೈಗಂಬರರ(ಸ) ಸನ್ನಿಧಿಗೆ ಬಂದನು. ಎಲ್ಲ ವಿಚಾರಗಳು ಒಳಗೊಂಡ ಏನಾದರೂ ಹೇಳಿಕೊಡಬೇಕೆಂದು ಆತನು ಅಪೇಕ್ಷಿಸಿದನು. ಪೈಗಂಬರ್(ಸ) ಹೇಳಿದರು: "ನೀನು ನಮಾಝ್ ಮಾಡುವಾಗ, ಅದು ನಿನ್ನ ಕೊನೆಯ ನಮಾಝ್ ಎಂದು ಊಹಿಸಿಕೊಂಡು ನಮಾಝ್ ಮಾಡು. ನಂತರ ಪಶ್ಚಾತ್ತಾಪ ಪಡುವ ರೀತಿಯಲ್ಲಿ ಯಾರೊಡನೆಯೂ ಮಾತನಾಡದಿರು. ಅನ್ಯರ ಕೈಯಲ್ಲಿರುವುದನ್ನು ಆಶಿಸಬೇಡ."

ಆದುದರಿಂದ ನಮಾಝ್‌ನಲ್ಲಿ ಎಷ್ಟರ ಮಟ್ಟಿಗೆ ಕ್ಷಮೆ ಬೇಡಲು ಸಾಧ್ಯವೋ ಅಷ್ಟರ ಮಟ್ಟಿಗೆ ನೀವು ಕ್ಷಮೆ ಬೇಡಿರಿ. ಮುಂದಿನ ನಮಾಝ್ ವರೆಗೆ ಬದುಕಿರಬಹುದೋ ಎಂದು ಹೇಳಲಾಗದು. ನಮಾಝ್‌ನಲ್ಲಿ ಪಾಪದ ಸಂಖ್ಯೆ ಕಡಿಮೆಯಾಗುವಾಗ ಹೊರಗೆ ಬಂದರೆ ಅದು

ಹೆಚ್ಚಾಗುವುದು.

ಇದು ಬಹಳ ಪ್ರಿಯವಾದೊಂದು ಉಪದೇಶವಾಗಿದೆ. ಅಂದರೆ ನೀವು ಮಾಡುವ ನಮಾಝ್ ನಿಮ್ಮ ಕೊನೆಯ ನಮಾಝ್ ಎಂದು ಭಾವಿಸಿ ನಮಾಝ್ ಮಾಡಿರಿ. ಅದರ ಬಳಿಕ ಹೇಳಿದರು: ಅನ್ಯರ ಕೈಯಲ್ಲಿರುವುದನ್ನು ಆಶಿಸಬಾರದು. ಅಂದರೆ ಉಪಜೀವನ, ಪ್ರತೀಕ್ಷೆ, ಆಶೆ-ಇವೆಲ್ಲವನ್ನು ಮನುಷ್ಯರಿಂದಲೇ ಬೇಡುವುದಾದರೆ, ಅಲ್ಲಾಹನು ನಮ್ಮ ಪ್ರಭುವೆಂದು ಹೇಳಲು ಸಾಧ್ಯವಿಲ್ಲ.

ಅಬೂದರ್‌ದಾ(ರ) ವರದಿ ಮಾಡುತ್ತಾರೆ. ಹಝ್ರತ್ ಪೈಗಂಬರ್(ಸ) ನುಡಿದರು: "ಪುನರುತ್ಥಾನ ದಿನದಂದು ವಿಶ್ವಾಸಿಯ ತ್ರಾಸಿನಲ್ಲಿ ಸುಸ್ವಭಾವಕ್ಕಿಂತ ಭಾರವಿರುವ ಯಾವ ಕರ್ಮವೂ ಇರಲಿಕ್ಕಿಲ್ಲ." ಅಂದರೆ, ಅಲ್ಲಾಹನು ಕರ್ಮಗಳ ಲೆಕ್ಕಮಾಡುತ್ತಾನೆ. ಆಗ ಉತ್ತಮ ಸ್ವಭಾವದ ಆಧಾರದಲ್ಲಿ ಭಾರವಿರುವ ತಟ್ಟೆಯ ಒಡೆಯ ಸ್ವರ್ಗದ ಹಕ್ಕುದಾರ ನಾಗುವನು.

ಜಾಬಿರ್(ರ) ವರದಿ ಮಾಡುತ್ತಾರೆ. ಹಝ್ರತ್ ಪೈಗಂಬರರು(ಸ) ನುಡಿದರು: "ನಿಮ್ಮ ಪೈಕಿ ಸದ್ಗುಣ ಸಂಪನ್ನನಾದವನು ಪುನರುತ್ಥಾನ ದಿನದಂದು ನನಗೆ ಅತಿ ಪ್ರೀತಿಯವನೂ ನನಗೆ ಅತಿ ಸಮೀಪದವನೂ ಆಗುವನು. ಅಮಿತವಾಗಿ ಮಾತನಾಡುವವನೂ ತಮಾಷೆ ಮಾತನಾಡುವವನೂ ಅಹಂಕರಿಸುವವನೂ ಪುನರುತ್ಥಾನ ದಿನದಂದು ನನಗೆ ತೀರಾ ಇಷ್ಟವಿಲ್ಲದವನೂ ನನ್ನಿಂದ ಬಹಳ ದೂರದಲ್ಲಿರುವವನೂ ಆಗುವನು.

ತಮಾಷೆ ಮಾತನಾಡುವುದು ಪೈಗಂಬರರ(ಸ) ಸ್ವಭಾವದಲ್ಲಿತ್ತು. ಆದರೆ, ಆಲೋಚಿಸದೆ, ವಿಷಯವನ್ನು ಮನವರಿಕೆ ಮಾಡದೆ ಇತರರನ್ನು ನಗಿಸಲಿಕ್ಕೋಸ್ಕರ ಜನರ ಲೋಪದೋಷಗಳನ್ನು ಹೇಳಿ ರಂಜಿಸುವುದು ಇಲ್ಲಿ ತಮಾಷೆ ಎಂದು ಹೇಳಿದುದರ ಉದ್ದೇಶ. ಇದು ಬಹಳ ಕೆಟ್ಟ ಸ್ವಭಾವವಾಗಿದೆ. ಇದರಿಂದ ಅಗಲಿ ನಿಲ್ಲಬೇಕಾಗಿದೆ.

ಮಸ್ರೂರ್(ರ) ವರದಿ ಮಾಡುತ್ತಾರೆ. ಅವರು ಹೇಳಿದರು: ಮುಆವಿಯ(ರ) ಕೂಫದಿಂದ ಬಂದಾಗ ನಾವು ಅಬ್ದುಲ್ಲಾಹ್ ಇಬ್ನು ಉಮರ್‌ರವರ ಸಮೀಪಕ್ಕೆ ಹೋದೆವು. ಅವರು ಪೈಗಂಬರರನ್ನು(ಸ) ಸ್ಮರಿಸಿಕೊಂಡು ಹೇಳಿದರು: ಹಝ್ರತ್ ಪೈಗಂಬರ್(ಸ) ಸಭ್ಯೇತರ ವಿಚಾರ ಹೇಳುತ್ತಿರಲಿಲ್ಲ. ಅದನ್ನು ಆಲಿಸಲಿಕ್ಕೆ ಕೂಡ ಇಷ್ಟಪಡಲಿಲ್ಲ. ಅವರು ಹೇಳಿದರು: ಹಝ್ರತ್ ಪೈಗಂಬರ್(ಸ) ನುಡಿದರು: ಯಾರು ಸುಸ್ವಭಾವಗಳಲ್ಲಿ ಉತ್ತಮನು ಅವನೇ ನಿಮ್ಮ ಪೈಕಿ ಉತ್ತಮನು.

ಅಬೂ ಹುರೈರ(ಸ) ವರದಿಮಾಡುತ್ತಾರೆ. ಅವರು ಹೇಳಿದರು: ಹಝ್ರತ್ ಪೈಗಂಬರರೊಡನೆ(ಸ), ಸ್ವರ್ಗಕ್ಕೆ ಜನರನ್ನು ಹೆಚ್ಚು ಹೆಚ್ಚಾಗಿ ಕೊಂಡೊಯ್ಯಲು ಅನುಕೂಲವಾಗುವ ಏನಾದರೂ ವಿಚಾರವಿದೆಯೇ ಎಂದು ಪ್ರಶ್ನಿಸಲಾಯಿತು. ಪೈಗಂಬರ್(ಸ) ನುಡಿದರು: "ಅಲ್ಲಾಹನ ಮೇಲಿರುವ ಭಯಭಕ್ತಿ ಮತ್ತು ಸತ್ಸ್ವಭಾವ. ನಂತರ, ಜನರನ್ನು ಹೆಚ್ಚು ಹೆಚ್ಚಾಗಿ ನರಕದೆಡೆಗೆ ಕೊಂಡೊಯ್ಯಲು ಕಾರಣವಾಗುವುದೇನೆಂದು ಪ್ರಶ್ನಿಸಲಾಯಿತು. ಪೈಗಂಬರ್(ಸ) ನುಡಿದರು: ಮನುಷ್ಯನ ನಾಲಗೆ ಮತ್ತು ಗುಪ್ತಾಂಗ.

ಇನ್ನು ನಾನು ಈ ವಿಷಯದ ಬಗ್ಗೆ ಹಝ್ರತ್ ಮಸೀಹ್ ಮೌಊದ್(ಅ) (ಅಹ್ಮದಿಯಾ ಜಮಾಅತಿನ ಸ್ಥಾಪಕರು) ಅವರ ವಚನಗಳನ್ನು ಓದಿ ಹೇಳುತ್ತೇನೆ. ಅವರು ಹೇಳುತ್ತಾರೆ:

"ನಿಮ್ಮ ನಾಲಗೆ ನಿಮ್ಮ ನಿಯಂತ್ರಣದಲ್ಲಿರಬೇಕಾಗಿದೆ. ನಿಮ್ಮ ನಾಲಗೆಗಳು ನಿರರ್ಥಕ ಮತ್ತು ಅನಾವಶ್ಯಕವಾದ ಎಲ್ಲ ವಿಚಾರಗಳಿಂದ ಅಗಲಿ ನಿಲ್ಲಬೇಕಾಗಿದೆ. ಸುಳ್ಳು ಇಂದು ಸರ್ವೇಸಾಮಾನ್ಯವಾಗಿದೆ. ಅದಕ್ಕೆ ಮಿತಿಯಿಲ್ಲ. ಸಾಧುಗಳೂ ಮೌಲವಿಗಳೂ ಕತೆಗಾರರೂ ಉಪದೇಶಕರೂ ಅಲ್ಲಾಹನಿಗೆ ಭಯಪಡದೆ ಅವರ ವಿವರಣೆಗಳಲ್ಲಿ ಸುಳ್ಳು ಹೇಳುತ್ತಾರೆ. ಹೀಗೆ ರಾಜ್ಯದಲ್ಲಿ ಹರಡಿಕೊಂಡಿರುವ ಇನ್ನಿತರ ಅನೇಕ ಪಾಪಗಳು ಸಹ ಇವೆ."

ಈ ಕಾಲದಲ್ಲಿ ಪಾಕಿಸ್ತಾನದ ಅತಿದೊಡ್ಡ ಶಾಪ ಅಲ್ಲಿಯ ಮೌಲವಿಗಳ ಸುಳ್ಳು ಆಗಿದೆ.

ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: "ಸ್ವಭಾವವನ್ನು ಉತ್ತಮಗೊಳಿಸುವುದು ಪ್ರಯಾಸಕರವಾಗಿದೆ. ಮನುಷ್ಯನು ಸ್ವಯಂ ತನ್ನ ಬಗ್ಗೆ ಕಲಿಯದಿರುವ ತನಕ ಅದು ಸಾಧ್ಯವಿಲ್ಲ."

ಮನುಷ್ಯನು ಸದಾ ಜಾಗರೂಕನಾಗಿರಬೇಕಾಗಿದೆ. ಏನಾದರೂ ಮಾಡುವುದಕ್ಕಿಂತ ಮುಂಚೆ ಅದರ ಕುರಿತು ಕೂಲಂಕಷವಾಗಿ ಚಿಂತನೆ ಮಾಡಬೇಕು. ಅಥವಾ ಏನಾದರೂ ಮಾಡಿಬಿಟ್ಟಿದ್ದರೆ ಅದರ ಕುರಿತು ಚಿಂತಿಸುತ್ತಿರಬೇಕು. ಜಾನುವಾರು ಮೊದಲಾದ ಮೃಗಗಳು ಮೆಲುಕಾಡುತ್ತವೆ. ಇದು ಸಹ ಅಂತಹದ್ದೊಂದು. ಆಡಿದ್ದ ಮಾತುಗಳ ಬಗ್ಗೆ ಚಿಂತಿಸುತ್ತಾ ಇದ್ದರೆ ಸ್ವಯಂ ಸುರಕ್ಷಿತನಾಗಬಹುದು. ಮಾಡಿದ ತಪ್ಪಿಗೋಸ್ಕರ ಪಶ್ಚಾತ್ತಾಪಪಟ್ಟು ಮರಳಿರಿ. ಮನುಷ್ಯನು ಸ್ವಯಂ ತನ್ನ ಕುರಿತು ಕಲಿಯದಿರುವ ತನಕ ಅವನು ಸರಿಯಾಗಲಿಕ್ಕಿಲ್ಲ.

ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: "ನಾಲಗೆಯ ದುಸ್ಸ್ವಭಾವಗಳು ಶತ್ರುತ್ವ ಉಂಟುಮಾಡುತ್ತದೆ. ಆದುದರಿಂದ ನಾಲಗೆಯನ್ನು ಸದಾ ನಿಯಂತ್ರಿಸಬೇಕಾಗಿದೆ. ತಾನು ಒಳಿತು ಮಾಡಬೇಕೆಂದು ಮನವರಿಕೆ ಮಾಡುವವನ ಕುರಿತು ಯಾರೂ ದೂಷಣೆ ಮಾಡಲಿಕ್ಕಿಲ್ಲ. ತನ್ನೊಡನೆ ಕರುಣೆ ತೋರಿಸದೆ ಸ್ವಯಂ ಕಲಹಗಳಲ್ಲಿ ತೊಡಗುವ ಮನುಷ್ಯನು ಎಷ್ಟು ನಿರ್ಭಾಗ್ಯವಂತ; ಅವನು ಸ್ವಂತ ಇಷ್ಟದಲ್ಲಿ ಒಳ್ಳೆಯ ಕೆಲಸ ಮಾಡುವುದಿಲ್ಲ. ಧಾರ್ಮಿಕ ಪರವಾದ ಶಕ್ತಿಗಳಿಗೆ ಶಿಕ್ಷಣ ಕೊಡುವುದೂ ಇಲ್ಲ. ಪ್ರತಿಯೊಬ್ಬನೂ ಒಳ್ಳೆಯ ಸ್ವಭಾವದಲ್ಲಿ ವರ್ತಿಸಬೇಕಾಗಿದೆ."

ನಮಾಝ್‌ನಲ್ಲಿ ನಾವು ನಿತ್ಯವೂ ಹೇಳುವ "ಇಯ್ಯಾಕ ನಅ್‌ಬುದು" ಎಂಬ ಪ್ರಾರ್ಥನೆಯ ಕುರಿತು ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ:

"ಅಲ್ಲಾಹನು ಇಯ್ಯಾಕ ನಅ್‌ಬುದು ಎಂದು ಹೇಳಲು ಆದೇಶಿಸಿದ್ದಾನೆ. ಮನುಷ್ಯನು ತನ್ನ ಶಕ್ತಿಯಲ್ಲಿ ಸರ್ವವನ್ನೂ ಅರ್ಪಣೆ ಮಾಡಲಿಕ್ಕೂ ಹಾಗೆ ದೇವನಿಂದ ಅಗಲಿ ಹೋಗಲಿಕ್ಕೂ ಸಾಧ್ಯತೆ ಇರುವುದರಿಂದ ಕೂಡಲೇ ವ ಇಯ್ಯಾಕ ನಸ್ತಈನ್ ಎಂದು ಹೇಳಲಿಕ್ಕೂ ಆದೇಶಿಸಿದನು. ಅಂದರೆ, ನಾವು ನಿನ್ನನ್ನು ಮಾತ್ರ ಆರಾಧಿಸುತ್ತೇವೆ. ನಿನ್ನಿಂದ ಮಾತ್ರ ಸಹಾಯ ಯಾಚಿಸುತ್ತೇವೆ. ಅಲ್ಲಾಹನ ಸಹಾಯವಿಲ್ಲದೆ ಆರಾಧನೆ ಮಾಡಲು ಯಾರಿಗೂ ಸಾಧ್ಯವಿಲ್ಲ. ನಾನು ಹೇಳುವ ಈ ವಿಚಾರಗಳು ನನ್ನ ಸ್ವಂತ ಶಕ್ತಿ ಸಾಮರ್ಥ್ಯದಿಂದ ಹೇಳುವುದೆಂದು ನೀವು ತಿಳಿದುಕೊಳ್ಳಬಾರದು. ಎಂದಿಗೂ ಇಲ್ಲ. ಪರಿಶುದ್ಧನಾದ ಅಲ್ಲಾಹನ ಸಹಾಯವಿಲ್ಲದೆ ಏನೂ ನಡೆಯಲಾರದು.

"ಇಯ್ಯಾಕ ಅಅ್‌ಬುದು ವ ಇಯ್ಯಾಕ ಅಸ್ತಈನ್ ಎಂದು ಹೇಳಲು ಅಲ್ಲಾಹನು ಆದೇಶಿಸಲಿಲ್ಲ. ಅಂದರೆ, ನಾನು ನಿನ್ನನ್ನು ಮಾತ್ರ ಆರಾಧಿಸುತ್ತೇನೆ. ನಿನ್ನಿಂದ ಮಾತ್ರ ಸಹಾಯ ಯಾಚಿಸುತ್ತೇನೆ. ನಿನ್ನನ್ನು ಬಿಟ್ಟು ಯಾರೊಡನೆಯೂ ನಾನು ಸಹಾಯ ಯಾಚಿಸುವುದಿಲ್ಲ. ಸದಾ ನಿನ್ನಿಂದಲೇ ನಾನು ಸಹಾಯ ಬೇಡುತ್ತಿದ್ದೇನೆ. ಇದು ಒಳ್ಳೆಯದೇ. ಆದರೆ ಇಲ್ಲಿ ಇತರರನ್ನು ಮರೆತು ಬಿಡುವ ಒಂದು ಸ್ಥಿತಿಯುಂಟಾಗುತ್ತದೆ." ಮನುಷ್ಯನು ಸ್ವಾರ್ಥಿಯಾಗಬಾರದು. ಆದುದರಿಂದ ಸ್ವಾರ್ಥತೆಯನ್ನು ನಿರ್ಮೂಲನ ಮಾಡುವ ರೀತಿಯಲ್ಲಿ ಪವಿತ್ರ ಖುರ್‌ಆನ್ ಪ್ರಾರ್ಥನೆ

# ಮಸೀದಿ – ಶಾಂತಿಧಾಮ

## ಕೆನಡದಲ್ಲಿ ಅತಿ ದೊಡ್ಡ ಮಸೀದಿ ಉದ್ಘಾಟನೆ

**ಕ್ಯಾಲಗರಿ ನಗರದಲ್ಲಿ ನಿರ್ಮಿಸಲಾದ ಕೆನಡದ ಅತ್ಯಂತ ದೊಡ್ಡ ಮಸ್‌ಜಿದ್ ಬೈತುನ್ನೂರ್ 4-7-2008ರಂದು ಉದ್ಘಾಟನೆ ಮಾಡುತ್ತಾ ಅಹ್ಮದಿಯಾ ಪಂಚಮ ಖಲೀಫ (ಖಲೀಫತುಲ್ ಮಸೀಹ್ ಖಾಮಿಸ್) ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್ ಸಾಹೇಬ್ ಮಾಡಿದ ಭಾಷಣ.**

ಅಲ್ಲಾಹನ ಅನುಗ್ರಹದಿಂದ ಅಹ್ಮದಿಯಾ ಮುಸ್ಲಿಮ್ ಸಂಘಟನೆ ಕ್ಯಾಲಗರಿಯಲ್ಲಿ ನಿರ್ಮಿಸಿದ ಮಸ್‌ಜಿದನ್ನು ಉದ್ಘಾಟಿಸಲು ನಾವೆಲ್ಲರೂ ಇಲ್ಲಿ ಜಮಾಯಿಸಿದ್ದೇವೆ. ಇಸ್ಲಾಂ ಧರ್ಮ ಪ್ರಕಾರ ಮಸ್‌ಜಿದ್‌ನ ಮಹತ್ವ ಮತ್ತು ಅದರ ನಿರ್ಮಾಣದ ಉದ್ದೇಶಗಳ ಕುರಿತು ನಾನು ಪ್ರಸ್ತಾಪಿಸಲು ಪ್ರಾರಂಭಿಸುವ ಮೊದಲು, ಸಮಯಾವಕಾಶ ಮಾಡಿಕೊಂಡು ಇಲ್ಲಿಗೆ ಆಗಮಿಸಿದ ಗಣ್ಯ ಮಹನೀಯರಿಗೆ ನಾನು ಕೃತಜ್ಞತೆ ಅರ್ಪಿಸುತ್ತೇನೆ. ನೀವು ಇಲ್ಲಿ ಉಪಸ್ಥಿತರಿರುವುದು ನೀವು ಹೊಂದಿರುವ ವಿಶಾಲ ಹೃದಯಕ್ಕೆ ಸಾಕ್ಷಿಯಾಗಿದೆ. ಎಲ್ಲಾ ಧರ್ಮಗಳ ಜನರು ಸೌಹಾರ್ದದಿಂದ ಬಾಳುವ ಒಂದು ಉತ್ತಮ ಉದಾಹರಣೆ ಇದಾಗಿದೆ. ನಮ್ಮ ಈ ಪ್ರಯತ್ನಗಳು ನಮ್ಮ ಮಧ್ಯೆ ಇರುವ ಸಂಬಂಧಗಳನ್ನು ವರ್ಧಿಸಲು ಮತ್ತು ವಿಶಾಲಗೊಳಿಸಲು ಸಹಕಾರಿಯಾಗಲಿ. ಅಹ್ಮದಿಯಾ ಜಮಾಅತ್ ಇಂತಹ ಬಾಂಧವ್ಯಗಳನ್ನು ಬೆಳೆಸಲು ನಿರಂತರವಾಗಿ ಪ್ರಯತ್ನ ಮಾಡುತ್ತಾ ಇದೆ ಎಂದು ನೀವು ನಿಶ್ಚಯವಾಗಿಯೂ ತಿಳಿದಿರುವಿರಿ. ನಮ್ಮ ಪ್ರಯತ್ನಗಳ ಫಲವಾಗಿ ಜನರ ವಿವಿಧ ಗುಂಪುಗಳು, ವಿವಿಧ ವರ್ಣಗಳ ಜನರು, ವಿವಿಧ ಜನಾಂಗಗಳ ಜನರು, ವಿವಿಧ ಸಾಮಾಜಿಕ ಮತ್ತು ಧಾರ್ಮಿಕ ಹಿನ್ನಲೆಗಳುಳ್ಳ ಜನರು ಇಲ್ಲಿ ಒಟ್ಟಿಗೆ ಸೇರಿದ್ದಾರೆ. ಪರಸ್ಪರರ ಭಾವನೆಗಳನ್ನು ಮತ್ತು ಸಂವೇದನೆಗಳನ್ನು ಗೌರವಿಸುತ್ತಾ, ಮಸ್‌ಜಿದ್ ಉದ್ಘಾಟನೆಯಾದ ಕಾರಣ ಇದೊಂದು ಧಾರ್ಮಿಕ ಸಮಾರಂಭವಾಗಿದ್ದರೂ ನಾವೆಲ್ಲರೂ ಇಲ್ಲಿ ಮಾನವೀಯತೆಯ ಹೆಸರಲ್ಲಿ ಜಮಾಯಿಸಿದ್ದೇವೆ.

ಅಹ್ಮದಿಯಾ ಮುಸ್ಲಿಮ್ ಜಮಾಅತಿನ ಜನರು ತಮ್ಮ ಜಮಾಅತಿನ ಸ್ಥಾಪಕರಾದ ವಾಗ್ದತ್ತ ಮಸೀಹ್‌ರವರ(ಅ) ಹೆಸರಿನಲ್ಲಿ ಮತ್ತು ಹಸ್ತದಲ್ಲಿ ಒಗ್ಗೂಡಿ ಜೀವಿಸುತ್ತಾರೆ. "ಎಲ್ಲರೊಂದಿಗೆ ಸ್ನೇಹ, ಯಾರೊಂದಿಗೂ ದ್ವೇಷವಿಲ್ಲ" ಎಂಬ ಅವರ ಘೋಷಣೆಯಂತೆ ಅವರ ವರ್ತನೆಗಳು ಕೃತಿರೂಪಕ್ಕೆ ಇಳಿಸಲ್ಪಡುತ್ತಿವೆ. ನಾನು ಹೇಳಿದ ವ್ಯತ್ಯಾಸಗಳು ನಮ್ಮೆಲ್ಲರ ಮಧ್ಯೆ ಇದ್ದರೂ ನೀವೆಲ್ಲರೂ ನಮ್ಮ ಆಹ್ವಾನವನ್ನು ಅಂಗೀಕರಿಸಿ ಇಲ್ಲಿಗೆ ಆಗಮಿಸಿದುದಕ್ಕಾಗಿ ನಾನು ನಿಮಗೆಲ್ಲರಿಗೂ ಹೃತ್ಪೂರ್ವಕ ಕೃತಜ್ಞತೆಯನ್ನು ಅರ್ಪಿಸುತ್ತೇನೆ. ಸರ್ವಶಕ್ತನಾದ ಅಲ್ಲಾಹನು ನಿಮಗೆ ಇದಕ್ಕಾಗಿ ಅನುಗ್ರಹವನ್ನು ದಯಪಾಲಿಸಲಿ.

ಮಸ್‌ಜಿದ್ ನಿರ್ಮಾಣದ ಉದ್ದೇಶವೇನೆಂದು ನಾನೀಗ ವಿವರಿಸಲು ಬಯಸುತ್ತೇನೆ.

ನಮ್ಮ ಮಸ್‌ಜಿದ್‌ಗಳು ಅರೇಬಿಯದ ಮಕ್ಕದಲ್ಲಿ ನಿರ್ಮಿಸಲ್ಪಟ್ಟ ಅಲ್ಲಾಹನ ಪ್ರಥಮ ಪವಿತ್ರ ಆರಾಧನಾಲಯವಾದ ಕಅ್‌ಬದ ಮಾದರಿಗನುಸಾರವಾಗಿ ನಿರ್ಮಿಸಲ್ಪಡುತ್ತವೆ. ಕಅ್‌ಬದ ಪುನರ್ ನಿರ್ಮಾಣಕ್ಕಾಗಿ ಹಝ್ರತ್ ಪ್ರವಾದಿ ಇಬ್ರಾಹೀಮ್(ಅ) ತನ್ನ ಪುತ್ರ ಹಝ್ರತ್ ಪ್ರವಾದಿ ಇಸ್ಮಾಈಲ್‌ರೊಂದಿಗೆ(ಅ) ಅಸ್ತಿಭಾರವನ್ನು ಹಾಕಿದರು. ಅದರ ಬಗ್ಗೆ ಮುಸ್ಲಿಮರ ಪವಿತ್ರ ಗ್ರಂಥವಾದ ಪವಿತ್ರ ಖುರ್‌ಆನ್‌ನಲ್ಲಿ ಹೀಗೆ ಪ್ರಸ್ತಾಪಿಸಲಾಗಿದೆ.

**ಇಬ್ರಾಹೀಮ್ ಮತ್ತು ಇಸ್ಮಾಈಲ್ ಆ ಗೃಹದ ಅಡಿಪಾಯವನ್ನು ಎತ್ತರಗೊಳಿಸಿದಾಗ ಪ್ರಾರ್ಥಿಸಿದರು: "ನಮ್ಮ ಒಡೆಯಾ, ನಮ್ಮ ಈ ಸೇವೆಯನ್ನು ನೀನು ಸ್ವೀಕರಿಸು. ನೀನು ಎಲ್ಲವನ್ನು ಕೇಳುವವನೂ ಎಲ್ಲವನ್ನು ಬಲ್ಲವನೂ ಆಗಿರುವೆ.**

**"ನಮ್ಮ ಪ್ರಭೂ, ನೀನು ನಮ್ಮನ್ನು ನಿನಗೆ ವಿಧೇಯರನ್ನಾಗಿ ಮಾಡು. ನಮ್ಮ ಸಂತತಿಗಳಲ್ಲಿ ಸಹ ನಿನಗೆ ವಿಧೇಯತೆ ತೋರಿಸುವ ಒಂದು ಜನತೆಯನ್ನು ಉಂಟುಮಾಡು. ನಾವು ಆರಾಧಿಸುವ ಕ್ರಮಗಳನ್ನು ನಮಗೆ ತೋರಿಸಿಕೊಡು. ನಮ್ಮ ಮೇಲೆ ನೀನು ಕರುಣೆದೋರು. ಖಂಡಿತವಾಗಿಯೂ ನೀನು (ನಿನ್ನ ಭಕ್ತದಾಸರ ಬಗ್ಗೆ) ಗಮನಹರಿಸುವವನೂ ಕಾರುಣ್ಯನಿಧಿಯೂ ಆಗಿರುವೆ."**

(ಅಧ್ಯಾಯ 2 ವಚನ 128, 129)

ಇಲ್ಲಿ ಹೇಳಿದ ಪ್ರಥಮ ವಿಷಯ ಇದಾಗಿದೆ: "ನಮ್ಮ ಒಡೆಯಾ, ನಮ್ಮ ಈ ಸೇವೆಯನ್ನು ನೀನು ಸ್ವೀಕರಿಸು." ಈ ಸೇವೆ ಯಾವುದೇ ಲೌಕಿಕ ಲಾಭಗಳಿಸುವ ಉದ್ದೇಶಹೊಂದಿಲ್ಲ. ಏಕನಾದ ದೇವನ ನಾಮವನ್ನು ಕೀರ್ತನೆ ಮಾಡುವುದು ಮಾತ್ರವೇ ಈ ಮಸ್‌ಜಿದ್ ನಿರ್ಮಾಣದ ಉದ್ದೇಶವಾಗಿದೆ. ನಮ್ಮ ಮುಂದಿನ ಸಂತತಿಗಳು ಏಕದೇವನಿಗೆ ಶರಣಾಗಿ ಅವನ ಆಜ್ಞೆಗಳಿಗೆ ವಿಧೇಯರಾಗಿ ವರ್ತಿಸುವವರನ್ನಾಗಿ ಮಾಡುವುದು ಇನ್ನೊಂದು ಉದ್ದೇಶವಾಗಿದೆ. ನಮ್ಮ ಆರಾಧನೆ ಏಕದೇವನಾದ ಅಲ್ಲಾಹನ ಮೆಚ್ಚುಗೆಗೆ ಪಾತ್ರವಾಗಿ ಅವನು ನಮಗೆ ಮುಂದೆ ಮಾರ್ಗದರ್ಶನ ನೀಡುತ್ತಾ ಇರಲಿ.

---

ಗಳಲ್ಲಿ ಇತರರನ್ನು ಸೇರಿಸಿದೆ. ಅಂದರೆ, ನಾನು ಎಂದು ಹೇಳದೆ ನಾವು ಎಂದು ಹೇಳಿದೆ.

ಹಝ್ರತ್ ಮಸೀಹ್ ಮೌಊದ್(ಅ) ಮತ್ತೂ ಹೇಳುತ್ತಾರೆ: "ತಖ್‌ವ (ಭಯಭಕ್ತಿ) ಇರುವವನ ದೃಷ್ಟಿಯಲ್ಲಿ ಮನುಷ್ಯರೆಲ್ಲ ಸಮಾನರು. ಮಾತಿನ ಮೂಲಕ ಮನುಷ್ಯನು ತಖ್‌ವದಿಂದ ಅಗಲಿ ಹೋಗುತ್ತಾನೆ. ಮಾತಿನ ಮೂಲಕ ಅಹಂಕರಿಸುತ್ತಾನೆ ಕೂಡ. ಮಾತಿನಿಂದಲೇ ಫಿರ್‌ಔನನ ದುಷ್ಟ ಸ್ವಭಾವ ಬರುತ್ತದೆ. ಈ ಮಾತೇ ರಹಸ್ಯ ಕರ್ಮಗಳನ್ನು ಕಪಟ ನಾಟ್ಯವಾಗಿ ಮಾಡುತ್ತದೆ. ಮಾತಿನ ಮೂಲಕದ ವಿವರಣೆ ಬೇಗನೇ ಹರಡುತ್ತದೆ. ನಮ್ಮ ಪೈಗಂಬರ್(ಸ) ತನ್ನ ಪ್ರವಾದಿತ್ವವನ್ನು ಘೋಷಿಸಿದರು. ಆಗ ಜೊತೆಗಿದ್ದವರೆಲ್ಲ ಶತ್ರುಗಳಾಗಿ ಮಾರ್ಪಟ್ಟರು. ಆದರೆ, ಪೈಗಂಬರರು(ಸ) ಒಂದು ನಿಮಿಷ ಕೂಡ ಅದಕ್ಕೆ ಬೆಲೆಕೊಡಲಿಲ್ಲ. ಶತ್ರುಗಳ ದೂರುಗಳಿಂದ ಆತಂಕಗೊಂಡ ಅಬೂತಾಲಿಬ್, ಅವರು ಹೇಳಿದ ವಿಚಾರವನ್ನು ಪೈಗಂಬರರೊಡನೆ(ಸ) ಹೇಳಿದಾಗ, ಸ್ಪಷ್ಟವಾದ ಭಾಷೆಯಲ್ಲೇ ಅವರು ಉತ್ತರಕೊಟ್ಟರು: "ನನಗೆ ಇದರಿಂದ ಹಿಮ್ಮೆಟ್ಟಲು ಸಾಧ್ಯವಿಲ್ಲ. ತಾವು ಇಷ್ಟವಿದ್ದರೆ ನನಗೆ ಸಹಾಯ ಮಾಡಬಹುದು ಅಥವಾ ಸಹಾಯ ಮಾಡದಿರಬಹುದು." ●

*(ಭಾಷಾಂತರ : ಮುಹಮ್ಮದ್ ಯೂಸುಫ್)*

ಮಸ್‌ಜಿದ್ ನಿರ್ಮಾಣದ ಮೂಲ ಉದ್ದೇಶಗಳು ನಾನು ವಿವರಿಸಿದವುಗಳಾಗಿವೆ.

ಹಝ್ರತ್ ಮುಹಮ್ಮದ್ ಪೈಗಂಬರರ[ಸ] ಕಾಲದಲ್ಲಿ ಒಂದು ಮಸ್‌ಜಿದನ್ನು ಕಪಟವಿಶ್ವಾಸಿಗಳು ನಿರ್ಮಾಣಮಾಡಿದ್ದರು. ದೇವಾರಾಧನೆಗಾಗಿ ಈ ಮಸ್‌ಜಿದನ್ನು ನಿರ್ಮಿಸಿರುವುದೆಂದು ಅವರು ಹೇಳಿಕೊಂಡಿದ್ದರೂ ಅವರ ಉದೇಶ ಹಿಂಸಾಚಾರ, ಅಸ್ತವ್ಯಸ್ತತೆ ಮತ್ತು ಅನೈಕ್ಯ ಉಂಟು ಮಾಡುವುದಾಗಿತ್ತು. ಸರ್ವಶಕ್ತನಾದ ದೇವನು ಗೋಚರವಾಗಿರುವುದನ್ನೂ ಅಗೋಚರವಾಗಿರುವುದನ್ನೂ ಬಲ್ಲವನಾಗಿದ್ದಾನೆ. ಅವನು ಪೈಗಂಬರರಿಗೆ[ಸ] ಕಪಟವಿಶ್ವಾಸಿಗಳ ಕಾರಸ್ಥಾನಗಳನ್ನು ತಿಳಿಸಿದನು. ಈ ಘಟನೆಯ ಕುರಿತು ಪವಿತ್ರ ಖುರ್‌ಆನ್‌ನಲ್ಲಿ ಪ್ರಸ್ತಾಪಿಸಲಾಗಿದೆ. ಕಪಟವಿಶ್ವಾಸಿಗಳಿಂದ ನಿರ್ಮಿಸಲ್ಪಟ್ಟ ಮಸ್‌ಜಿದ್ ಅವಿಶ್ವಾಸವನ್ನು ಬಲಪಡಿಸಲು ಮತ್ತು ಸತ್ಯವಿಶ್ವಾಸಿಗಳ ಮಧ್ಯೆ ಒಡಕನ್ನುಂಟುಮಾಡಲು ನಿರ್ಮಿಸಲಾಗಿದೆ ಎಂದೂ ಅದು ದೇವಭಕ್ತಿಯ ಅಸ್ತಿಭಾರದ ಮೇಲೆ ನಿರ್ಮಿಸಲ್ಪಟ್ಟಿರಲಿಲ್ಲ ಎಂದೂ ಪವಿತ್ರ ಖುರ್‌ಆನ್‌ನಲ್ಲಿ ಉಲ್ಲೇಖಿಸಲಾಗಿದೆ. (ಪವಿತ್ರ ಖುರ್‌ಆನ್ ಅಧ್ಯಾಯ 9 ವಚನ 107 ನೋಡಿರಿ.)

ಈ ಕಾರಣಗಳಿಂದ ಆ ಮಸ್‌ಜಿದ್‌ನಲ್ಲಿ ಪ್ರವಾದಿಯವರು[ಸ] ನಮಾಝ್ ಮಾಡಬಾರದೆಂದೂ ಆ ಮಸ್‌ಜಿದನ್ನು ಕೆಡವಬೇಕೆಂದೂ ಹಾಗೆ ಮಾಡುವುದರಿಂದ ಕಲಹಗಳು ಮತ್ತು ಅಸ್ತವ್ಯಸ್ತತೆಗಳು ಕೊನೆಗೊಳ್ಳುವುವು ಎಂದೂ ಅಲ್ಲಾಹನು ಆಜ್ಞಾಪಿಸಿದನು.

ಮಸ್‌ಜಿದ್‌ಗಳನ್ನು ನಿರ್ಮಿಸುವುದು ದೇವನ ನಾಮ ಸಂಕೀರ್ತನೆಗಾಗಿ ಮತ್ತು ಆರಾಧನೆಗಾಗಿ ಮಾತ್ರ ಎಂದು ಮೇಲಿನ ಘಟನೆಯಿಂದ ಸಾಬೀತಾಗುತ್ತದೆ. ದೇವನನ್ನು ಆರಾಧಿಸುವವರು ಅವನಿಗೆ ಅಪ್ರಿಯವಾದುದನ್ನು ಮಾಡುವುದನ್ನು ಕೂಡ ಊಹಿಸಲಾರರು. ಇದೇ ಕಾರಣದಿಂದ ಪವಿತ್ರ ಖುರ್‌ಆನ್‌ನಲ್ಲಿ, 'ನಾವು ಈ ಆರಾಧನಾಲಯವನ್ನು ನಿರ್ಮಿಸುವುದು ನಾವು ಮತ್ತು ನಮ್ಮ ಸಂತಾನ ದೇವನಿಗೆ ವಿಧೇಯರಾಗಲಿಕ್ಕಾಗಿದೆ' ಎಂಬ ಮೇಲೆ ಉಲ್ಲೇಖಿಸಲಾದ ಹೇಳಿಕೆಯನ್ನು ದಾಖಲಿಸಲಾಗಿದೆ.

ಉಗ್ರವಾದಿ ಮುಸ್ಲಿಮ್ ಮುಲ್ಲಾಗಳ ಕೃತ್ಯಗಳ ಕಾರಣದಿಂದ ಮಸ್‌ಜಿದ್‌ಗಳ ಬಗ್ಗೆ, ಅವು ಕೆಡುಕಿನ ಸ್ಥಾನವೆಂದೂ ಅಲ್ಲಿ ಉಗ್ರವಾದಿಗಳನ್ನೂ ಭೀಕರವಾದಿಗಳನ್ನೂ ಪೋಷಿಸಲಾಗುತ್ತಿದೆ ಎಂದೂ ಮಸ್‌ಜಿದಿನ ಉದ್ದೇಶ ಸಮಾಜದಲ್ಲಿ ಶಾಂತಿಗೆ ಭಂಗವುಂಟು ಮಾಡುವುದೆಂದೂ ಪಾಶ್ಚಿಮಾತ್ಯ ದೇಶಗಳಲ್ಲಿ ಭಾವಿಸಲಾಗುತ್ತಿದೆ. ಆದರೆ ಈ ಅಭಿಪ್ರಾಯ ಸಂಪೂರ್ಣವಾಗಿ ಸುಳ್ಳಾಗಿದೆ.

ಇಸ್ಲಾಮ್ ಧರ್ಮದಲ್ಲಿ ಧಾರ್ಮಿಕ ಸಹಿಷ್ಣುತೆ ಮತ್ತು ಸೌಹಾರ್ದಕ್ಕೆ ಬಹಳ ಪ್ರಾಮುಖ್ಯನೀಡಲಾಗಿದೆ–ಪರಸ್ಪರ ಗೌರವಿಸಬೇಕೆಂದೂ ಆರಾಧನಾಯಲಯಗಳನ್ನು ರಕ್ಷಿಸಬೇಕೆಂದೂ. ಕ್ರೂರತೆ ಮತ್ತು ದೌರ್ಜನ್ಯವನ್ನು ತಡೆಯಲು ಬಲಪ್ರಯೋಗಿಸಲು ಅನುಮತಿ ನೀಡಲಾಗಿದ್ದರೂ ಮುಸ್ಲಿಮರ ಆರಾಧನಾಲಯಗಳಿಗೆ ಮಾತ್ರ ರಕ್ಷಣೆ ನೀಡಬೇಕೆಂದು ವಿಧಿಸಲಿಲ್ಲ.

ದೌರ್ಜನ್ಯವನ್ನು ತಡೆಗಟ್ಟದಿದ್ದಲ್ಲಿ ಮಸ್‌ಜಿದ್‌ಗಳು ಮಾತ್ರವಲ್ಲ, ಇತರ ಆರಾಧನಾಲಯಗಳು ಸಹ ಧ್ವಂಸಗೊಳ್ಳುವು ಎಂದು ಪವಿತ್ರ ಖುರ್‌ಆನ್‌ನಲ್ಲಿ ಹೇಳಲಾಗಿದೆ. ಧರ್ಮದ ವಿರೋಧಿಗಳು ಯಾವುದೇ ಧರ್ಮದ ಜನರನ್ನು ಶಾಂತವಾಗಿ ಜೀವಿಸಲು ಎಂದೂ ಅನುಮತಿಸಲಾರರು. ಆದುದರಿಂದ ಮುಸ್ಲಿಮರ ಆರಾಧನಾಲಯಗಳಿಗೆ ಮಾತ್ರವಲ್ಲ, ಮುಸ್ಲಿಮೇತರರ ಆರಾಧನಾಲಯಗಳಿಗೆ ಸಹ ರಕ್ಷಣೆ ನೀಡಲು ಆದೇಶಿಸಲಾಗಿದೆ.

ಸರ್ವಶಕ್ತನಾದ ದೇವನು ಪವಿತ್ರ ಖುರ್‌ಆನ್‌ನಲ್ಲಿ ಹೀಗೆ ಹೇಳುತ್ತಾನೆ:

**“'ಅಲ್ಲಾಹನೇ ನಮ್ಮ ಪ್ರಭು' ಎಂದು ಹೇಳಿದ ಮಾತ್ರಕ್ಕೆ ಅವರನ್ನು ಅನ್ಯಾಯವಾಗಿ ಮನೆಗಳಿಂದ ಹೊರಗೆ ಅಟ್ಟಲಾಯಿತು. ಅಲ್ಲಾಹನು ಜನರಲ್ಲಿ ಕೆಲವರನ್ನು (ಅವರು ಎಸಗುವ ದೌರ್ಜನ್ಯಗಳನ್ನು) ಬೇರೆ ಕೆಲವರ ಮೂಲಕ ತಡೆಯದಿರುತ್ತಿದ್ದರೆ ಸನ್ಯಾಸಿ ಮಠಗಳೂ ಇಗರ್ಜಿಗಳೂ ಯಹೂದಿ ಮಂದಿರಗಳೂ ಮಸ್‌ಜಿದ್‌ಗಳೂ ನಿರ್ನಾಮವಾಗುತ್ತಿದ್ದುವು. ಅವುಗಳಲ್ಲಿ ಅಲ್ಲಾಹನ ನಾಮ ಹೆಚ್ಚು ಹೆಚ್ಚಾಗಿ ಸ್ಮರಿಸಲ್ಪಡುತ್ತದೆ. ತನಗೆ ನೆರವು ನೀಡುವವರಿಗೆ ಅಲ್ಲಾಹನು ಖಂಡಿತವಾಗಿಯೂ ನೆರವಾಗುತ್ತಾನೆ. ನಿಶ್ಚಯವಾಗಿಯೂ ಅಲ್ಲಾಹನು ಸರ್ವಸಮರ್ಥನೂ ಪ್ರತಾಪಶಾಲಿಯೂ ಆಗಿದ್ದಾನೆ.” (ಅಧ್ಯಾಯ 22 : ವಚನ 41)**

ಈ ವಚನದಲ್ಲಿ ಸರ್ವಶಕ್ತನಾದ ದೇವನು ಮುಸ್ಲಿಮರ ರಕ್ಷಣೆ ಮಾತ್ರವಲ್ಲ ಇತರ ಎಲ್ಲಾ ಧರ್ಮಗಳ ರಕ್ಷಣೆಯ ಕುರಿತು ಪ್ರಸ್ತಾಪಿಸಿದ್ದಾನೆ.

ಮುಸ್ಲಿಮರು ತಮ್ಮ ರಕ್ಷಣೆಗಾಗಿ ಮತ್ತು ತಮ್ಮ ಆರಾಧನಾಲಯಗಳ ರಕ್ಷಣೆಗಾಗಿ ಹಾಗೂ ಇತರ ಧರ್ಮಗಳ ಆರಾಧನಾಲಯಗಳನ್ನು ರಕ್ಷಿಸಲು ಆಯುಧಗಳನ್ನು ಎತ್ತಬೇಕೆಂದು ಅಲ್ಲಾಹನು ಹೇಳಿರುವಾಗ ಇತರ ಧರ್ಮಗಳನ್ನು ಧ್ವಂಸಗೊಳಿಸಿ ಇಸ್ಲಾಮನ್ನು ಬಲಾತ್ಕಾರದಿಂದ ಪ್ರಚಾರ ಮಾಡಲು ಅವನು ಆಜ್ಞಾಪಿಸುವನೇ?

ಮುಸ್ಲಿಮರ ಹೃದಯಗಳಲ್ಲಿ ಮಸ್‌ಜಿದ್‌ಗಳ ಪಾವಿತ್ರ್ಯದ ಕುರಿತು ಗೌರವ ನೀಡಲು ಹೇಳಲಾಗಿದೆ. ಮಾತ್ರವಲ್ಲ ಸನ್ಯಾಸಿ ಮಠಗಳ, ಇಗರ್ಜಿಗಳ, ಯಹೂದಿ ಆರಾಧನಾಲಯಗಳ ಮತ್ತು ಇತರ ಧರ್ಮಗಳ ಆರಾಧನಾಲಯಗಳನ್ನು ಗೌರವಿಸಲು ಸಹ ಹೇಳಲಾಗಿದೆ.

ಆದುದರಿಂದ ಯಾರದಾದರೂ ಮನಸ್ಸಿನಲ್ಲಿ "ಈ ಮಸ್‌ಜಿದ್ ಈ ನಗರದಲ್ಲಿ ನಿರ್ಮಿಸಲಾಗಿದೆ. ಇಲ್ಲಿ ಶಾಂತಿ ನೆಲಸುವುದೋ ಶಾಂತಿ ಭಂಗವಾಗುವುದೋ ನಮಗೆ ತಿಳಿಯದು. ದೇವನು ನಮ್ಮನ್ನು ರಕ್ಷಿಸಲಿ" ಎಂಬ ಯೋಚನೆ ಉಂಟಾಗುವುದಾದರೆ ಆ ಯೋಚನೆಯನ್ನು ದೂರ ಸರಿಸಬೇಕು.

ಅಹ್ಮದಿಯಾ ಮುಸ್ಲಿಮ್ ಸಂಘಟನೆ ಸರ್ವಶಕ್ತನಾದ ದೇವನ ಪ್ರೀತಿಯನ್ನು ಗಳಿಸಲಿಕ್ಕಾಗಿ ಮಾತ್ರ ಕೆಲಸಮಾಡುತ್ತದೆ. ಆದುದರಿಂದ ಯಾವುದಾದರೂ ಚರ್ಚ್ ಅಥವಾ ಬೇರೆ ಆರಾಧನಾಲಯಕ್ಕೆ ರಕ್ಷಣೆಯ ಆವಶ್ಯವಿದ್ದರೆ ನಾವು ಅವರೊಂದಿಗೆ ಭುಜಕ್ಕೆ ಭುಜಕೊಟ್ಟು ರಕ್ಷಣೆ ನೀಡುವೆವು. ನಮ್ಮ ಮಸ್‌ಜಿದ್‌ನಿಂದ ಯಾವುದಾದರೂ ಧ್ವನಿ ಕೇಳಿಸುವುದಾದರೆ ಅದು ಹೀಗೆ ಹೇಳಲಿಕ್ಕಾಗಿರುವುದು: ಅಲ್ಲಾಹನು ಎಲ್ಲರಿಗಿಂತಲೂ ದೊಡ್ಡವನು. ಅವನ ಹೊರತು ಆರಾಧನೆಗೆ ಅರ್ಹನಾದವನು ಬೇರೆ ಯಾರೂ ಇಲ್ಲ ಎಂದು ನಾವು ಸಾಕ್ಷ್ಯ ಹೇಳುತ್ತೇವೆ. ಮುಹಮ್ಮದ್ ಅಲ್ಲಾಹನ ಸಂದೇಶವಾಹಕರಾಗಿದ್ದಾರೆ. ನೀವು ಆರಾಧನೆಗೆ ಲಕ್ಷ್ಯನೀಡಿರಿ. ನೀವು ಏಕನಾದ ದೇವನನ್ನು ಗುರುತಿಸಿ ಜಯಶಾಲಿಯಾಗಲು ಮತ್ತು ಮೋಕ್ಷಗಳಿಸಲು ಬನ್ನಿರಿ.

ಜಯ ಮತ್ತು ಮೋಕ್ಷಗಳಿಸಲು ದೇವನು ಮೆಚ್ಚಿದ ಮತ್ತು ಆಜ್ಞಾಪಿಸಿದ ಸತ್ಕಾರ್ಯಗಳನ್ನು ಮಾಡಬೇಕು. ಅವನು ಆಜ್ಞಾಪಿಸಿದ ಸತ್ಕಾರ್ಯಗಳು ಯಾವುವು?

ಇತರರ ಸುಧಾರಣೆಗಾಗಿ ಒಳ್ಳೆಯ ವಿಷಯಗಳನ್ನು ಹೇಳುವವರು ತನ್ನ ಸಾಮೀಪ್ಯವನ್ನು ಗಳಿಸುತ್ತಾರೆ ಎಂದು ಸರ್ವಶಕ್ತನಾದ ಅಲ್ಲಾಹನು ಹೇಳುತ್ತಾನೆ. ಮನುಷ್ಯರ ಏಳಿಗೆಗೆ ಮತ್ತು ಶಾಂತಿ ಸ್ಥಾಪನೆಗೆ ಇರುವ ಉತ್ತಮ ಕಾರ್ಯವಿಧಾನವು ಯಾವುದು? ಸರ್ವಶಕ್ತನಾದ ದೇವನು ಪವಿತ್ರ ಖುರ್‌ಆನ್‌ನಲ್ಲಿ ಹೇಳುತ್ತಾನೆ:

**"ನೀವು ಮನುಷ್ಯವರ್ಗದ ಒಳಿತಿಗಾಗಿ ಸೃಷ್ಟಿಸಲ್ಪಟ್ಟ ಅತಿ ಉತ್ಕೃಷ್ಟ ಸಮುದಾಯವಾಗಿದ್ದೀರಿ. ನೀವು ಒಳಿತನ್ನು ಉಪದೇಶಿಸುತ್ತೀರಿ. ಕೆಡುಕನ್ನು ತಡೆಯುತ್ತೀರಿ...."** **(ಅಧ್ಯಾಯ 3 ವಚನ 111)**

ಮುಸ್ಲಿಮರು ತಮ್ಮ ಮುಸ್ಲಿಮ್ ಸಹೋದರರಿಗೆ ಸಹಾಯ ಮಾಡಲು ಉಪದೇಶಿಸಲಾಗಿದೆ. ಮಾತ್ರವಲ್ಲ, ಮುಸ್ಲಿಮರನ್ನು ಮನುಷ್ಯ ವರ್ಗದ ಒಳಿತಿಗಾಗಿ ಸೃಷ್ಟಿಸಲಾಗಿದೆ ಎಂದು ಹೇಳಲಾಗಿದೆ. ಅವರ ಜೀವಿತದ ಉದ್ದೇಶವು ಒಳಿತನ್ನು ಸ್ಥಾಪಿಸುವುದು ಮತ್ತು ಕೆಡುಕನ್ನು ತಡೆಯುವುದಾಗಿರಬೇಕು. ಮನುಷ್ಯವರ್ಗದ ಒಳಿತಿಗಾಗಿ ಕಾರ್ಯನಿರತರಾಗಬೇಕೆಂದು ಉಪದೇಶಿಸಲ್ಪಟ್ಟವರು ಶಾಂತಿಭಂಗ ಉಂಟುಮಾಡುವುದಾದರೂ ಹೇಗೆ?

ಸರ್ವಶಕ್ತನಾದ ದೇವನು ಪವಿತ್ರ ಖುರ್‌ಆನ್‌ನಲ್ಲಿ ಹೀಗೆ ಹೇಳುತ್ತಾನೆ:

**"ನ್ಯಾಯನಿಷ್ಠೆಗೆ ಬದ್ಧರಾಗಲಿಕ್ಕೂ ಔದಾರ್ಯ ತೋರಿಸಲಿಕ್ಕೂ ನಿಕಟಬಂಧುಗಳಿಗೆ ಎಂಬಂತೆ (ಪರರಿಗೂ) ಸಹಾಯಮಾಡಲಿಕ್ಕೂ ಅಲ್ಲಾಹನು ಆಜ್ಞಾಪಿಸುತ್ತಾನೆ. ಅಸಭ್ಯತೆಯನ್ನೂ ದುಷ್ಕೃತ್ಯವನ್ನೂ ನಿಯಮೋಲ್ಲಂಘನೆಯನ್ನೂ ಅವನು ನಿಷಿದ್ಧಗೊಳಿಸಿದ್ದಾನೆ. ಈ ಬಗ್ಗೆ ಲಕ್ಷ್ಯಗೊಡಲಿಕ್ಕೆ ಅವನು ನಿಮಗೆ ಉಪದೇಶ ನೀಡುತ್ತಾನೆ."** **(ಅಧ್ಯಾಯ 16 ವಚನ 91)**

ಈ ವಚನದಲ್ಲಿ ಮೂರು ಒಳ್ಳೆಯ ಕೆಲಸಗಳನ್ನು ಮತ್ತು ಮೂರು ಕೆಟ್ಟ ಕೆಲಸಗಳನ್ನು ಪ್ರಸ್ತಾಪಿಸಲಾಗಿದೆ. ಮನುಷ್ಯನು ಒಳ್ಳೆಯ ಕೆಲಸಗಳನ್ನು ಮಾಡಿ ಕೆಟ್ಟ ಕೆಲಸಗಳಿಂದ ದೂರ ಸರಿದರೆ ಅವನು ಸನ್ಮಾರ್ಗದರ್ಶನ ಪಡೆದವನಾಗುವನು.

ಪ್ರಸ್ತಾಪಿಸಲಾದ ಪ್ರಥಮ ಒಳ್ಳೆಯ ಕೆಲಸ ನ್ಯಾಯನಿಷ್ಠೆಗೆ ಬದ್ಧರಾಗಿ ವರ್ತಿಸುವುದಾಗಿದೆ. ನ್ಯಾಯನಿಷ್ಠೆಗೆ ಸಂಬಂಧಿಸಿ ಪವಿತ್ರ ಖುರ್‌ಆನ್ ಆವಶ್ಯಕವಾಗಿರುವ ಮಾನದಂಡವನ್ನು ವಿವರಿಸಿದೆ. ದೇವನು ಹೇಳುವುದೇನೆಂದರೆ, ಒಬ್ಬನು ಸಾಕ್ಷ್ಯ ಹೇಳುವಾಗ ಆ ಸಾಕ್ಷ್ಯವು ತನ್ನ ಸ್ನೇಹಿತನಿಗೆ, ತನ್ನ ನಿಕಟ ಬಂಧುವಿಗೆ ಅಥವಾ ಸ್ವತಃ ತನಗೆ ವಿರುದ್ಧವಾಗಿದ್ದರೂ ಸತ್ಯವಾದ ಸಾಕ್ಷ್ಯವನ್ನೇ ನುಡಿಯಬೇಕು. ಈ ನ್ಯಾಯನಿಷ್ಠೆ ಮನುಷ್ಯನನ್ನು ದೇವ ಸಾಮೀಪ್ಯಗಳಿಸುವಂತೆ ಮಾಡುವುದು. ಇದು ಅವನ ಆರಾಧನೆಯ ಉದ್ದೇಶವನ್ನು ಪರಿಪೂರ್ಣಗೊಳಿಸುವ ನ್ಯಾಯನಿಷ್ಠೆಯಾಗಿದೆ.

ಪವಿತ್ರ ಖುರ್‌ಆನ್ ಪ್ರಸ್ತಾಪಿಸುವ ಎರಡನೆಯ ಒಳ್ಳೆಯ ಕೆಲಸ ಔದಾರ್ಯ ತೋರಿಸುವುದು. ಎಂದರೆ ಇತರರು ನಿಮ್ಮೊಂದಿಗೆ ಹೇಗೆ ವರ್ತಿಸಿದ್ದರೂ ನೀವು ಇತರರಿಗೆ ಒಳ್ಳೆಯದನ್ನೇ ಮಾಡಬೇಕು. ಇತರರಿಗೆ ಒಳಿತನ್ನು ಮಾಡಿ ಒಳ್ಳೆಯ ಕಾರ್ಯಕ್ರಮಗಳನ್ನು ಕೈಗೊಂಡು ಸಮಾಜದಲ್ಲಿ ಶಾಂತಿ ಸ್ಥಾಪಿತವಾಗುವುದಾದರೆ, ಇತರರು ಮಾಡಿದ ಅತಿರೇಕ ವರ್ತನೆಗಳನ್ನು ಮತ್ತು ಕೆಟ್ಟ ಕೆಲಸಗಳನ್ನು ಮರೆತುಬಿಡಬೇಕು. ಪ್ರೀತಿ ವಾತ್ಸಲ್ಯಗಳು ವರ್ಧಿಸಲು ಇತರರಿಗೆ ಒಳಿತನ್ನು ಮಾಡಲು ಹೇಳಲಾಗಿದೆ. ಇದು ಪರಸ್ಪರ ಇರುವ ದ್ವೇಷ, ಅಸೂಯೆಗಳನ್ನು ನಿವಾರಿಸುವುದು. ಹಾಗೆ ಶಾಂತಮಯ ಮತ್ತು ನ್ಯಾಯನಿಷ್ಠೆಯುಳ್ಳ ಸಮಾಜವು ಬೇರೂರುವುದು.

ಮೂರನೆಯ ಒಳ್ಳೆಯ ಕೆಲಸ ಅತ್ಯಂತ ಮಹತ್ವಪೂರ್ಣವಾಗಿದೆ. ಅದು ನಿಕಟ ಬಂಧುಗಳಿಗೆ ಎಂಬಂತೆ (ಪರರಿಗೂ) ಸಹಾಯ ಮಾಡುವುದಾಗಿದೆ. ಇತರರು ನಿಮ್ಮೊಂದಿಗೆ ಉತ್ತಮ ರೀತಿಯಲ್ಲಿ ವರ್ತಿಸಲಿಕ್ಕಾಗಿ ನೀವು ದಯೆಯಿಂದ ವರ್ತಿಸುವುದಕ್ಕೆ ಪ್ರತಿಯಾಗಿ ನೀವು ಒಳ್ಳೆಯ ಕೆಲಸ ಮಾಡುವುದನ್ನು ನಿಮ್ಮ ಪ್ರಕೃತಿಯ ಒಂದು ಭಾಗದಂತೆ ಮಾಡಿ ವರ್ತಿಸಬೇಕು. ಒಬ್ಬ ನೈಜ ಮುಸ್ಲಿಮ್ ಯಾರಿಗೂ ಎಂದೂ ಕೆಡುಕನ್ನು ಉಂಟುಮಾಡಲಾರನು. ಒಂದು ಸಮಾಜದಲ್ಲಿ ಈ ರೀತಿಯ ಯೋಚನೆ ಜನರಲ್ಲಿ ಉಂಟಾದರೆ ನ್ಯಾಯ, ಸಮತೆ ಮತ್ತು ಶಾಂತಿಯು ಪ್ರಧಾನ ಸ್ಥಾನ ಪಡೆಯುವುದು ಮತ್ತು ಸತ್ಯವಿಶ್ವಾಸಿಯು ಸರ್ವಶಕ್ತನಾದ ದೇವನ ಪ್ರೀತಿಯನ್ನು ಗಳಿಸುವನು.

ಮೂರು ಕೆಟ್ಟ ಕೆಲಸಗಳನ್ನೂ ವಿವರಿಸಲಾಗಿದೆ. ಮೊದಲನೆಯದಾಗಿ ನಾವು ಅಸಭ್ಯತೆಯನ್ನು ತ್ಯಜಿಸಲು ಹೇಳಲಾಗಿದೆ.

ಅಸಭ್ಯತೆಯು ಅಶ್ಲೀಲತೆಯಾಗಿದ್ದು ಅದು ಲೌಕಿಕ ಸುಖ ಸಂತೋಷಕ್ಕಾಗಿರುವ ಒಂದು ಮಾರ್ಗವಾಗಿದೆ. ಇಂತಹ ಲೌಕಿಕ ಸುಖ ಸಂತೋಷಗಳಲ್ಲಿ ಭಾಗವಹಿಸುವವನು ಸರ್ವಶಕ್ತನಾದ ದೇವನನ್ನು ಸ್ಮರಿಸಲಾರನು. ಮನುಷ್ಯರನ್ನು ಕೆಡುಕಿಗೆ ಸಿಲುಕಿಸಿ ಹಾಕುವ ನೈಟ್‌ಕ್ಲಬ್‌ಗಳನ್ನೂ ಕ್ಯಾಸಿನೋಗಳನ್ನೂ ನೋಡಿರಿ. ಅವುಗಳು ಕಾಲಹರಣ ಮಾಡಲು ಮತ್ತು ಉಲ್ಲಾಸಕ್ಕಾಗಿ ಕಾರ್ಯಪ್ರವೃತ್ತವಾಗುತ್ತವೆ. ದೇವನನ್ನು ಸ್ಮರಿಸದವನು ಮಸ್‌ಜಿದ್‌ನೊಂದಿಗೆ ಸಂಬಂಧವನ್ನೂ ಸ್ಥಾಪಿಸಲಾರನು.

ಪವಿತ್ರ ಖುರ್‌ಆನ್ ನಿಷಿದ್ಧಗೊಳಿಸಿದ ಎರಡನೆಯ ಕೆಟ್ಟ ಕೆಲಸ ದುಷ್ಕೃತ್ಯವಾಗಿದೆ. ಇದು ಅನಿಷ್ಟಕರವಾದ ಕೆಲಸಗಳ ಬಗ್ಗೆ ಹೇಳಿದುದಾಗಿದೆ; ಸುಳ್ಳು ಹೇಳುವುದು, ಇತರರ ಹಕ್ಕುಗಳನ್ನು ಅಪಹರಿಸುವುದು, ಇತರರ ಭಾವನೆಗಳಿಗೆ ಗೌರವ ನೀಡದಿರುವುದು, ಪರದೂಷಣೆ, ಹಿರಿಯರಿಗೆ ಗೌರವ ನೀಡದಿರುವುದು ಇವುಗಳಲ್ಲಿ ಸೇರಿವೆ. ಇವುಗಳು ಸಮಾಜದಲ್ಲಿ ದ್ವೇಷದ ಗೋಡೆಗಳನ್ನು ಕಟ್ಟುತ್ತವೆ. ಒಬ್ಬನು ಇಂತಹ ಕೆಟ್ಟ ಕೆಲಸಗಳನ್ನು ಮಾಡಿದ ನಂತರವೂ ತಾನು ಸರ್ವಶಕ್ತನಾದ ಅಲ್ಲಾಹನನ್ನು ಆರಾಧಿಸುವುದಾಗಿಯೂ ತಾನು ಆರಾಧಿಸಲು ಮಸ್‌ಜಿದ್‌ಗೆ ಹೋಗುವುದಾಗಿಯೂ ಹೇಳುವುದಾದರೆ ಅವನು ಅಲ್ಲಾಹನ ಪ್ರೀತಿಯನ್ನು ಗಳಿಸಲಾರ.

ಮೂರನೆಯ ಕೆಡುಕಾಗಿ ನಿಯಮೋಲ್ಲಂಘನೆ ಅಥವಾ ವಿದ್ರೋಹವನ್ನು ಪ್ರಸ್ತಾಪಿಸಲಾಗಿದೆ. ಅದು ಸಮಾಜದಲ್ಲಿ ಶಾಂತಿಯನ್ನು ಧ್ವಂಸಗೊಳಿಸುತ್ತದೆ. ದೇಶದ ಕಾನೂನು ಕಾಯಿದೆಗಳನ್ನು ಗೌರವಿಸದೆ ಇರುವುದು, ದೇಶಭಕ್ತಿ ಮತ್ತು ದೇಶಪ್ರೇಮಕ್ಕೆ ಹಾನಿಕರವಾಗಿ ವರ್ತಿಸುವುದು, ದೇಶಕ್ಕೆ ಕೆಟ್ಟ ಹೆಸರು ಬರುವಂತೆ ವರ್ತಿಸುವುದು ಇದರಲ್ಲಿ ಸೇರಿವೆ.

ಹಝ್ರತ್ ಪೈಗಂಬರರ(ಸ) ವಚನಗಳ ಸಂಗ್ರಹವಾದ ಹದೀಸು ಗ್ರಂಥಗಳಲ್ಲಿ ಒಂದು ವಚನ ಹೀಗಿದೆ:

"ದೇಶಪ್ರೇಮವು ಮುಸ್ಲಿಮನ ಧಾರ್ಮಿಕ ವಿಶ್ವಾಸದ ಒಂದು ಭಾಗವಾಗಿದೆ."

ಇದು ಪವಿತ್ರ ಖುರ್‌ಆನ್ ನೀಡಿದ ಉಪದೇಶವಾಗಿದೆ. ಆದರೆ ಸರ್ವಶಕ್ತನಾದ ದೇವನನ್ನು ನಂಬದೆ ಇದನ್ನು ಅನುಷ್ಠಾನಕ್ಕೆ ತರಲು ಸಾಧ್ಯವಾಗದು. ಮನುಷ್ಯನು ಹೃದಯದಲ್ಲಿ ದೇವಭಯವನ್ನು ಹೊಂದಿ ಆರಾಧಿಸುವಾಗ ಮಾತ್ರ ಅವನು ನಂಬಿಕೆ ಗಳಿಸುತ್ತಾನೆ. ಮಸ್‌ಜಿದ್ ನಿರ್ಮಾಣದ ಉದ್ದೇಶವು ಸರ್ವಶಕ್ತನಾದ ದೇವನ ಆರಾಧನೆ ಮಾಡುವುದು ಮತ್ತು ದೇವನ ಸೃಷ್ಟಿಗಳ ಹಕ್ಕುಗಳನ್ನು ನೀಡುವುದಾಗಿದೆ.

ಆದುದರಿಂದ ಇಲ್ಲಿ ಮಸ್‌ಜಿದ್ ನಿರ್ಮಿಸಿ ಮುಸ್ಲಿಮರು ಈ ಪ್ರದೇಶದ ಶಾಂತಿಗೆ ಭಂಗ ಉಂಟುಮಾಡಬಹುದೆಂಬ ಭೀತಿ ಯಾರಿಗಾದರೂ ಇದ್ದರೆ ಅವರು ನಿಶ್ಚಿಂತೆಯಿಂದ ಇರಬಹುದಾಗಿದೆ. ಅಹ್ಮದಿಯಾ ಮುಸ್ಲಿಮ್ ಜಮಾಅತ್ ನಿಜವಾದ ಇಸ್ಲಾಮ್ ಧರ್ಮದ ಧ್ವಜವಾಹಕರಾಗಿದ್ದಾರೆ. ಅವರು ದೇವನ ಹಕ್ಕುಗಳನ್ನೂ ಅವನ ಸೃಷ್ಟಿಗಳ ಹಕ್ಕುಗಳನ್ನೂ ಕಟ್ಟುನಿಟ್ಟಾಗಿ ಸಲ್ಲಿಸುತ್ತಾರೆ.

ಅಹ್ಮದಿಯಾ ಮುಸ್ಲಿಮ್ ಜಮಾಅತಿನ ಸ್ಥಾಪಕರನ್ನು ನಾವು ವಾಗ್ದತ್ತ ಮಸೀಹರೆಂದೂ ಮತೋದ್ಧಾರಕರೆಂದೂ ಅಂಗೀಕರಿಸುತ್ತೇವೆ. ಅವರು ಹಝ್ರತ್ ಪೈಗಂಬರರು(ಸ) ಭವಿಷ್ಯ ನುಡಿದಂತೆ ಧಾರ್ಮಿಕ

ಯುದ್ಧಗಳನ್ನು ಕೊನೆಗೊಳಿಸಲು ಆಗಮಿಸಿದರು. ಅಹ್ಮದಿಯಾ ಮುಸ್ಲಿಮ್ ಸಂಘಟನೆಯ ಮಸ್‌ಜಿದ್ ಬಗ್ಗೆ ಯಾವುದೇ ರೀತಿಯಲ್ಲಿ ಹೆದರುವ ಆವಶ್ಯಕತೆ ಇರುವುದಿಲ್ಲ.

ನಮ್ಮ ಮಸ್‌ಜಿದ್‌ಗಳ ಮಿನಾರತ್‌ಗಳನ್ನು ಜನರನ್ನು ದೇವನ ಪ್ರಾರ್ಥನೆಗೆ ಕರೆಯಲು ನಿರ್ಮಿಸಲಾಗಿದೆ. ನಮ್ಮ ಮಸ್‌ಜಿದ್‌ಗಳ ಮಿನಾರತ್‌ಗಳು ಶಾಂತಿಯ ಮತ್ತು ಪ್ರೀತಿಯ ಪ್ರಕಾಶವನ್ನು ಹರಡಲು ನಿರ್ಮಿಸಲಾಗಿದೆ. ಈ ಮಸ್‌ಜಿದಿನ ಮಿನಾರತ್‌ನ ಏಕಮಾತ್ರ ಉದ್ದೇಶ ಇದೇ ಆಗಿದೆ.

ಏಕದೇವನನ್ನು ಆರಾಧಿಸಲು ಬಯಸುವ ಪ್ರತಿಯೊಬ್ಬನಿಗೆ ನಮ್ಮ ಮಸ್‌ಜಿದ್ ತೆರೆದಿದೆ. ನಾವು ಹಝ್ರತ್ ಪೈಗಂಬರರು(ಸ) ನಮಗೆ ನೀಡಿದ ಮಾದರಿಯನ್ನು ಅನುಸರಿಸುತ್ತೇವೆ. ನಜ್ರಾನ್‌ನಿಂದ ಬಂದ ಕ್ರೈಸ್ತರ ಒಂದು ನಿಯೋಗಕ್ಕೆ ಪ್ರವಾದಿಯವರು ಮದೀನದಲ್ಲಿರುವ ತನ್ನ ಮಸ್‌ಜಿದ್‌ನಲ್ಲಿ ಆರಾಧನೆ ನಡೆಸಲು ಅನುಮತಿಸಿದರು.

ನಮ್ಮ ತತ್ವಗಳು ಶಾಂತಿಗೆ ಸಂಬಂಧಿಸಿವೆ. ನಮ್ಮ ತತ್ವಗಳು ಪ್ರೀತಿಗೆ ಸಂಬಂಧಿಸಿವೆ. ಇವು ನಮಗೆ ಪವಿತ್ರ ಖುರ್‌ಆನ್ ನೀಡಿದ ತತ್ವೋಪದೇಶಗಳಾಗಿವೆ. ಆದರೆ ದುರದೃಷ್ಟಕರವಾಗಿ ಲೋಕವು ಅವುಗಳನ್ನು ಮರೆತುಬಿಟ್ಟಿದೆ. ನಮ್ಮ ಜಮಾಅತಿನ ಸ್ಥಾಪಕರು ನಮಗೆ ಈ ಸುಂದರ ತತ್ವಗಳನ್ನು ಪುನಃ ಕಲಿಸಿದ್ದಾರೆ.

ನಮ್ಮ ಜಮಾಅತಿನ ಸ್ಥಾಪಕರು ನೀಡಿದ ಅಮೋಘ ಉಪದೇಶಗಳ ಕೆಲವು ಉದಾಹರಣೆಗಳನ್ನು ನಾನು ನಿಮ್ಮ ಮುಂದಿರಿಸುತ್ತೇನೆ.

ಅವರು ಹೇಳಿದರು:

"ಧರ್ಮದಲ್ಲಿ ಎರಡು ಪರಿಪೂರ್ಣ ಭಾಗಗಳಿವೆ. ದೇವನನ್ನು ಪ್ರೀತಿಸುವುದು ಮತ್ತು ಆರಾಧಿಸುವುದು ಒಂದನೆಯ ಭಾಗವಾಗಿದೆ. ದೇವನ ಸೃಷ್ಟಿಗಳನ್ನು ಪ್ರೀತಿಸಿ ಅವರ ಹಕ್ಕುಗಳನ್ನು ಸಲ್ಲಿಸುವುದು ಎರಡನೆಯ ಭಾಗವಾಗಿದೆ. ನೀವು ಅವರ ನೋವುಗಳನ್ನು ನಿಮ್ಮ ನೋವಿನ ಹಾಗೆ ಭಾವಿಸಿ ಅವರಿಗಾಗಿ ಪ್ರಾರ್ಥಿಸಬೇಕು."

ಬೇರೆ ಮಾತುಗಳಲ್ಲಿ ಹೇಳುವುದಾದರೆ, ಒಬ್ಬ ನಿಜವಾದ ಮುಸ್ಲಿಮನು ಮಸ್‌ಜಿದ್‌ಗೆ ನಮಾಝ್ ಮಾಡಲು ಬರುವಾಗ ಅವನು ತನ್ನ ಬಗ್ಗೆ, ತನ್ನ ಪತ್ನಿ, ಮಕ್ಕಳು ಮತ್ತು ಸಂಬಂಧಿಕರ ಹಿತಕ್ಕಾಗಿ ಮಾತ್ರವಲ್ಲ, ಅನ್ಯರ ಹಿತಕ್ಕಾಗಿ ಸಹ ಪ್ರಾರ್ಥನೆ ಮಾಡಬೇಕು. ಅವನು ಅನ್ಯರ ಕಷ್ಟದ ಬಗ್ಗೆ ಆತಂಕಿತನಾಗಿ ಅವರ ಕಷ್ಟಗಳನ್ನು ಪರಿಹರಿಸಲು ಅತ್ಯಂತ ಹೆಚ್ಚು ಉತ್ಸಾಹ ತೋರಬೇಕು. ಇತರರಿಗಾಗಿ ಪ್ರಾರ್ಥಿಸುವ ಒಬ್ಬನ ಹೃದಯದಲ್ಲಿ ದ್ವೇಷಾಸೂಯೆಗಳು ಇರಬಹುದೆಂದು ಯಾರಿಗಾದರೂ ಹೇಳಲು ಸಾಧ್ಯವೇ? ಇಲ್ಲ. ಎಂದಿಗೂ ಹೀಗೆ ಆಗಲಾರದು. ಮಸ್‌ಜಿದ್‌ಗೆ ಪ್ರಾರ್ಥನೆಗಾಗಿ ಬರುವ ಹೃದಯವು ಹೀಗೆ ಘೋಷಿಸುವುದು: ದೇವನ ಈ ಭವನ ನನ್ನಲ್ಲಿ ಬದಲಾವಣೆ ಉಂಟು ಮಾಡಿದೆ. ನಾನು ದೇವನ ಸೃಷ್ಟಿಗಳನ್ನು ಪ್ರೀತಿಸಲು ಪ್ರಾರಂಭಿಸಿರುವೆನು.

ವಾಗ್ದತ್ತ ಮಸೀಹ್‌ರವರು(ಅ) ಇನ್ನೊಂದು ಕಡೆ ಹೀಗೆ ಹೇಳುತ್ತಾರೆ:

"ಮನುಷ್ಯರೊಂದಿಗೆ ದಯೆಯಿಂದ ವರ್ತಿಸುವುದು ಆರಾಧನೆಯ ಬಹಳ ಮಹತ್ವಪೂರ್ಣವಾದ ಒಂದು ರೀತಿಯಾಗಿವೆ. ಅದು ಸರ್ವಶಕ್ತನ ಪ್ರೀತಿಯನ್ನು ಗಳಿಸಿಕೊಡುತ್ತದೆ."

ಅವರು ಹೀಗೆ ಮುಂದುವರಿಸುತ್ತಾರೆ:

"ನನ್ನ ದೃಷ್ಟಿಯಲ್ಲಿ ದಯೆತೋರಿಸಲ್ಪಡಬೇಕಾದವರ ವಲಯವು ವಿಶಾಲವಾಗಿದೆ. ಯಾವುದೇ ವ್ಯಕ್ತಿಯನ್ನು ದಯೆಯ ವಲಯದಿಂದ ವಂಚಿತನನ್ನಾಗಿ ಮಾಡಬಾರದು. ನಿಮ್ಮ ದಯೆಯನ್ನು ಮುಸ್ಲಿಮರಿಗೆ ಮಾತ್ರ ಸೀಮಿತಗೊಳಿಸಬೇಕೆಂದು ಇಂದಿನ ಕಾಲಘಟ್ಟದ ಅಜ್ಞಾನಿಗಳ ಹಾಗೆ ನಾನು ಹೇಳಲಾರೆನು. ನೀವು ಅಲ್ಲಾಹನ ಎಲ್ಲಾ ಸೃಷ್ಟಿಗಳ ಮೇಲೆ ದಯೆದೋರಬೇಕು. ಹಿಂದುವಾಗಲಿ, ಮುಸ್ಲಿಮನಾಗಲಿ ಅಥವಾ ಬೇರೆ ಯಾವ ಧರ್ಮಕ್ಕೆ ಸೇರಿದವನಾದರೂ ಸರಿ. ಎಲ್ಲರಿಗೂ ದಯೆದೋರ ಬೇಕು. ತಮ್ಮವರಿಗೆ ದಯೆದೋರುವಿಕೆಯನ್ನು ಸೀಮಿತಗೊಳಿಸುವವರ ಉಪದೇಶಗಳನ್ನು ನಾನು ಎಂದೂ ಮೆಚ್ಚಲಾರೆನು. ನಾನು ನಿಮಗೆ ಪದೇ ಪದೇ ಉಪದೇಶಿಸುತ್ತೇನೆ: ನೀವು ನಿಮ್ಮ ದಯೆದೋರುವಿಕೆಯ ವಲಯವನ್ನು ಸೀಮಿತಗೊಳಿಸಬಾರದು."

ಅವರು ಪುನಃ ಹೇಳುತ್ತಾರೆ:

"ಎಲ್ಲಾ ಪ್ರವಾದಿಗಳ (ಅವರ ಮೇಲೆ ಶಾಂತಿ ಇರಲಿ) ಆಗಮನದ ಉದ್ದೇಶವು ಸರ್ವಶಕ್ತನಾದ ದೇವನ ಪ್ರೀತಿಯನ್ನು ಸ್ಥಾಪಿಸುವುದು, ಮಾನವರಲ್ಲಿ ಪರಸ್ಪರ ವಿಶಿಷ್ಟ ಸಂಬಂಧವನ್ನು ಸ್ಥಾಪಿಸುವುದು ಮತ್ತು ಸಹೋದರರೊಂದಿಗೆ ಉತ್ತಮ ಬಾಂಧವ್ಯ ಸ್ಥಾಪಿಸಿ ಅವರ ಹಕ್ಕುಗಳನ್ನು ಸಲ್ಲಿಸುವುದಾಗಿದೆ. ಹೀಗೆ ಮಾಡದೆ ಇರುವ ತನಕ ಎಲ್ಲಾ ವ್ಯವಹಾರಗಳು ಕೇವಲ ಬಾಹ್ಯಾಚಾರಗಳಾಗುವುವು."

ಇದು ನಮ್ಮ ಜಮಾಅತಿನ ಸ್ಥಾಪಕರು ನೀಡಿದ ಮನೋಹರ ಉಪದೇಶಗಳಾಗಿವೆ. ಪವಿತ್ರ ಖುರ್‌ಆನ್ ನೀಡಿದ ಉಪದೇಶಗಳನ್ನು ವಾಗ್ದತ್ತ ಮಸೀಹರು ವಿಶದೀಕರಿಸಿರುವರು. ಅವುಗಳ ಅಸಂಖ್ಯಾತ ಉದಾಹರಣೆಗಳನ್ನು ನೀಡಬಹುದಾಗಿದೆ.

ಆದುದರಿಂದ ನೀವೆಲ್ಲರೂ ತೀರ್ಪು ನೀಡಲು ಸಾಧ್ಯವಾಗುವುದು. ಮೇಲೆ ವಿವರಿಸಿದಂತಹ ಸುಂದರ ಉಪದೇಶಗಳನ್ನು ನಂಬಿ ಅನುಷ್ಠಾನಕ್ಕೆ ತರುವವರು ತಮ್ಮ ಹೃದಯಗಳಲ್ಲಿ ದ್ವೇಷಾಸೂಯೆಗಳನ್ನು ಹೊಂದಲು ಸಾಧ್ಯವೇ? ಅವರು ಪ್ರೀತಿ, ವಾತ್ಸಲ್ಯ ಮತ್ತು ಶಾಂತಿಯ ಘೋಷಣೆಗಳನ್ನು ಮಾಡಲಾರರೇ?

ಅಹ್ಮದಿಯಾ ಸಂಘಟನೆಯ ಕುರಿತು ಪರಿಚಯ ಹೊಂದಿದವರು, ಶಾಂತಿ ಮತ್ತು ಸುರಕ್ಷತೆಯ ಹೊರತು ಅವರು ಇನ್ನೇನನ್ನೂ ಈ ಸಮುದಾಯದಲ್ಲಿ ಕಾಣಲಿಲ್ಲವೆಂದು ನಿಶ್ಚಯವಾಗಿಯೂ ಹೇಳುವರು.

ಹಝ್ರತ್ ಮುಹಮ್ಮದ್ ಪೈಗಂಬರರ(ಸ) ಮಸೀಹರಾದವರು ಪವಿತ್ರ ಖುರ್‌ಆನಿಗೆ ನೀಡಿದ ವ್ಯಾಖ್ಯಾನಗಳಿಗೆ ಅನುಸಾರವಾಗಿ ಕೊಟ್ಟ ಉಪದೇಶಗಳನ್ನು ನಾನು ಸಂಕ್ಷಿಪ್ತವಾಗಿ ವಿವರಿಸಿದ್ದೇನೆ. ಅವರು "ಎಲ್ಲರೊಂದಿಗೆ ಸ್ನೇಹ; ಯಾರೊಂದಿಗೂ ದ್ವೇಷವಿಲ್ಲ" ಎಂದು ಘೋಷಿಸಿದ್ದಾರೆ. ಇದು ಕಳೆದ ಮೂರು ನಾಲ್ಕು ದಶಕಗಳಲ್ಲಿ ಪ್ರಕಟವಾದ ಸಂದೇಶವಲ್ಲ. ಅಹ್ಮದಿಯಾ ಮುಸ್ಲಿಮ್ ಜಮಾಅತಿನ 120 ವರ್ಷಗಳ ಜೀವಿತ ಕಾಲವು ಹಾಗೆ ಸಾಕ್ಷ್ಯ ನೀಡುತ್ತದೆ. ನಮ್ಮ ಮಸ್‌ಜಿದ್‌ಗಳ ಮಿನಾರತ್‌ಗಳು ಪ್ರೀತಿ, ಶಾಂತಿ ಮತ್ತು ರಕ್ಷಣೆ ನೀಡುವ ಬೆಳಕು ಗೋಪುರಗಳಾಗಿವೆ. ನಾನು ಈ ಮಸ್‌ಜಿದನ್ನು ಉದ್ಘಾಟನೆ ಮಾಡುತ್ತೇನೆ ಮತ್ತು ಪ್ರೀತಿ, ಶಾಂತಿ ಮತ್ತು ರಕ್ಷಣೆಯ ಸಂದೇಶವನ್ನು ನಾನು ಘೋಷಿಸುತ್ತೇನೆ. ಅದು ಲೋಕಾಂತ್ಯದ ತನಕ ನೆಲೆನಿಲ್ಲುವುದು.

ಖಿಲಾಫತ್ ಮೂಲಕ ಐಕ್ಯತೆಯಿಂದ ಇರಲು ಹೇಗೆ ಸಾಧ್ಯವೆಂದು ಅಹ್ಮದಿಯಾ ಜಮಾಅತ್ ತಿಳಿದುಕೊಂಡಿದೆ. ಹಝ್ರತ್ ಮುಹಮ್ಮದ್ ಪೈಗಂಬರರ(ಸ) ಮಸೀಹರೊಂದಿಗೆ ಸ್ಥಾಪಿಸಿರುವ ಸಂಬಂಧದ ಕಾರಣ ದಿಂದ ಈ ಸಂಘಟನೆ ನಿಜವಾದ ಇಸ್ಲಾಮನ್ನು ಅನುಷ್ಠಿಸುತ್ತಾ ಇದೆ. ಈ ಜಮಾಅತ್ ಈ ಸಂದೇಶವು ಮೃತವಾಗಿ ಹೋಗಲು ಎಂದಿಗೂ ಬಿಡಲಾರದು. ಈ ಮಸ್‌ಜಿದ್ ಮತ್ತು ಈ ದೇಶದಲ್ಲಿ ನಾವು ಮುಂದೆ ನಿರ್ಮಿಸಲಿರುವ ಮಸ್‌ಜಿದ್‌ಗಳು ಸಹ ಶಾಂತಿ ಮತ್ತು ರಕ್ಷಣೆಯ

# ಇಸ್ಲಾಮಿಕ ಲೋಕದ ಸಮಸ್ಯೆಗಳಿಗೊಂದು ಪರಿಹಾರ

- ರಫೀಖ್ ಅಹ್ಮದ್ ಹಯಾತ್,
ಅಹ್ಮದಿಯಾ ನ್ಯಾಶನಲ್ ಅಮೀರ್ ಯು.ಕೆ.

ನಾವು ಇಂದು ಬಹು ಜನಾಂಗೀಯ, ಬಹು ಧರ್ಮೀಯ ಮತ್ತು ಬಹು ಸಂಸ್ಕೃತಿಯ ಸಮಾಜದಲ್ಲಿ ಜೀವಿಸುತ್ತಿದ್ದೇವೆ. ಸೌಹಾರ್ದ ದಿಂದಲೂ ಶಾಂತಿಯಿಂದಲೂ ಪ್ರೀತಿಯಿಂದಲೂ ಜೀವಿಸಲು ನಾವು ಒಬ್ಬರಿನ್ನೊಬ್ಬರ ಪರಂಪರೆಗಳನ್ನು, ನಂಬಿಕೆಗಳನ್ನು ಮತ್ತು ಧರ್ಮಗಳನ್ನು ಮನವರಿಕೆ ಮಾಡಿಕೊಳ್ಳಬೇಕಾದುದು ಆವಶ್ಯಕವಾಗಿದೆ. ಇವುಗಳು ಮಾನವರ ಸಂವೇದನೆಗಳ ಮೇಲೆ ಮತ್ತು ಭಾವನೆಗಳ ಮೇಲೆ ಬಹಳ ಪ್ರಭಾವ ಬೀರುತ್ತವೆ.

ವಿವಿಧ ಧರ್ಮಗಳ ಮಧ್ಯೆ ಸಂವಾದವು ಬಿರುಸಾಗಿ ನಡೆಯುತ್ತಿವೆ ಯಾದರೂ ಇಸ್ಲಾಮ್ ಧರ್ಮವನ್ನು ಸದ್ಭಾವನೆಯ ಈ ವಲಯದಿಂದ ಹೊರಗಿಟ್ಟ ಹಾಗೆ ತೋರುತ್ತದೆ. ಪಾಶ್ಚಿಮಾತ್ಯ ಲೋಕವು ಇಸ್ಲಾಮಿನ ಕುರಿತು ವಾಸ್ತವಿಕತೆಗೆ ಸಂಬಂಧವಿರದ ತಪ್ಪುಗ್ರಹಿಕೆಗಳನ್ನು ಹೊಂದಿದೆ. ಇಂದಿನ ಔದಾರ್ಯಪೂರ್ಣವೂ ಸಹಿಷ್ಣುವೂ ಆದ ವಾತಾವರಣದಲ್ಲಿ ಸಹ ಇಸ್ಲಾಮಿನ ವಿರುದ್ಧ ಪೂರ್ವಗ್ರಹಗಳು ತೀವ್ರವಾಗಿ ಮತ್ತು ನಿರಂತರವಾಗಿ ಜಾರಿಯಲ್ಲಿದ್ದು ಅವು ಸಡಿಲಗೊಳ್ಳುವಂತೆ ತೋರುವುದಿಲ್ಲ.

ದುರದೃಷ್ಟವಶಾತ್ ಮುಸ್ಲಿಮ್ ಲೋಕವೇ ವಾಸ್ತವಿಕವಾಗಿ ತಪ್ಪು ಮಾಡಿದೆ. ನೀವು 9/11 ರ ನ್ಯೂಯಾರ್ಕ್ ಘಟನೆಯನ್ನು, 7/7ರ ಲಂಡನ್ ಘಟನೆಯನ್ನು ಪಾಕಿಸ್ತಾನದ ಇಸ್ಲಾಮಾಬಾದಿನ ಲಾಲ್ ಮಸ್‌ಜಿದ್ ಘಟನೆಯನ್ನು ಮತ್ತು ಇತ್ತೀಚೆಗಿನ 26/11ರ ಮುಂಬಯಿ ಹತ್ಯಾಕಾಂಡ ಘಟನೆಯನ್ನು ಉದಾಹರಣೆಗಾಗಿ ತೆಗೆದುಕೊಳ್ಳಿರಿ. ಈ ಘಟನೆಗಳು ಜನರ ಮನಸ್ಸಿನಲ್ಲಿ ಶಾಶ್ವತ ಪ್ರಭಾವ ಬೀರಿವೆ. ಇಸ್ಲಾಮ್ ಧರ್ಮವು ಹಿಂಸಾಚಾರವನ್ನು ಪ್ರೋತ್ಸಾಹಿಸುತ್ತದೆ ಎಂಬ ತಪ್ಪು ಭಾವನೆಯನ್ನು ಜನರಲ್ಲಿ ಮೂಡಿಸಲು ಈ ಘಟನೆಗಳು ಸಹಾಯಕವಾಗಿವೆ.

ಧರ್ಮಾಂಧ ಮುಸ್ಲಿಮ್ ಮತಪಂಡಿತರು ಅನ್ಯಧರ್ಮಗಳ ವಿರುದ್ಧ ದ್ವೇಷವನ್ನೂ ಅಸಹಿಷ್ಣುತೆಯನ್ನೂ ಪ್ರಚಾರಮಾಡುವಂತೆ ತೋರುತ್ತದೆಯಲ್ಲದೆ ಅವರು ತಮ್ಮ ಪಂಥಕ್ಕೆ ಸೇರದ ಅನ್ಯ ಮುಸ್ಲಿಮರ ವಿರುದ್ಧವೂ ಹೀಗೆಯೇ ವರ್ತಿಸುತ್ತಾರೆ. ಮುಸ್ಲಿಮ್ ಪಂಡಿತರ ಅಭಿಪ್ರಾಯಗಳನ್ನು ಅನುಮೋದಿಸ ದವರನ್ನು ಕೂಡಲೇ ಕಾಫಿರ್‌ಗಳು (ಅವಿಶ್ವಾಸಿಗಳು) ಎಂದು ಮುದ್ರೆಯೊತ್ತಿ ಅವರ ಮೇಲೆ ಅಕ್ರಮ ಮತ್ತು ಹಿಂಸಾಚಾರ ನಡೆಸಲು ಪ್ರೋತ್ಸಾಹಿಸ ಲಾಗುತ್ತಿದೆ.

ಪಾಶ್ಚಿಮಾತ್ಯರ ಅಭಿಪ್ರಾಯದಲ್ಲಿ ಇಸ್ಲಾಮಿನ ಶರೀಅತ್ ನಿಯಮಗಳು ಅಸಹಿಷ್ಣುತೆಯನ್ನೂ ಮಾನವ ಹಕ್ಕುಗಳ ನಿರಾಕರಣೆ ಯನ್ನೂ ಜಾರಿಗೊಳಿಸುತ್ತವೆ. ಅದು ಅನ್ಯ ಧರ್ಮಗಳನ್ನು ಸಹಿಸುವುದಿಲ್ಲ. ಶರೀಅತ್ ನಿಯಮಗಳು ಮಹಿಳೆಯರಿಗೆ ಯಾವುದೇ ಹಕ್ಕುಗಳನ್ನು

---

ಚಿಹ್ನೆಗಳಾಗಿ ಪರಿಣಮಿಸುವುವು. ನಾವು ಎಲ್ಲಾ ಧರ್ಮಗಳ ಪ್ರವಾದಿ ಗಳನ್ನೂ ಸಂದೇಶವಾಹಕರನ್ನೂ ಗೌರವಿಸುವವರಾಗಿದ್ದೇವೆ. ನಾವು ಮಾನವರನ್ನೆಲ್ಲಾ ಗೌರವಿಸುತ್ತೇವೆ. ಇದು ನಾವು ಪ್ರತಿಯೊಬ್ಬ ಪ್ರವಾದಿ ಯನ್ನು ನಂಬುವ ಕಾರಣದಿಂದಾಗಿದೆ. ವಿಶ್ವದ ಪ್ರತಿಯೊಂದು ಜನಾಂಗಕ್ಕೆ ಪ್ರವಾದಿಗಳು ಆಗಮಿಸಿದ್ದರೆಂದು ನಾವು ನಂಬುತ್ತೇವೆ. ಅಹ್ಮದಿಯಾ ಮುಸ್ಲಿಮ್ ಜಮಾಅತಿನ ಸ್ಥಾಪಕರ ಬರಹಗಳಿಂದ ನಾನು ಓದಿ ಹೇಳಿದ ಉಲ್ಲೇಖಗಳಲ್ಲಿ, ಎಲ್ಲಾ ಪ್ರವಾದಿಗಳು ಸರ್ವಶಕ್ತನಾದ ಅಲ್ಲಾಹನ ಹಕ್ಕು ಗಳನ್ನು ಮತ್ತು ಅವನ ಸೃಷ್ಟಿಯ ಹಕ್ಕುಗಳನ್ನು ಸ್ಥಾಪಿಸಲು ಆಗಮಿಸಿದರು ಎಂದು ಹೇಳಲಾಗಿದೆ. ಇದು ಪವಿತ್ರ ಖುರ್‌ಆನ್ ನಮಗೆ ಕಲಿಸಿದುದೇ ಆಗಿದೆ. ಹಝ್ರತ್ ಪೈಗಂಬರರು(ಸ) ತನ್ನ ನಡೆವಳಿಕೆ ಮೂಲಕ ನಮಗೆ ಇದೇ ಉಪದೇಶವನ್ನು ಕೃತಿಗಿಳಿಸಿ ತೋರಿಸಿದ್ದರು.

ಆದುದರಿಂದ, ಕೆಲವೇ ಜನರ ಕೃತ್ಯಗಳು ಇಸ್ಲಾಮಿನ ಬಗ್ಗೆ ಮಿಥ್ಯ ಚಿತ್ರಣವನ್ನು ನೀಡಿದ್ದರೆ ಇಸ್ಲಾಮಿನ ಉಪದೇಶಗಳಲ್ಲಿ ತಪ್ಪು ಇದೆ ಎಂದು ಸಾಬೀತಾಗುವುದಿಲ್ಲ. ನಾನು ನಮ್ಮ ಗಣ್ಯ ಅತಿಥಿ ಗಳೊಂದಿಗೆ ಅಪೇಕ್ಷಿಸಲು ಈ ಸಂದರ್ಭವನ್ನು ಬಳಸಿಕೊಳ್ಳುತ್ತೇನೆ. ಪ್ರೀತಿ ಭರಿತ ವಾತಾವರಣವನ್ನು ಸೃಷ್ಟಿಸಲು ನೀವು ಮುಂದೆ ಬಂದು ನಮಗೆ ಸಹಾಯಮಾಡಿರಿ. ಇದರ ಫಲವಾಗಿ ನಾವು ಈ ಲೋಕವನ್ನು ನಾಶದಿಂದ ರಕ್ಷಿಸಬಹುದು ಮತ್ತು ನಮ್ಮ ಮುಂದಿನ ಪೀಳಿಗೆಗಳನ್ನೂ ರಕ್ಷಿಸಿ ಸುಧಾರಣೆ ಮಾಡಬಹುದು. ನಾವು ಅವರನ್ನು ಯುದ್ಧದ ಅಗ್ನಿಯಿಂದ ರಕ್ಷಿಸೋಣ.

ಇಂದು, ಅಣು ಆಯುಧಗಳ ಈ ಯುಗದಲ್ಲಿ ಲೋಕವು ನಾಶದ ಪ್ರಪಾತದ ಅಂಚಿನಲ್ಲಿ ಕುಳಿತಿದೆ. ಸರ್ವನಾಶವುಂಟುಮಾಡುವ ಈ ಆಯುಧಗಳು ಸ್ಫೋಟಿಸಿದರೆ ಮುಂದಿನ ಪೀಳಿಗೆಗಳು, ಅವರ ಮೇಲೆ ಶಾಶ್ವತ ಅಂಗವೈಕಲ್ಯಗಳನ್ನು ಹೇರಿದುದಕ್ಕಾಗಿ ನಮ್ಮನ್ನು ಕ್ಷಮಿಸಲಾರರು.

ಈಗ ಸೃಷ್ಟಿಕರ್ತನ ಹಕ್ಕುಗಳ ಬಗ್ಗೆ ಮತ್ತು ಅವನ ಸೃಷ್ಟಿಗಳ ಹಕ್ಕುಗಳ ಬಗ್ಗೆ ಗಮನಿಸಲು ಸಾಕಷ್ಟು ಸಮಯವಿದೆ. ಅಲ್ಲಾಹನು ನಮಗೆ ಹಾಗೆ ಮಾಡಲು ಸಾಧ್ಯವಾಗುವಂತೆ ದಯೆದೋರಲಿ.

ಇಲ್ಲಿಗೆ ಬಂದ ಎಲ್ಲಾ ಅತಿಥಿಗಳಿಗೆ ನಾನು ಇನ್ನೊಮ್ಮೆ ಕೃತಜ್ಞತೆ ಅರ್ಪಿಸುತ್ತೇನೆ. ಅವರು ಇಲ್ಲಿಗೆ ಬಂದು ಈ ಸಮಾರಂಭದಲ್ಲಿ ಭಾಗವಹಿಸಿದರು. ಅವರು ನಮ್ಮ ಪ್ರೀತಿಗೆ ಪ್ರೀತಿಯಿಂದ ಪ್ರತಿಕ್ರಿಯಿಸಿದರು. ನಾವು ಕೇವಲ ಆಚಾರರೂಪದಲ್ಲಿ ಕೃತಜ್ಞತೆ ಅರ್ಪಿಸುತ್ತಾ ಇಲ್ಲ. ಅದು ಹೃತ್ಪೂರ್ವಕವಾಗಿ ಅರ್ಪಿಸಿದುದಾಗಿದೆ. ಅದು ಹಝ್ರತ್ ಪೈಗಂಬರರ(ಸ) ಭವ್ಯ ಉಪದೇಶಗಳಿಗೆ ಅನುಸಾರವಾಗಿದೆ. ಅವರು ಹೀಗೆ ಹೇಳಿದರು: "ಯಾರು ಮನುಷ್ಯನಿಗೆ ಕೃತಜ್ಞತೆ ಅರ್ಪಿಸುವುದಿಲ್ಲವೋ ಅವರು ಸರ್ವಶಕ್ತನಾದ ದೇವನಿಗೂ ಕೃತಜ್ಞತೆ ಅರ್ಪಿಸುವುದಿಲ್ಲ." ನಾನು ಇದರ ಮೊದಲು ಹೇಳಿದ ಹಾಗೆ ಪ್ರತಿಯೊಬ್ಬ ಅಹ್ಮದಿ ಮುಸ್ಲಿಮನ ಕರ್ತವ್ಯ ಸರ್ವಶಕ್ತನಾದ ಅಲ್ಲಾಹನ ಪ್ರೀತಿಯನ್ನು ಗಳಿಸುವುದಾಗಿದೆ. ಆದುದರಿಂದ ನಾವು ಅರ್ಪಿಸುವ ಕೃತಜ್ಞತೆಗಳು ಅಲ್ಲಾಹನಿಗೋಸ್ಕರ ಅರ್ಪಿಸಲ್ಪಡುತ್ತಿವೆ. ಅಲ್ಲಾಹನು ಎಲ್ಲಾ ಮನುಷ್ಯರ ಬಗ್ಗೆ ಬಹಳ ಪ್ರೀತಿಯನ್ನು ಹೊಂದಿದ್ದಾನೆ. ನಾವು ಅಲ್ಲಾಹನ ಸೃಷ್ಟಿಗಳನ್ನು ಪ್ರೀತಿಸುವುದು ಯಾವುದೇ ಸ್ವಾರ್ಥದ ಉದ್ದೇಶದಿಂದಲ್ಲ. ನಾವು ಸರ್ವಶಕ್ತನಾದ ದೇವನ ಪ್ರೀತಿಗಳಿಸಲು ಜನರನ್ನು ಪ್ರೀತಿಸುತ್ತೇವೆ. ನಮ್ಮನ್ನು ಮತ್ತು ನಿಮ್ಮೆಲ್ಲರನ್ನು ಇಲ್ಲಿ ಯಾವಾಗಲೂ ಪ್ರೀತಿ ವಾತ್ಸಲ್ಯದ ವಾತಾವರಣವನ್ನು ಕಾಪಾಡುವಂತೆ ಸರ್ವಶಕ್ತನಾದ ದೇವನು ಅನುಗ್ರಹಿಸಲಿ. ಆಮೀನ್ (ಓ ಅಲ್ಲಾಹ್ ಹಾಗೆಯೇ ಮಾಡು).

ಇನ್ನೊಮ್ಮೆ ನಿಮಗೆ ಕೃತಜ್ಞತೆಗಳು. ☆

(The Review of Religions - October 2008)

ಅನುವಾದಕ : ಎಂ. ಉಬೈದುಲ್ಲಾ

ನೀಡದೆ ಅವರನ್ನು ದ್ವಿತೀಯ ದರ್ಜೆಯ ಪೌರರನ್ನಾಗಿ ಮಾಡುತ್ತದೆ. ಅವರ ಈ ನಿಲುವು ಪತ್ರಿಕೆಗಳಲ್ಲಿ ಪ್ರಕಟವಾಗುವ, ಗೌರವಕ್ಕಾಗಿ ಮಾಡಿದ ಹತ್ಯೆಗಳು ಮತ್ತು ಅಫ್‌ಘಾನಿಸ್ತಾನದಲ್ಲಿಯೂ ಪಾಕಿಸ್ತಾನದಲ್ಲಿಯೂ ಮಹಿಳೆಯರೊಂದಿಗೆ ವರ್ತಿಸುವ ರೀತಿಯ ಕುರಿತು ವರದಿಗಳ ಮೇಲೆ ಆಧಾರಿತವಾಗಿದೆ.

ವಾಸ್ತವಿಕವಾಗಿ ಇಸ್ಲಾಮ್ ಧರ್ಮವು ಒಡಕನ್ನೂ ದ್ವೇಷವನ್ನೂ ಉಪದೇಶಿಸುವುದಿಲ್ಲ. ಇಸ್ಲಾಮ್ ಧರ್ಮ ಶಾಂತಿ, ಸಹಬಾಳ್ವೆ ಮತ್ತು ಪರಸ್ಪರರನ್ನು ಅರ್ಥಮಾಡಿಕೊಳ್ಳುವುದನ್ನು ಮಾತ್ರ ನಮಗೆ ಉಪದೇಶಿಸುತ್ತಿದೆ. ಇಸ್ಲಾಮ್ ಧರ್ಮವು ಅದರ ವೈಚಾರಿಕತೆ ಮತ್ತು ಪರಿಪೂರ್ಣತೆಯ ದೃಷ್ಟಿಯಲ್ಲಿ ಎಲ್ಲಾ ಧರ್ಮಗಳಲ್ಲಿ ಅತ್ಯುನ್ನತ ಸ್ಥಾನದಲ್ಲಿದೆ. ಹೀಗಿರುವಾಗ ಮುಸ್ಲಿಮ್ ಲೋಕವು ವೈಯಕ್ತಿಕ ಭಿನ್ನಾಭಿಪ್ರಾಯಗಳು, ಅಂತಾರಾಷ್ಟ್ರೀಯ ವಿಭಜನೆಗಳು, ಪಂಥಗಳಿಗೆ ಸಂಬಂಧಿಸಿದ ಮತ್ತು ರಾಜಕೀಯ ಸಮಸ್ಯೆಗಳಿಂದ ಪೀಡಿತವಾಗಿರುವುದು ಏಕೆ? ಮುಸ್ಲಿಮ್ ಲೋಕದಲ್ಲಿ ಈ ಪರಿಸ್ಥಿತಿ ಉಂಟಾದುದು ಹೇಗೆ? ಇದಕ್ಕೆ ಪರಿಹಾರವೇನು ಎಂದು ಪ್ರಶ್ನಿಸಬಹುದಾಗಿದೆ.

ಸಮಸ್ಯೆಯನ್ನು ಅರ್ಥಮಾಡಿಕೊಳ್ಳಲು ಮತ್ತು ಪರಿಹಾರ ಕಂಡುಕೊಳ್ಳಲು ನಾವು ಇಸ್ಲಾಮಿನ ಚರಿತ್ರೆಯ ಆರಂಭ ಕಾಲಕ್ಕೆ ಹೋಗಬೇಕು. ಇಸ್ಲಾಮ್ ಧರ್ಮವು ಸ್ಥಾಪಿತವಾಗುವುದಕ್ಕೆ ಮೊದಲು ಅರಬ್ ಲೋಕವು ನೈತಿಕ, ಆಧ್ಯಾತ್ಮಿಕ ಮತ್ತು ಬೌದ್ಧಿಕ ಮಾರ್ಗದರ್ಶನದ ಅತ್ಯಾವಶ್ಯಕತೆಯನ್ನು ಹೊಂದಿತ್ತು. ಹಝ್‌ರತ್ ಮುಹಮ್ಮದ್ ಪೈಗಂಬರ್(ಸ), ಪ್ರವಾದಿಗಳ ಮುದ್ರೆಯಾದ ಆ ಮಹಾನ್ ಪ್ರವಾದಿಯನ್ನು ಸರ್ವಶಕ್ತನಾದ ಅಲ್ಲಾಹನು ನಮ್ಮನ್ನೆಲ್ಲಾ ನೇರಮಾರ್ಗದಲ್ಲಿ ನಡೆಸಿ ದೇವನ ಸಾಮೀಪ್ಯಕ್ಕೆ ಕೊಂಡೊಯ್ಯಲು ಮತ್ತು ನಮ್ಮೊಳಗೆ ಆಂತರಿಕ ಶಾಂತಿಯನ್ನು ಪ್ರದಾನ ಮಾಡಲು ಕಳುಹಿಸಿದನು. ಪವಿತ್ರ ಖುರ್‌ಆನ್ ಮತ್ತು ಪ್ರವಾದಿಯವರ(ಸ) ನಡವಳಿಕೆಗಳು ಮಾನವರಿಗೆಲ್ಲಾ ಮಾರ್ಗದರ್ಶನದ ದೀಪಸ್ತಂಭವಾಗಿ ಲೋಕಾಂತ್ಯದ ತನಕ ಬಾಕಿಯಾಗಿ ಉಳಿಯುವುದು.

ಹಝ್‌ರತ್ ಪೈಗಂಬರರು(ಸ) ತನ್ನ ಉಪದೇಶಗಳನ್ನು ಸಂಕ್ಷಿಪ್ತವಾಗಿ ಕ್ರೋಢೀಕರಿಸಿ ಹಿಜರಿ ಹತ್ತನೆಯ ವರ್ಷದ ಝುಲ್‌ಹಿಜ್ಜ ಮಾಸದ 9ನೇ ದಿನಾಂಕ ಮಕ್ಕದ ಸಮೀಪವಿರುವ ಅರಫಾತ್ ಮೈದಾನದಲ್ಲಿ ಪ್ರವಚನ ನೀಡಿದರು. ಹೆಚ್ಚಿನ ವಿವರಗಳಿಗೆ ಹೋಗದೆ ಪ್ರವಚನದ ಮುಖ್ಯ ಅಂಶಗಳನ್ನು ನಾನು ನಿಮ್ಮ ಮುಂದಿರಿಸುತ್ತೇನೆ.

ಅಲ್ಲಾಹನನ್ನು ಸ್ತುತಿಸಿ ಅವನಿಗೆ ಕೃತಜ್ಞತೆ ಅರ್ಪಿಸಿದ ನಂತರ ಹಝ್‌ರತ್ ಪೈಗಂಬರರು(ಸ) ಹೇಳಿದರು:

> "ಓ ಜನರೇ, ನನ್ನ ಮಾತುಗಳನ್ನು ಕಿವಿಗೊಟ್ಟು ಕೇಳಿರಿ. ನಾನು ಈ ವರ್ಷದ ನಂತರ ಇಂತಹ ಸನ್ನಿವೇಶದಲ್ಲಿ ನಿಮ್ಮನ್ನು ಪುನಃ ಕಾಣುವೆನೋ ಎಂದು ನನಗೆ ತಿಳಿದಿಲ್ಲ. ಆದುದರಿಂದ ನಾನು ಹೇಳುವುದನ್ನು ಶ್ರದ್ಧೆಯಿಂದ ಆಲಿಸಿ ಇಲ್ಲಿ ಉಪಸ್ಥಿತರಿಲ್ಲದವರಿಗೆ ಅವುಗಳನ್ನು ತಲಪಿಸಿರಿ.
>
> ಓ ಜನರೇ, ನೀವು ಈ ಮಾಸವನ್ನೂ ಈ ದಿನವನ್ನೂ ಈ ನಗರವನ್ನೂ ಪವಿತ್ರವೆಂದು ಗಣಿಸುವ ಹಾಗೆಯೇ ಪ್ರತಿಯೊಬ್ಬ ಮುಸ್ಲಿಮನ ಜೀವವನ್ನೂ ಸ್ವತ್ತನ್ನೂ ಪವಿತ್ರವಾದ ವಿಶ್ವಸ್ತನಿಧಿ ಎಂದು ಗಣಿಸಿರಿ.
>
> ನೀವು ಯಾರನ್ನೂ ನೋಯಿಸಬೇಡಿರಿ. ಆಗ ಯಾರೂ ನಿಮಗೆ ನೋವುಂಟುಮಾಡಲಾರರು. ನೀವು ನಿಮ್ಮ ಪ್ರಭುವನ್ನು ಭೇಟಿಯಾಗಲಿರುವಿರೆಂದೂ ಅವನು

ನಿಮ್ಮ ಕೃತ್ಯಗಳ ಲೆಕ್ಕ ತೆಗೆಯುವನೆಂದೂ ನೀವು ನೆನಪಿಟ್ಟುಕೊಳ್ಳಿರಿ. ನೀವು ಶೈತಾನನ ಬಗ್ಗೆ ಎಚ್ಚರಿಕೆಯಿಂದ ಇದ್ದು ನಿಮ್ಮ ಧರ್ಮವನ್ನು ರಕ್ಷಿಸಿರಿ. ಅವನು ನಿಮ್ಮನ್ನು ದೊಡ್ಡ ಪಾಪಗಳಿಗೆ ಎಳೆದೊಯ್ಯುವ ಬಗ್ಗೆ ನಿರಾಶನಾಗಿರುವನು. ಆದುದರಿಂದ ನೀವು ಅವನನ್ನು ಅನುಸರಿಸಿ ಕಿರು ಪಾಪಗಳನ್ನು ಮಾಡುವುದರ ಬಗ್ಗೆ ಜಾಗರೂಕರಾಗಿರಿ.

ಓ ಜನರೇ, ನಿಮಗೆ ನಿಮ್ಮ ಮಹಿಳೆಯರ ಮೇಲೆ ಹಕ್ಕುಗಳಿವೆ. ಮಹಿಳೆಯರಿಗೂ ನಿಮ್ಮ ಮೇಲೆ ಹಕ್ಕುಗಳಿವೆ. ನೀವು ಅವರನ್ನು ಪತ್ನಿಯರನ್ನಾಗಿ ಮಾಡಿಕೊಂಡಿರುವುದು ಅಲ್ಲಾಹನನ್ನು ನಂಬಿಕೊಂಡು ಮತ್ತು ಅವನ ಅನುಮತಿಯೊಂದಿಗೆ ಆಗಿದೆ ಎಂಬುದನ್ನು ನೆನಪಿಡಿರಿ. ಅವರು ನಿಮ್ಮ ಹಕ್ಕುಗಳನ್ನು ನೀಡುತ್ತಿರುವರಾದರೆ, ಅವರಿಗೆ ಆಹಾರ ಮತ್ತು ಉಡುಗೆ ತೊಡುಗೆಗಳನ್ನು ದಯೆಯಿಂದ ನೀಡುವುದು ಅವರಿಗೆ ಸಲ್ಲಿಸಬೇಕಾದ ಹಕ್ಕಾಗಿದೆ. ನೀವು ನಿಮ್ಮ ಮಹಿಳೆಯರನ್ನು ಚೆನ್ನಾಗಿ ನೋಡಿಕೊಳ್ಳಿರಿ. ಅವರಿಗೆ ದಯೆದೋರಿರಿ. ಅವರು ನಿಮ್ಮ ಜೀವಿತದ ಪಾಲುಗಾರರೂ ನಿಮಗೆ ಬದ್ಧರಾಗಿರುವ ಸಹಾಯಕರೂ ಆಗಿದ್ದಾರೆ. ನೀವು ಇಷ್ಟಪಡದ ಯಾರೊಂದಿಗೂ ಅವರು ಸ್ನೇಹ ಸಂಬಂಧ ಸ್ಥಾಪಿಸಬಾರದು ಮತ್ತು ಅವರು ತಮ್ಮ ಚಾರಿತ್ರ್ಯವನ್ನು ಕಾಪಾಡಬೇಕು. ಇದು ನಿಮ್ಮ ಹಕ್ಕುಗಳಾಗಿವೆ.

ಓ ಜನರೇ, ನನ್ನ ಮಾತುಗಳನ್ನು ಶ್ರದ್ಧೆಯಿಂದ ಆಲಿಸಿರಿ. ನೀವು ಅಲ್ಲಾಹನನ್ನು ಆರಾಧಿಸಿರಿ. ಐದು ಹೊತ್ತಿನ ನಮಾಝ್ ಮಾಡಿರಿ. ರಮಝಾನ್ ತಿಂಗಳಲ್ಲಿ ಉಪವಾಸ ಅನುಷ್ಠಿಸಿರಿ. ಝಕಾತ್ ಕೊಡಿರಿ. ನಿಮಗೆ ಸಾಧ್ಯವಿದ್ದರೆ ಹಜ್ಜ್ ಮಾಡಿರಿ.

ಮಾನವರೆಲ್ಲರೂ ಆದಮ್ ಮತ್ತು ಹವ್ವಾರವರ ಸಂತತಿಗಳಾಗಿದ್ದಾರೆ. ಅರಬಿಗೆ ಅರಬಿಯೇತರನ ಮೇಲೆ ಯಾವ ಶ್ರೇಷ್ಠತೆಯೂ ಇಲ್ಲ. ಅರಬಿಯೇತರನಿಗೆ ಅರಬಿಯ ಮೇಲೆ ಕೂಡ ಯಾವ ಶ್ರೇಷ್ಠತೆಯೂ ಇಲ್ಲ. ಬಿಳಿವರ್ಣದವನಿಗೆ ಕಪ್ಪು ವರ್ಣದವನ ಮೇಲೆ ಯಾವ ಶ್ರೇಷ್ಠತೆಯೂ ಇಲ್ಲ. ಕಪ್ಪು ವರ್ಣದವನಿಗೆ ಬಿಳಿ ವರ್ಣದವನ ಮೇಲೆ ಕೂಡ ಯಾವ ಶ್ರೇಷ್ಠತೆಯೂ ಇಲ್ಲ-ಭಯ ಭಕ್ತಿ ಮತ್ತು ಸತ್ಕಾರ್ಯಗಳಲ್ಲಿ ಹೊರತು.

ಪ್ರತಿಯೊಬ್ಬ ಮುಸ್ಲಿಮನು ಪ್ರತಿಯೊಬ್ಬ ಮುಸ್ಲಿಮನ ಸಹೋದರನಾಗಿದ್ದಾನೆ. ಮುಸ್ಲಿಮರು ಒಂದೇ ಭ್ರಾತೃತ್ವಕ್ಕೆ ಸೇರಿದವರು.

ಒಬ್ಬ ಮುಸ್ಲಿಮನಿಗೆ ಇನ್ನೊಬ್ಬ ಮುಸ್ಲಿಮನು ಸ್ವಂತ ಇಷ್ಟದಿಂದ ಏನನ್ನಾದರೂ ಕೊಟ್ಟದ್ದು ಹೊರತು ಉಳಿದ ಅವನ ಸಂಪತ್ತು ಇನ್ನೊಬ್ಬ ಮುಸ್ಲಿಮನಿಗೆ ನಿಷಿದ್ಧವಾಗಿದೆ. ನೀವು ನಿಮಗೆಯೇ ಅನ್ಯಾಯ ಮಾಡಬೇಡಿರಿ.

ನೀವು ಒಂದು ದಿನ ಅಲ್ಲಾಹನನ್ನು ಭೇಟಿಯಾಗುವಿರಿ ಮತ್ತು ನಿಮ್ಮ ಕೃತ್ಯಗಳ ಕುರಿತು ಲೆಕ್ಕ ವೊಪ್ಪಿಸಲಿಕ್ಕಿದೆ ಎಂದು ನೆನಪಿಟ್ಟುಕೊಳ್ಳಿರಿ. ನೀವು ಎಚ್ಚರಿಕೆಯಿಂದ ಇರಬೇಕು. ನಾನು ಹೋದನಂತರ ನೀವು ನೇರಮಾರ್ಗದಿಂದ ದಾರಿ ತಪ್ಪಿಹೋಗಬಾರದು.

ಓ ಜನರೇ, ನನ್ನ ಮಾತುಗಳನ್ನು ಮನವರಿಕೆ ಮಾಡಿಕೊಳ್ಳಿರಿ. ನಾನು ಪವಿತ್ರ ಖುರ್‌ಆನ್ ಮತ್ತು ನನ್ನ ಸುನ್ನವನ್ನು (ನಡೆವಳಿಕೆಯನ್ನು) ನಿಮಗೆ ಬಿಟ್ಟು ಹೋಗುತ್ತಿದ್ದೇನೆ. ನೀವು ಇವೆರಡನ್ನು ಅನುಸರಿಸಿದರೆ ನೀವು ಎಂದೂ ದಾರಿತಪ್ಪಿ ಹೋಗಲಾರಿರಿ.

ನನ್ನ ಮಾತುಗಳನ್ನು ಆಲಿಸಿದವರು ನನ್ನ ಮಾತುಗಳನ್ನು ಇಲ್ಲಿಗೆ ಬಾರದ ಜನರಿಗೆ ತಲಪಿಸಬೇಕು. ಅವರು ಬೇರೆಯವರಿಗೆ ತಲಪಿಸಬೇಕು. ಪ್ರಾಯಶಃ ನನ್ನನ್ನು ನೇರವಾಗಿ ಆಲಿಸಿದವರಿಗಿಂತ ನನ್ನ ಮಾತನ್ನು ಇತರರಿಂದ ಆಲಿಸಿದವರು ಹೆಚ್ಚು ಚೆನ್ನಾಗಿ ಮನವರಿಕೆ ಮಾಡಿಕೊಳ್ಳುವರು.

ಓ ಅಲ್ಲಾಹ್ ನಾನು ನಿನ್ನ ಸಂದೇಶವನ್ನು ತಲಪಿಸಿದುದಕ್ಕೆ ನೀನು ಸಾಕ್ಷಿಯಾಗು."

1400 ವರ್ಷಗಳಿಗಿಂತ ಹಿಂದೆ ಹಝ್ರತ್ ಪೈಗಂಬರರು(ಸ) ನೀಡಿದ ಉಪದೇಶಗಳು ನಿಜವಾದ ಮಾನವ ಹಕ್ಕುಗಳ ಸನ್ನದಿನ ರೂಪದಲ್ಲಿದೆ. ಆಧುನಿಕ ಲೋಕವಾದರೋ 1949ರಲ್ಲಿ ಸಂಯುಕ್ತ ರಾಷ್ಟ್ರ ಸಂಸ್ಥೆಯ ಮೂಲಕ ಮಾನವ ಹಕ್ಕುಗಳ ಶಾಸನ ಪತ್ರವನ್ನು ಜಾರಿಗೊಳಿಸಿತು. ದುರದೃಷ್ಟಕರವಾಗಿ ಮುಸ್ಲಿಮ್ ಲೋಕ ಈ ಉಪದೇಶಗಳನ್ನು ಮರೆತಿವೆ. ಅದರ ಪರಿಣಾಮವಾಗಿ ಮುಸ್ಲಿಮ್ ಲೋಕವು ಇಂದು ಹೀನಾಯ ಸ್ಥಿತಿಯಲ್ಲಿದೆ.

ಮುಸ್ಲಿಮ್ ಲೋಕವು ವಿಶ್ವಾಸಾರ್ಹತೆ, ಸಮತೆ, ನ್ಯಾಯ, ಕ್ಷಮೆ ಮತ್ತು ಭ್ರಾತೃತ್ವ ಗುಣಗಳನ್ನು ತಮ್ಮಲ್ಲಿ ಅಳವಡಿಸಿಕೊಳ್ಳುವುದು ಆವಶ್ಯಕವಾಗಿದೆ. ಆದರೆ ಎಲ್ಲದಕ್ಕಿಂತಲೂ ಮುಖ್ಯವಾಗಿ ದೇವಭಕ್ತಿಯನ್ನು ಹೊಂದಬೇಕು. ದೇವಭಕ್ತಿಯನ್ನು ಹೊಂದಿದರೆ ಉಳಿದ ಎಲ್ಲಾ ಗುಣಗಳು ಅದರಿಂದ ಹೊರಹರಿಯುವುವು. ಶಾಂತಿ ಎಂದರೆ ಕೇವಲ ಶಾರೀರಿಕ ಭದ್ರತೆ ಅಥವಾ ಯುದ್ಧ ಇಲ್ಲದಿರುವುದಕ್ಕೆ ಸೀಮಿತವಾಗಿಲ್ಲ. ಇವು ಶಾಂತಿಯ ವಿಶಾಲ ಘಟಕಗಳಿಗೆ ಸೇರಿವೆ ಸರಿ. ಶಾಂತಿ ಎಂದರೆ ಸ್ನೇಹಮಯ ಸಂಬಂಧ ತನ್ನ ಸೃಷ್ಟಿಕರ್ತನೊಂದಿಗೆ ಸ್ಥಾಪಿಸಿ ತನ್ನ ಸಹಜೀವಿಗಳ ಜೊತೆ ಸಹ ಸ್ನೇಹ ಮತ್ತು ಸೌಹಾರ್ದಮಯ ಸಂಬಂಧ ಏರ್ಪಡಿಸುವುದು. ಶಾಂತಿಯು ಮನುಷ್ಯನ ಹೃದಯದಿಂಧ ಉದ್ಭವಿಸಬೇಕು. ಒಬ್ಬನು ಸ್ವಯಂ ಶಾಂತಿಯೊಂದಿಗೆ ಇರದಿದ್ದರೆ ತನ್ನ ಸಹೋದರನ ಜೊತೆ ಸಹ ಶಾಂತಿಯಿಂದ ಜೀವಿಸಲಾರನು. ಒಬ್ಬನು ಸ್ವಯಂ ಶಾಂತಿಯನ್ನು ಕಂಡುಕೊಳ್ಳಬೇಕಾದರೆ ಅವನು ತನ್ನ ಸೃಷ್ಟಿಕರ್ತನೊಂದಿಗೆ ಶಾಂತಿಯಿಂದಿರಬೇಕು. ಇದು ಶಾಂತಿಯ ಮೂಲತತ್ವವಾಗಿದೆ.

ದೈವಿಕ ಮಾರ್ಗದರ್ಶನದ ವಿಶಾಲ ಸರೋವರವಾದ ಪವಿತ್ರ ಖುರ್‌ಆನ್ ಹೀಗೆ ಹೇಳುತ್ತದೆ:

**"ಯಾರು ವಿಶ್ವಾಸ ಹೊಂದಿ ತಮ್ಮ ನಂಬಿಕೆಯನ್ನು ಅನ್ಯಾಯದೊಂದಿಗೆ ಮಿಶ್ರಮಾಡುವುದಿಲ್ಲವೋ ಅವರಿಗೆ ಶಾಂತಿ ಸಮಾಧಾನವಿದೆ. ಅವರು ಸರಿಯಾದ ಮಾರ್ಗದರ್ಶನ ಹೊಂದಿದವರಾಗಿದ್ದಾರೆ."**

**(ಅಧ್ಯಾಯ 6 ವಚನ 83)**

ವಾಸ್ತವಿಕವಾಗಿ ನ್ಯಾಯಪರತೆ ಮತ್ತು ಪರಿಪೂರ್ಣ ನ್ಯಾಯದಾನವು ಮೂಲಾಧಾರವಾಗಿದೆ. ಅದರ ಸುತ್ತಮುತ್ತು ನ್ಯಾಯನಿಷ್ಠ ಸಮಾಜವನ್ನು ಕಟ್ಟಬಹುದಾಗಿದೆ. ಸತ್ಯವನ್ನು ಅವಲಂಬಿಸುವುದು ಮತ್ತು ನ್ಯಾಯಬದ್ಧವಾಗಿ ವರ್ತಿಸುವುದು ವಿವಾದಗಳಿಗೆ ಸೀಮಿತಗೊಳಿಸಲ್ಪಟ್ಟಿಲ್ಲ. ಅದು ಜೀವಿತದ ಎಲ್ಲಾ ಕ್ಷೇತ್ರಗಳಿಗೂ ಅನ್ವಯಿಸುತ್ತದೆ. ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ (ಅಹ್ಮದಿಯಾ ಪಂಚಮ ಖಲೀಫ) 2007ರ ಶಾಂತಿ ಸಮ್ಮೇಳನದಲ್ಲಿ ಪರಿಪೂರ್ಣ ನ್ಯಾಯದಾನದ ಬಗ್ಗೆ ಜಾಗತಿಕ ವಾತಾವರಣಕ್ಕೆ ಅನ್ವಯಿಸುವ ಹಾಗೆ ವಿವರಿಸಿದರು. ಅವರು ಹೇಳಿದರು:

"ಲೋಕದ ಜನಾಂಗಗಳು ಮತ್ತು ದೇಶಗಳು ಈ ರೀತಿ ಶಾಂತಿಯನ್ನು ಸ್ಥಾಪಿಸಲು ಪ್ರಯತ್ನಿಸಿದರೆ ಲೋಕದಲ್ಲಿ ಶಾಂತಿಸ್ಥಾಪನೆ ಸಾಧ್ಯವಾಗುವುದು. ಲೀಗ್ ಆಫ್ ನೇಶನ್ಸ್ ನ್ಯಾಯಕ್ಕೆ ಸಂಬಂಧಿಸಿದ ತತ್ವಗಳನ್ನು ಪಾಲಿಸದಿದ್ದುದರಿಂಧ ಅದು ಅವನತಿ ಹೊಂದಿತು. ಇಂದು ಸಂಯುಕ್ತ ರಾಷ್ಟ್ರ ಸಂಘ (UNO) ಸಹ ನ್ಯಾಯಪಾಲನೆ ಮಾಡುವುದರಲ್ಲಿ ಸೋತುಹೋಗಿದೆ. ಬೇರೆ ಬೇರೆ ದೇಶಗಳಿಗೆ ಮತ್ತು ಬೇರೆ ಬೇರೆ ಭೂಖಂಡಗಳಿಗೆ ಸಂಬಂಧಿಸಿ ನ್ಯಾಯದಾನದ ಬೇರೆ ಬೇರೆ ಮಾನದಂಡಗಳು ಅದಕ್ಕೆ ಇವೆ. ಕೆಲವೇ ಕೆಲವು ತೀರ್ಮಾನಗಳ ಹೊರತು ಬಹುತೇಕ ಠರಾವುಗಳು ಹಿಂದೆ ಮತ್ತು ಇಂದು ಅಂಗೀಕರಿಸಲ್ಪಡುವುದು, ಕೆಲವು ದೇಶಗಳ ಹಿತಾಸಕ್ತಿಗನುಸಾರವಾಗಿ ಆಗಿದೆ. ಎಲ್ಲಾ ದೇಶಗಳೊಂದಿಗೆ ಸಮಾನವಾಗಿ ವರ್ತಿಸುವ ತನಕ, ಅಸಮಾಧಾನಗಳನ್ನು ಮತ್ತು ನ್ಯಾಯ ಲಭಿಸದ ಭಾವನೆ ಹೋಗಲಾಡಿಸುವ ತನಕ ಎಷ್ಟು ಸಂಸ್ಥೆಗಳನ್ನು ರೂಪಿಸಿದರೂ ಲೋಕಕ್ಕೆ ಶಾಂತಿ ಲಭಿಸಲಾರದು. ಮುಸ್ಲಿಮರಿಗೆ ನ್ಯಾಯಪರತೆ ಕುರಿತು ಉಪದೇಶಿಸಲಾಗಿದ್ದರೂ ಅವರು ಸ್ವತಃ ಅದನ್ನು ಅನುಷ್ಠಾನಕ್ಕೆ ತರದಿರುವುದು ಖೇದಕರವಾಗಿದೆ. ಅವರು ಪರಸ್ಪರ ದ್ವೇಷಿಸುತ್ತಾರೆ. ಲೋಕದಾದ್ಯಂತ ಸ್ಥಿತಿ ಹೀಗೆಯೇ ಇದೆ. ಪ್ರತಿ ಒಂದು ದೇಶ ತನ್ನ ಹಿತಾಸಕ್ತಿಗಳು ಇತರ ಎಲ್ಲರ ಹಿತಕ್ಕಿಂತ ಮೇಲೆ ಇದೆ ಎಂದು ಭಾವಿಸುತ್ತಿರುವಾಗ ಲೋಕದಲ್ಲಿ ಶಾಂತಿ ಸ್ಥಾಪನೆಯು ಕನಸಾಗಿಯೇ ಉಳಿಯುವುದು."

ಮುಸ್ಲಿಮ್ ಚರಿತ್ರೆಯಿಂದ ಉಲ್ಲೇಖಿಸಿ ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅವರು ಹಝ್ರತ್ ಅಬೂ ಉಬೈದರಿಗೆ ಸಂಬಂಧಿಸಿದ ಒಂದು ಘಟನೆಯನ್ನು ವಿವರಿಸಿದರು. ಹಝ್ರತ್ ಖಲೀಫತುಲ್ ಖಲೀಫ ಉಮರ್(ರ) ಅವರ ಕಾಲದಲ್ಲಿ ಅವರು ಸಿರಿಯದ ಗವರ್ನರರಾಗಿದ್ದಾಗ, ಸಿರಿಯನ್ ಕ್ರೈಸ್ತರ ಮೇಲೆ ಅವರು ಸೈನ್ಯಕ್ಕೆ ಭರ್ತಿಯಾಗುವುದಕ್ಕೆ ವಿನಾಯತಿ ಪಡೆಯಲು ಒಂದು ತೆರಿಗೆ ವಿಧಿಸಲಾಗುತ್ತಿತ್ತು. ಅವರ ರಕ್ಷಣೆ ಮುಸ್ಲಿಮರ ಕರ್ತವ್ಯವಾಗಿತ್ತು. (ಆದರೆ ಬಡವರಿಂದ ತೆರಿಗೆ ವಸೂಲು ಮಾಡಬಾರದೆಂದು ಹಝ್ರತ್ ಉಮರ್ ಆದೇಶಿಸಿದ್ದರು.) ರೋಮನ್ ಸಾಮ್ರಾಜ್ಯದ ಕೋನ್‌ಸ್ಟೆಂಟೈನ್ ಚಕ್ರವರ್ತಿಯ ಪಡೆಗಳಿಂದ ಆಕ್ರಮಣದ ಭೀತಿ ಉಂಟಾದಾಗ ಹಝ್ರತ್ ಅಬೂ ಉಬೈದ ವಸೂಲು ಮಾಡಿದ ಎಲ್ಲಾ ತೆರಿಗೆಗಳನ್ನು ಕ್ರೈಸ್ತರಿಗೆ ಮರಳಿಸಿ ಹೇಳಿದರು: ನಿಮಗೆ ರಕ್ಷಣೆ ನೀಡಲು ಸಾಧ್ಯವಾಗದ ಕಾರಣ ನಾನು ನಿಮ್ಮಿಂದ ಪಡೆದ ತೆರಿಗೆಯ ಹಣವನ್ನು ಮರಳಿಕೊಡುತ್ತಿದ್ದೇನೆ. ಕ್ರೈಸ್ತರು ಸಿರಿಯಾದ ಗವರ್ನರ್‌ರವರ ಪ್ರಾಮಾಣಿಕತೆ ಮತ್ತು ನ್ಯಾಯಬದ್ಧತೆಯಿಂದ ಪ್ರಭಾವಿತರಾಗಿ ಹೇಳಿದರು: ಮುಸ್ಲಿಮರು ರೋಮನರ ಮೇಲೆ ಜಯಗಳಿಸಲು ನಾವು ಪ್ರಾರ್ಥಿಸುತ್ತೇವೆ. ಮುಸ್ಲಿಮರು ಸಿರಿಯವನ್ನು ಆಳಲು ಪುನಃ ಬರಬೇಕು. ಏಕೆಂದರೆ ಅವರು ಕ್ರೈಸ್ತರೊಂದಿಗೆ ನ್ಯಾಯಯುತವಾಗಿ ವರ್ತಿಸುತ್ತಿದ್ದರು.

ಸಾರ್ವಜನಿಕರಿಗೆ ಅನ್ವಯಿಸುವ ಎಲ್ಲಾ ಉದ್ಯೋಗಗಳನ್ನು, ನ್ಯಾಯಪಾಲನೆಗೆ ಸಂಬಂಧಿಸಿದ ಉದ್ಯೋಗಗಳನ್ನು ಪ್ರಾಮಾಣಿಕರಿಗೆ ಮಾತ್ರ ಕೊಡಬೇಕು. ಪವಿತ್ರ ಖುರ್‌ಆನ್ ಈ ಬಗ್ಗೆ ಹೀಗೆ ಹೇಳುತ್ತದೆ:

**"ಖಂಡಿತವಾಗಿಯೂ ಅಮಾನತ್ತುಗಳನ್ನು ಅವುಗಳ ಹಕ್ಕುದಾರರಿಗೆ ವಹಿಸಿಕೊಡಬೇಕೆಂದೂ ಜನರೆಡೆಯಲ್ಲಿ ನೀವು ತೀರ್ಪು ನೀಡುವಾಗ ನ್ಯಾಯಯುತವಾಗಿ ತೀರ್ಪು ನೀಡಬೇಕೆಂದೂ ಅಲ್ಲಾಹನು ನಿಮ್ಮೊಡನೆ ಆಜ್ಞಾಪಿಸುತ್ತಾನೆ. ಅಲ್ಲಾಹನು ನಿಮಗೆ ಉಪದೇಶಿಸುವಂಥದ್ದು ಅತ್ಯುತ್ತಮ**

ವಾದುದು. ನಿಸ್ಸಂದೇಹವಾಗಿಯೂ ಅಲ್ಲಾಹನು ಎಲ್ಲವನ್ನು ಆಲಿಸುವವನೂ ಎಲ್ಲವನ್ನು ಕಾಣುವವನೂ ಆಗಿದ್ದಾನೆ." **(ಅಧ್ಯಾಯ 4 ವಚನ 59)**

ಪವಿತ್ರ ಖುರ್‌ಆನ್ ಪುನಃ ಉಪದೇಶಿಸುತ್ತದೆ:

**"ಓ ಸತ್ಯವಿಶ್ವಾಸಿಗಳೇ, ನೀವು ನ್ಯಾಯೋಚಿತವಾಗಿ ಸಾಕ್ಷ್ಯವಹಿಸು ವವರಾಗಿದ್ದುಕೊಂಡು, ಅಲ್ಲಾಹನ ಮಾರ್ಗದಲ್ಲಿ ಸ್ಥಿರಚಿತ್ತರಾಗಿರಿ. ಒಂದು ಜನಾಂಗದವರ ಶತ್ರುತ್ವ ಅವರೊಡನೆ ಅನ್ಯಾಯವಾಗಿ ವರ್ತಿಸಲು ನಿಮ್ಮನ್ನು ಪ್ರೇರೇಪಿಸದಿರಲಿ. (ಸದಾ) ನೀವು ನ್ಯಾಯಯುತವಾಗಿ ವರ್ತಿಸಿರಿ. ಅದು ದೇವಭಕ್ತಿಗೆ ಅತಿ ಸಮೀಪವಾದುದು. ನೀವು ಅಲ್ಲಾಹನ ಭಯಭಕ್ತಿ ಇರಿಸಿಕೊಳ್ಳಿರಿ. ನಿಸ್ಸಂಶಯವಾಗಿಯೂ ಅಲ್ಲಾಹನು ನೀವು ಮಾಡುವುದನ್ನೆಲ್ಲ ಬಲ್ಲವನಾಗಿದ್ದಾನೆ." (ಅಧ್ಯಾಯ 5, ವಚನ 9)**

ಅಹ್ಮದಿಯಾ ಮುಸ್ಲಿಮ್ ಜಮಾಅತಿನ ಸ್ಥಾಪಕರಾದ ಹಝ್ರತ್ ವಾಗ್ದತ್ತ ಮಸೀಹ್‌ರವರು[ಅ] ಮೇಲಿನ ವಚನವನ್ನು ವ್ಯಾಖ್ಯಾನಿಸುತ್ತಾ ಹೀಗೆ ಹೇಳಿದರು:

"ಸರ್ವಶಕ್ತನಾದ ಅಲ್ಲಾಹನು ಹೇಳುತ್ತಾನೆ: ಸತ್ಯವನ್ನು ಅವಲಂಬಿಸದೆ ನ್ಯಾಯಪಾಲನೆ ಆಗದು. ನೀವು ಬೇರೆ ಜನಾಂಗ ಗಳೊಂದಿಗೆ ಹೊಂದಿರುವ ಹಗೆಯು ನಿಮ್ಮನ್ನು ನ್ಯಾಯಯುತವಾಗಿ ವರ್ತಿಸುವುದರಿಂದ ತಡೆಯಬಾರದು. ನೀವು ನ್ಯಾಯಬದ್ಧರಾಗಿ ವರ್ತಿಸಿರಿ. ದೇವಭಕ್ತಿ ಅದರಲ್ಲಿಯೇ ಇದೆ... ನಾನು ಹೇಳುತ್ತೇನೆ: ವಾಸ್ತವಿಕವಾಗಿ ಒಬ್ಬ ಶತ್ರುವಿನೊಂದಿಗೆ ಹೋರಾಡುವುದು ಸುಲಭವಾಗಿದೆ. ಆದರೆ ಶತ್ರುಗಳ ಹಕ್ಕುಗಳನ್ನು ಕಾಪಾಡುವುದು ಕಷ್ಟಕರವಾಗಿದೆ. ಶತ್ರುಗಳೊಂದಿಗೆ ನ್ಯಾಯಬದ್ಧವಾಗಿ ವರ್ತಿಸುವುದು ಸಹ ಕಷ್ಟಕರವಾಗಿದೆ."

ಪವಿತ್ರ ಖುರ್‌ಆನ್ ಶಾಂತಿ ಸ್ಥಾಪನೆಗೆ ಆದೇಶಿಸುವ ತತ್ವಗಳು ಇವುಗಳಾಗಿವೆ: ನೀವು ಸಾಕ್ಷಿ ಹೇಳುವಾಗ ಸತ್ಯವನ್ನೇ ಹೇಳಬೇಕು. ನೀವು ನಿಮ್ಮ ಸಂಬಂಧಿಕರ ವಿರುದ್ಧವೇ ಸಾಕ್ಷಿ ಹೇಳಬೇಕಾಗಿ ಬಂದರೂ ಸತ್ಯವನ್ನೇ ಹೇಳಬೇಕೆಂದು ಪವಿತ್ರ ಖುರ್‌ಆನ್ ಆದೇಶಿಸುತ್ತದೆ. ನೀವು ಯಾವುದಾದರೂ ಜನಾಂಗದೊಂದಿಗೆ ಹೊಂದಿರುವ ಹಗೆತನ ನಿಮ್ಮನ್ನು ನ್ಯಾಯಬದ್ಧವಾದ ವರ್ತನೆಯಿಂದ ದೂರಸರಿಯುವಂತೆ ಮಾಡ ಬಾರದು ಎಂದು ಸಹ ಹೇಳಲಾಗಿದೆ. ಇಸ್ಲಾಮಿನ ಚರಿತ್ರೆಯ ಆರಂಭ ಕಾಲದಲ್ಲಿ ಈ ಆಜ್ಞೆಯನ್ನು ಕಟ್ಟುನಿಟ್ಟಾಗಿ ಪಾಲಿಸಲಾಗುತ್ತಿತ್ತು. ಒಬ್ಬ ಮುಸ್ಲಿಮ್ ಮತ್ತು ಒಬ್ಬ ಯಹೂದಿಯ ಮಧ್ಯೆ ಒಂದು ಮೊಕದ್ದಮೆ ಹಝ್ರತ್ ಉಮರ್‌ರವರ[ರ] ಮುಂದೆ ತರಲ್ಪಟ್ಟಾಗ ಹಝ್ರತ್ ಉಮರ್‌ರವರು ಯಹೂದಿಯ ವಾದವು ಸರಿಯೆಂದು ಮನವರಿಕೆ ಮಾಡಿದಾಗ ಆತನ ಪರವಾಗಿ ತೀರ್ಪು ನೀಡಿದರು.

ಇಸ್ಲಾಮಿನಲ್ಲಿ ನ್ಯಾಯದ ಬಗ್ಗೆ ಬಹಳ ಒತ್ತಿ ಹೇಳಲಾಗಿದೆ. ನ್ಯಾಯಾಧಿಪತಿ ಮತ್ತು ಸಾಕ್ಷಿ ಇಬ್ಬರೂ ನ್ಯಾಯಪಾಲನೆ ಮಾಡಿದರೆ ಒಂದು ಸಮಾಜ ಅಥವಾ ಒಂದು ಜನಾಂಗವು ಸ್ಥಿರತೆಯನ್ನು ಪಡೆಯುತ್ತದೆ. ಒಬ್ಬ ಸತ್ಯವಿಶ್ವಾಸಿ ನ್ಯಾಯಬದ್ಧವಾದ ವರ್ತನೆಗಿಂತ ಹೆಚ್ಚು ಉಪಕಾರಮಾಡುವ ಕೆಲಸ ಮಾಡಬೇಕೆಂದು ಪವಿತ್ರ ಖುರ್‌ಆನ್‌ನಲ್ಲಿ ಅಲ್ಲಾಹನು ಹೇಳಿದ್ದಾನೆ. ಈ ವಚನ ನೋಡಿರಿ:

**"ನ್ಯಾಯನಿಷ್ಠೆಗೆ ಬದ್ಧರಾಗಲಿಕ್ಕೂ ಔದಾರ್ಯ ತೋರಿಸಲಿಕ್ಕೂ ನಿಕಟ ಬಂಧುಗಳಿಗೆ ಎಂಬಂತೆ (ಪರರಿಗೂ) ಸಹಾಯ ಮಾಡಲಿಕ್ಕೂ ಅಲ್ಲಾಹನು ಆಜ್ಞಾಪಿಸುತ್ತಾನೆ. ಅಸಭ್ಯತೆಯನ್ನೂ ದುಷ್ಕೃತ್ಯವನ್ನೂ ನಿಯಮೋಲ್ಲಂಘನೆ ಯನ್ನೂ ಅವನು ನಿಷಿದ್ಧಗೊಳಿಸಿದ್ದಾನೆ. ಈ ಬಗ್ಗೆ ಲಕ್ಷ್ಯಗೊಡಲಿಕ್ಕೆ ನಿಮಗೆ ಉಪದೇಶ ನೀಡುತ್ತಾನೆ." (ಅಧ್ಯಾಯ 16, ವಚನ 91)**

ಈ ವಚನವನ್ನು ವಾಗ್ದತ್ತ ಮಸೀಹ್‌ರವರು[ಅ] ಹೀಗೆ ವ್ಯಾಖ್ಯಾನಿಸುತ್ತಾರೆ:

"ನೀವು ನಿಮ್ಮ ಸಂಬಂಧಿಕರೊಂದಿಗೂ ಮಾನವರೆಲ್ಲರೊಂದಿಗೂ ನ್ಯಾಯಪರತೆಯಿಂದ ವರ್ತಿಸಬೇಕೆಂದು ಈ ವಚನ ಆದೇಶಿಸುತ್ತದೆ. ಅವರಿಂದ ಹೆಚ್ಚಿಗೆ ಏನನ್ನೂ ಆವಶ್ಯಪಡಬಾರದೆಂದೂ ನ್ಯಾಯಪಾಲನೆ ಮಾಡಬೇಕೆಂದೂ ಹೇಳಲಾಗಿದೆ. ಎರಡನೆಯ ಹಂತ ಇಹ್‌ಸಾನ್ (ಔದಾರ್ಯಪೂರ್ಣವಾದ ವರ್ತನೆ) ಆಗಿದೆ. ನಿಮ್ಮ ಸಹೋದರ ಕೆಡುಕನ್ನು ಮಾಡಿದರೆ ಅವನು ಮಾಡಿದ ಕೆಡುಕಿಗೆ ಪ್ರತಿಯಾಗಿ ಒಳಿತನ್ನು ಮಾಡುವುದು. ನಿಮಗೆ ನೋವನ್ನುಂಟುಮಾಡಿದವನಿಗೆ ಸುಖವನ್ನು ನೀಡುವುದು ಮತ್ತು ಅವನಿಗೆ ಸಹಾಯ ನೀಡುವುದು. ಮೂರನೆಯ ಹಂತ ಬಂಧುಗಳಿಗೆ ಎಂಬಂತೆ ಸಹಾಯ ಮಾಡುವುದು. ನೀವು ನಿಮ್ಮ ಸಹೋದರರಿಗೆ ಮತ್ತು ಇತರ ಜನರಿಗೆ ನೀಡುವ ನೆರವು ಪ್ರತಿಫಲ ಪಡೆಯುವ ಇಚ್ಛೆ ಹೊಂದದೆ ಮಾಡಬೇಕು. ನೀವು ಕೇವಲ ಮಾನವೀಯ ಭಾವನೆಯಿಂದ ಪ್ರೇರೇಪಿಸಲ್ಪಟ್ಟು ಯಾವುದೇ ಸಂಕೋಚ ವಿಲ್ಲದೆ ಸಹಾಯ ಮಾಡಬೇಕು. ಒಬ್ಬನು ತನ್ನ ನಿಕಟ ಸಂಬಂಧಕರಿಗೆ ಸಹಾಯ ಮಾಡುವ ರೀತಿಯಲ್ಲಿ ಪ್ರೀತಿಯಿಂದ ಸಹಾಯ ಮಾಡಬೇಕು."

**(ನೂರುಲ್ ಖುರ್‌ಆನ್ ಭಾಗ 2, ಪುಟ 34)**

ದುರದೃಷ್ಟಕರವಾಗಿ ನ್ಯಾಯಪರತೆ, ನ್ಯಾಯಪಾಲನೆ, ಸಹಿಷ್ಣು ಮನೋಭಾವ, ಸೌಹಾರ್ದ ಇವುಗಳೆಲ್ಲಾ ಮುಸ್ಲಿಮ್ ಲೋಕದಲ್ಲಿ ವಿರಳವಾಗಿ ಕಾಣಿಸುತ್ತದೆ. ನ್ಯಾಯಪಾಲನೆ, ಔದಾರ್ಯ (ಇಹ್‌ಸಾನ್) ಇವುಗಳು ಸಂಪೂರ್ಣವಾಗಿ ನಾಸ್ತಿಯಾಗಿದೆ. ಇಸ್ಲಾಮ್ ಮನಸಾಕ್ಷಿಯ ಸ್ವಾತಂತ್ರ್ಯವನ್ನು ಅನುಮತಿಸಿದೆಯಾದರೂ ಅಲ್ಪಸಂಖ್ಯಾತ ಧಾರ್ಮಿಕ ವರ್ಗದವರನ್ನು ಮುಸ್ಲಿಮ್ ಲೋಕದಲ್ಲಿ ಸಹಿಸಲಾಗುತ್ತಿಲ್ಲ. ಅಲ್ಪ ಸಂಖ್ಯಾತರ ಜೀವಗಳಿಗೂ ಸ್ವತ್ತಿಗೂ ಯಾವುದೇ ರಕ್ಷಣೆ ಇರುವುದಿಲ್ಲ. ಅಲ್ಪಸಂಖ್ಯಾತರ ವಿರುದ್ಧ ಅಪರಾಧ ಮಾಡಿದ ಅಪರಾಧಿಗಳು ಶಿಕ್ಷಿಸಲ್ಪಡದೆ ಸ್ವತಂತ್ರರಾಗಿ ತಿರುಗಾಡುತ್ತಾರೆ.

ಮುಸ್ಲಿಮರು ಈ ಸಮಾಜದಲ್ಲಿ ಶಾಂತಿಯನ್ನು ಸ್ಥಾಪಿಸಲು ಬಯಸುವುದಾದರೆ ಅವರು ಅನ್ಯರ ಹಕ್ಕುಗಳನ್ನು ನಿಸ್ವಾರ್ಥ ಭಾವನೆ ಯಿಂದ ಈಡೇರಿಸಬೇಕು. ಅವರು ತಮ್ಮನ್ನು ತಾವು ಅತ್ಯುತ್ತಮರೆಂಬ ವಿಷಭಾವನೆಯಿಂದ ಮುಕ್ತರನ್ನಾಗಿ ಮಾಡಬೇಕು. ಅವರು ಮುಸ್ಲಿಮ್ ಮತ್ತು ಮುಸ್ಲಿಮೇತರರ ಮಧ್ಯೆ ವ್ಯತ್ಯಾಸಮಾಡಬಾರದು. ಜಾತೀಯ ಬಹುಸಂಖ್ಯಾತರ ಮತ್ತು ಅಲ್ಪಸಂಖ್ಯಾತರ ಮಧ್ಯೆ ವ್ಯತ್ಯಾಸ ಮಾಡಬಾರದು. ಶ್ರೀಮಂತರ ಮತ್ತು ಬಡವರ ಮಧ್ಯೆ ವ್ಯತ್ಯಾಸ ಮಾಡಬಾರದು. ಅವರು ಎಲ್ಲಾ ವಿಧಗಳ ರಾಷ್ಟ್ರೀಯ ಮತ್ತು ಜಾತೀಯ ಪೂರ್ವಗ್ರಹಗಳನ್ನು ತ್ಯಜಿಸಬೇಕು.

ಮುಸ್ಲಿಮರು ತಾವು ವಿಶಾಲ ಮನಸ್ಸಿನವರೆಂದು ಹೇಳಿಕೊಳ್ಳುತ್ತಾರೆ. ಆದರೆ ಅವರಲ್ಲಿ ಮುಲ್ಲಾಗಳ ಒಂದು ಗುಂಪಿದೆ. ಅವರಲ್ಲಿ ಜಾತೀಯ ದ್ವೇಷಾಸೂಯೆಗಳ ಜ್ವಾಲಾಮುಖಿಯಿದ್ದು ಅದು ಸಿಡಿದೇಳಲು ಸಿದ್ಧ ವಾಗಿರುತ್ತದೆ. ಜಿಹಾದಿ ಚಳುವಳಿಗಳು ಮತ್ತು ಆತ್ಮಹತ್ಯಾ ಬಾಂಬರ್ ಗಳು ಲೋಕದಲ್ಲಿ ಇಸ್ಲಾಮಿನ ರೂಪವನ್ನು ವಿರೂಪಗೊಳಿಸಿದ್ದಾರೆ.

ಆತ್ಮಾಹತ್ಯಾ ಬಾಂಬರ್ ದಾಳಿಗಳು 'ಮುಹಾಹಿದೀನ್'ಗಳಿಂದ (ಧಾರ್ಮಿಕ ಹೋರಾಟಗಾರರಿಂದ) ನಡೆಸಲ್ಪಡುತ್ತವೆ ಎಂದು ಮತಿಭ್ರಾಂತಿ ಹೊಂದಿದವರು ಮಾತ್ರ ಭಾವಿಸಬಹುದಾಗಿದೆ. ಅವರು 'ನ್ಯಾಯ ಸಮ್ಮತ ಗುರಿಗಳನ್ನು' ಇಸ್ಲಾಮಿನ ಹೆಸರಿನಲ್ಲಿ ಆಕ್ರಮಿಸುತ್ತಾರೆ. ಈ ವಾದವು ಸುಳ್ಳೆಂದು ಸ್ವತಃಸಿದ್ಧವಾಗುತ್ತದೆಯಾದರೂ ಇಸ್ಲಾಮಿಕ ತತ್ವಗಳನ್ನು ವಿಕೃತಗೊಳಿಸಿ ಇಸ್ಲಾಮಿನ ರೂಪವನ್ನು ವಿರೂಪಗೊಳಿಸಿದ ಈ ದಾಳಿ ಗಳು ಜನರ ಮನಸ್ಸಿನಿಂದ ತಪ್ಪು ಭಾವನೆಗಳನ್ನು ಸುಲಭವಾಗಿ ದೂರೀ ಕರಿಸಲಾರವು.

ಅನಾರೋಗ್ಯಕರವಾದ ಮತ್ತು ಅಪಾಯಕರವಾದ ನಿಲುವುಗಳಲ್ಲಿ

ಸಮಾನತೆ ಕಂಡುಬರುತ್ತದೆ. ಮುಸ್ಲಿಮ್ ಲೋಕದ ಒಂದು ಚಿಕ್ಕ ವಿಭಾಗ ಈ ಆಕ್ರಮಣಗಳನ್ನು ಪಶ್ಚಿಮ ವಿರೋಧಿ ಜಿಹಾದಿನ ಒಂದು ಭಾಗವೆಂದು ಗಣಿಸುತ್ತದೆ. ಇನ್ನೊಂದು ಗುಂಪು ಪಶ್ಚಿಮ ದೇಶಗಳಲ್ಲಿದೆ – ಅವರ ಸಂಖ್ಯೆ ಕಡಿಮೆ ಏನೂ ಇಲ್ಲ – ಅವರು ಈ ಆಕ್ರಮಣಗಳನ್ನು ಪಶ್ಚಿಮ ವಿರೋಧಿ ಧಾರ್ಮಿಕ ಹೋರಾಟಗಾರರ ಧರ್ಮದ ತರ್ಕಬದ್ಧ ಪ್ರಕಟಣೆ ಎಂದು ಗಣಿಸುತ್ತಾರೆ. ಮುಸ್ಲಿಮ್ ವಿದ್ವಾಂಸರು, ಭೀಕರವಾದಿಗಳ ಆಕ್ರಮಣಗಳನ್ನು ಇಸ್ಲಾಮಿಕ ನಿಯಮಗಳಿಗೆ ಮತ್ತು ನೈತಿಕತೆಗೆ ವಿರುದ್ಧವಾಗಿವೆ ಎಂದು ಹೇಳಿದ್ದಾರೆ.

ವಾಗ್ದತ್ತ ಮಸೀಹರು(ಅ) ನೂರು ವರ್ಷಗಳ ಹಿಂದೆ ಹೀಗೆ ಹೇಳಿದ್ದರು:

"ನೀವು ನನ್ನೊಂದಿಗೆ ಸಂಬಂಧ ಸ್ಥಾಪಿಸಲು ಬಯಸುವುದಾದರೆ ಮತ್ತು ನನ್ನ ಜಮಾಅತನ್ನು ಸೇರಲು ಬಯಸುವುದಾದರೆ ನೀವು ನಿಮ್ಮನ್ನು ದೌರ್ಜನ್ಯ ಮತ್ತು ವಿದ್ರೋಹದಿಂದ ಮುಕ್ತರನ್ನಾಗಿ ಮಾಡಿ ಪರಿಶುದ್ಧರಾಗಬೇಕು. ನನ್ನ ಆಗಮನದ ನಂತರ ಬಲಾತ್ಕಾರದಿಂದ ಮಾಡಲ್ಪಡುವ ಜಿಹಾದನ್ನು ಕೊನೆಗೊಳಿಸಲಾಗಿದೆ. ನೀವು ಜಿಹಾದನ್ನು ಹಝ್ರತ್ ಪೈಗಂಬರರು(ಸ) 'ಜಿಹಾದೆ ಅಕ್‌ಬರ್' (ದೊಡ್ಡ ಜಿಹಾದ್) ಮಾಡಿದಂತೆ ಮಾಡಿರಿ. ಅದು ಜನರಿಗೆ ಅಲ್ಲಾಹನ ಕಡೆಗೆ ಮಾರ್ಗದರ್ಶನ ನೀಡುವುದು; ದೇವಭಕ್ತಿಯನ್ನು ಅವಲಂಬಿಸಲು ಉಪದೇಶಿಸುವುದು; ತನ್ನನ್ನು ಪರಿಶುದ್ಧಗೊಳಿಸುವುದು ಮತ್ತು ಮಾನವರ ಸೇವೆ ಮಾಡುವುದು ಆಗಿದೆ." **(ಗವರ್ನಮೆಂಟ್ ಅಂಗ್ರೇಝಿ ಔರ್ ಜಿಹಾದ್)**

ನಾವು ಆಲೋಚಿಸುವ. ಹೆಚ್ಚು ಹೆಚ್ಚು ನಿರಾಶಭರಿತ ಮುಸ್ಲಿಮರು ಈ ವೈಯಕ್ತಿಕ ಹಿಂಸಾಮಾರ್ಗವನ್ನು ಏಕೆ ಅವಲಂಬಿಸುತ್ತಾರೆ. ಇದಕ್ಕೆ ಉತ್ತರ ಸರಳವಾಗಿದೆ. ದಾರಿದ್ರ್ಯ ಮತ್ತು ಶಾಂತಮಯ ಜೀವಿತ ನಡೆಸಲು ಅವಕಾಶ ದೊರಕದಿರುವುದು ಇದಕ್ಕೆ ಕಾರಣಗಳಾಗಿವೆ.

ಇದಕ್ಕಿರುವ ಪರಿಹಾರ ಮುಸ್ಲಿಮ್ ಲೋಕಕ್ಕೆ ಸುಲಭಸಾಧ್ಯವಾಗಿದೆ. ಹಝ್ರತ್ ಪೈಗಂಬರರು(ಸ) ನಮಗೆ ಐದು ಸ್ತಂಭಗಳನ್ನು ನೀಡಿದ್ದಾರೆ. ಅವುಗಳಲ್ಲಿ ಒಂದಾದ ಝಕಾತನ್ನು ಉಪಯೋಗಿಸಬೇಕು. ಝಕಾತಿನ ನಿಯಮಗಳನ್ನು ಸರಿಯಾಗಿ ಪಾಲಿಸಿದರೆ ಮುಸ್ಲಿಮ್ ಲೋಕದಿಂದ ದಾರಿದ್ರ್ಯವನ್ನು ಸ್ವಲ್ಪ ಕಾಲದೊಳಗೆ ದೂರಸರಿಸಬಹುದು. ಹಾಗೆ ಹಿಂಸಾಚಾರ ಮತ್ತು ಹೋರಾಟಗಳಿಗೆ ಮೂಲ ಕಾರಣವನ್ನು ಹೋಗಲಾಡಿಸಬಹುದು. ಸರ್ವಶಕ್ತನಾದ ಅಲ್ಲಾಹನು ಮುಸ್ಲಿಮ್ ಲೋಕಕ್ಕೆ ಬಹಳ ಸಂಪತ್ತನ್ನೂ ಸಂಪನ್ಮೂಲಗಳನ್ನೂ ನೀಡಿರುವನು. ದೇವನು ನೀಡಿದ ಸಂಪತ್ತನ್ನು ಪವಿತ್ರ ಖುರ್‌ಆನ್, ಹಝ್ರತ್ ಪೈಗಂಬರರು(ಸ) ಮತ್ತು ಅನಂತರ ಖಲೀಫರುಗಳು ನೀಡಿದ ಆದೇಶಗಳ ಪ್ರಕಾರ ಖರ್ಚು ಮಾಡಬೇಕು. ಅವರು ಅನೀತಿ, ಸಾಮಾಜಿಕ ಅನ್ಯಾಯ ಮತ್ತು ದಾರಿದ್ರ್ಯದ ವಿರುದ್ಧ ಜಿಹಾದೆ ಅಕ್‌ಬರ್ (ದೊಡ್ಡ ಜಿಹಾದ್) ನಡೆಸಿದರು. ಮುಸ್ಲಿಮ್ ಸಮುದಾಯ ಈ ಜಿಹಾದೆ ಅಕ್‌ಬರನ್ನು ಇನ್ನೊಮ್ಮೆ ನಡೆಸಬೇಕಾದ ಕಾಲ ಸನ್ನಿಹಿತವಾಗಿದೆ.

ಆದರೆ ಮುಸ್ಲಿಮ್ ಲೋಕದಲ್ಲಿ ಸತ್ಯ ಮತ್ತು ಪರಿಶುದ್ಧ ಇಸ್ಲಾಮಿಕ ಉಪದೇಶಗಳನ್ನು ಜಾರಿಗೊಳಿಸುವ ಭಾರವಾದ ಜವಾಬ್ದಾರಿಯನ್ನು ವಹಿಸಿಕೊಳ್ಳಬಲ್ಲವರು ಯಾರಿದ್ದಾರೆ? ವಿವಿಧ ಪಂಗಡಗಳಾಗಿ ಒಡೆದು ಹೋಗಿರುವ ಮುಸ್ಲಿಮ್ ಸಮುದಾಯವನ್ನು ಒಗ್ಗೂಡಿಸಬಲ್ಲವರು ಯಾರು? ಯಾವುದೇ ಮನುಷ್ಯ ನಿರ್ಮಿತ ಸಂಸ್ಥೆಯಿಂದ ಈ ಕೆಲಸ ಅಸಾಧ್ಯ. ಯಾವ ವ್ಯಕ್ತಿಯಿಂದಲೂ ಅದು ಸಾಧ್ಯವಿಲ್ಲ. ಅನೇಕರು ಇತ್ತೀಚೆಗೆ ನಾಯಕರಾಗಲು ಮತ್ತು ಅಮೀರುಲ್ ಮೂಮಿನೀನ್ (ವಿಶ್ವಾಸಿಗಳ ನಾಯಕ) ಎಂದು ಕರೆಸಿಕೊಳ್ಳಲು ಆಶಿಸಿದರು.

ಅವರು ಮತ್ತು ಅವರ ಸುಳ್ಳು ಪ್ರಮಾಣಪತ್ರಗಳು ಗಾಳಿಯಲ್ಲಿ ಶರತ್ಕಾಲದಲ್ಲಿ ಉದುರಿದ ಎಲೆಗಳ ಹಾಗೆ ಹಾರಿಹೋದುವು. ಆದರೆ ನಿರಾಶೆ ಗೊಳ್ಳಬೇಕಾದ ಆವಶ್ಯಕತೆಯಿಲ್ಲ. ಅಲ್ಲಾಹನು ಮುಸ್ಲಿಮರನ್ನು ನಿಸ್ಸಹಾಯಕರಾಗಿ ಬಿಟ್ಟುಬಿಡಲಾರನು.

ನೀವು ನೆನಪಿಡಿರಿ, ಇಸ್ಲಾಮ್ ಧರ್ಮವು ಶಾಶ್ವತ ಧರ್ಮವಾಗಿದೆ. ಅದು ಎಲ್ಲಾ ಕಾಲಗಳಿಗೆ ಅನ್ವಯಿಸುವ ಮಾರ್ಗದರ್ಶನವನ್ನು ಪವಿತ್ರ ಖುರ್‌ಆನ್‌ನಲ್ಲಿ ಪರಿಪೂರ್ಣವಾಗಿ ಹೊಂದಿದೆ. ದೇವನ ವಚನಗಳು ಅವನ ಕೆಲಸಗಳ ಹಾಗೆ ಗುಣಗಳನ್ನು ಹೊಂದಿವೆ. ವಿಶ್ವವು ಜೀವಂತವಾಗಿ ಇರುವ ಹಾಗೆ ಅವು ಸಹ ಜೀವಂತವಾಗಿ ಇವೆ. ಅವು ಬದಲಾಗುತ್ತಾ ಹೋಗುತ್ತಿರುವ ಮಾನವ ಜೀವಿತಕ್ಕೆ ಮಾರ್ಗದರ್ಶನ ನೀಡುತ್ತಾ ಇರುತ್ತವೆ. ಅಲ್ಲಾಹನ ಪ್ರತಿಯೊಂದು ಸೃಷ್ಟಿ ಅವನ ಅಸ್ತಿತ್ವಕ್ಕೆ ಸಾಕ್ಷ್ಯ ನೀಡುತ್ತದೆ; ಅವನನ್ನು ಸ್ತುತಿಸುತ್ತದೆ ಮತ್ತು ಅವನ ವೈಭವವನ್ನು ಕೊಂಡಾಡುತ್ತದೆ. ಸತ್ಯವಿಶ್ವಾಸದಲ್ಲಿ ದೃಢಚಿತ್ತರಾಗಿರುವವರಿಗೆ ಅವನು ಸಂದೇಶಗಳನ್ನು ಕಳುಹಿಸುತ್ತಾ ಇರುತ್ತಾನೆ. ಅವನು ವಿವಿಧ ರೀತಿಗಳಲ್ಲಿ ತನ್ನ ಅಸ್ತಿತ್ವವನ್ನು ಪ್ರಕಟಿಸುತ್ತಾನೆ.

ಪವಿತ್ರ ಖುರ್‌ಆನ್‌ನಲ್ಲಿ ಅಲ್ಲಾಹನು ಹೀಗೆ ಹೇಳುತ್ತಾನೆ:

**"ಯಾರು 'ಅಲ್ಲಾಹನು ನಮ್ಮ ಪ್ರಭು' ಎಂದು ಹೇಳುತ್ತಾರೋ ಮತ್ತು ಸ್ಥಿರಚಿತ್ತರಾಗಿರುತ್ತಾರೋ ಅವರ ಬಳಿಗೆ ದೇವದೂತರು ಇಳಿದು ಬಂದು ಹೇಳುವರು: 'ನೀವು ಭಯಪಡಬೇಡಿರಿ, ವ್ಯಥೆಗೊಳ್ಳುವುದೂ ಬೇಡ. ನಿಮಗೆ ವಾಗ್ದಾನ ಮಾಡಲಾದ ಸ್ವರ್ಗದ ಬಗ್ಗೆ ನೀವು ಸಂತೋಷಪಡಿರಿ. ಇಹಲೋಕದಲ್ಲೂ ಪರಲೋಕದಲ್ಲೂ ನಾವು ನಿಮ್ಮ ಮಿತ್ರರಾಗಿದ್ದೇವೆ...'"**

**(ಅಧ್ಯಾಯ 41, ವಚನ 31-32)**

ಇಸ್ಲಾಮ್ ಧರ್ಮದಲ್ಲಿ ದೇವಭಕ್ತಿಹೊಂದಿದವರಿಗೆ ದೇವದೂತರು ಇಳಿದು ಬಂದು ಇಸ್ಲಾಮಿನ ಪುನಶ್ಚೇತನಕ್ಕಾಗಿ ಮಾರ್ಗದರ್ಶನ ನೀಡುತ್ತಾ ಇದ್ದರು. ಹಿಜರಿ ಹದಿನಾಲ್ಕನೆಯ ಶತಮಾನದ ಆರಂಭದಲ್ಲಿ, ಎಂದರೆ ಕ್ರಿಸ್ತಶಕ ಹತ್ತೊಂಬತ್ತನೆಯ ಶತಮಾನದ ಕೊನೆಯ ದಶಕದಲ್ಲಿ ಸರ್ವಶಕ್ತನಾದ ಅಲ್ಲಾಹನು ಎಲ್ಲಾ ಧರ್ಮಗಳ ಜನರು ಪ್ರತೀಕ್ಷಿಸುತ್ತಾ ಇದ್ದ ಮಸೀಹರನ್ನು (ಧರ್ಮ ಸುಧಾರಕರನ್ನು) ಕಳುಹಿಸಿದನು. ಮಸೀಹರ ಕುರಿತು ಹಝ್ರತ್ ಪೈಗಂಬರರು(ಸ) ಭವಿಷ್ಯ ನುಡಿದಿದ್ದರು. ಪವಿತ್ರ ಖುರ್‌ಆನಿನಲ್ಲೂ ಪೈಗಂಬರರ(ಸ) ನುಡಿಗಳನ್ನು ಸಂಗ್ರಹಿಸಿದ ಗ್ರಂಥಗಳಲ್ಲೂ ಅವರ ಬಗ್ಗೆ ಭವಿಷ್ಯವಾಣಿಗಳಿವೆ. ಹಝ್ರತ್ ಮಿರ್ಝಾ ಗುಲಾಮ್ ಅಹ್ಮದ್‌ರವರು(ಅ) ದೇವನ ಸಂದೇಶವಾಣಿ ಲಭಿಸಿದ ಪ್ರಕಾರ 1889ರಲ್ಲಿ ತಾನು ಮಸೀಹ್ ಎಂದು ಘೋಷಿಸಿದರು. ತಾನು ವಿವಿಧ ಧರ್ಮಗಳಲ್ಲಿರುವ ಭವಿಷ್ಯವಾಣಿಗಳ ಈಡೇರಿಕೆಯಾಗಿ ಆಗಮಿಸಿದುದಾಗಿ ಅವರು ಹೇಳಿದರು. ತನ್ನ ಆಗಮನದ ಉದ್ದೇಶ ವಿರೂಪಗೊಳಿಸಲಾದ ಇಸ್ಲಾಮಿನ ಸತ್ಯ ಸಂದೇಶವನ್ನು ಪುನಶ್ಚೇತನ ಗೊಳಿಸುವುದು ಎಂದು ಅವರು ವಾದಿಸಿದರು. ಅವರ ಜೀವಿತ ಕಾಲದಲ್ಲಿ ಅವರು ಇಸ್ಲಾಮಿನ ಶತ್ರುಗಳನ್ನು ಎದುರಿಸಿ ಸೋಲಿಸಿದರು.

ಅವರ ಕಾಲದ ಮುಸ್ಲಿಮ್ ವಿದ್ವಾಂಸರು ಅವರನ್ನು ಅಭಿನಂದಿಸಿದರು. ಆದರೆ ಅವರು ತಾನು ವಾಗ್ದತ್ತ ಮಸೀಹ್ ಎಂದು ವಾದಿಸಿದಾಗ ವಿದ್ವಾಂಸರು ಅವರಿಂದ ಮುಖ ತಿರುಗಿಸಿ ಹೋದರು. ಅದು ಬಹಳ ದುರದೃಷ್ಟಕರವಾದ ಸಂಧಿಕಾಲವಾಗಿತ್ತು.

ನಾವು ಮುಸ್ಲಿಮ್ ಲೋಕವನ್ನು ಅವಲೋಕಿಸಿದರೆ ನಿಜವಾಗಿ ಧರ್ಮವನ್ನು ಅವಲಂಬಿಸುವವರು ಬಹಳ ಕಡಿಮೆ ಎಂದು ಕಾಣುತ್ತೇವೆ. ಸತ್ಯವನ್ನು ಅವಲಂಬಿಸುವವರು ಬಹಳ ಕಡಿಮೆ ಕಾಣಿಸುತ್ತಾರೆ. ಇಸ್ಲಾಮಿನ ತತ್ವಗಳು ಕಠೋರತೆ, ಕ್ರೂರತೆ, ಅತಾರ್ಕಿಕತೆ ಮತ್ತು ಬರ್ಬರತೆ ಎಂದು ಅಜ್ಞಾನಿಗಳು ಭಾವಿಸುವಾಗ ಹಝ್ರತ್ ಪ್ರವಾದಿ ಯಾಖೂಬ್(ಅ) ಅವರ ಮಾತುಗಳನ್ನು ಪುನರುಚ್ಚರಿಸಬೇಕೆಂದು

# ಯೇಸು ಶಿಲುಬೆಯ ಮೇಲೆ ಮೃತಪಟ್ಟಿದ್ದರೇ?

## ಬೈಬಲಿನಿಂದ ಸಾಕ್ಷ್ಯಾಧಾರಗಳು

– ಮೌಲಾನ ಅಬುಲ್ ಅತಾ ಜಲಂಧರಿ

### ಯೇಸು ಕ್ರಿಸ್ತರ ಜನನ

ಯಹೂದಿ ಸಮುದಾಯದಲ್ಲಿ ಜನಿಸಿದ ಯೇಸುಕ್ರಿಸ್ತರ ಜನನ ಮತ್ತು ಮರಣದ ಬಗ್ಗೆ ಲೋಕದ ಮಹಾಧರ್ಮಗಳಾದ ಯಹೂದಿ, ಕ್ರೈಸ್ತ ಮತ್ತು ಇಸ್ಲಾಮ್ ಧರ್ಮದ ಅನುಯಾಯಿಗಳು ವಿಭಿನ್ನ ಅಭಿಪ್ರಾಯಗಳನ್ನು ಹೊಂದಿರುವುದು ವಿಚಿತ್ರ ಸಂಗತಿಯಾಗಿದೆ. ಯೇಸು ಕ್ರಿಸ್ತರು ಅನೈತಿಕ ರೀತಿಯಲ್ಲಿ ಜನಿಸಿದರೆಂದು ಆರೋಪಿಸುವ ಯಹೂದಿಯರು ಅವರ ತಾಯಿ ಮೇರಿ ವಿರುದ್ಧ ಘೋರ ಆಪಾದನೆ ಮಾಡುತ್ತಾರೆ. ಯೇಸು ದೇವ ಸಭೆಯನ್ನು ಪ್ರವೇಶಿಸಲು ಅವರ ಅನೈತಿಕ ಜನನದ ಕಾರಣದಿಂದ ಅನರ್ಹರೆಂದು ಯಹೂದಿಯರು ಹೇಳುತ್ತಾರೆ. (ಇಂತಹ ಆಪಾದನೆಯಿಂದ ದೇವನು ನಮ್ಮನ್ನು ರಕ್ಷಿಸಲಿ.) ಯೇಸು ಕ್ರಿಸ್ತರು ಮಾನವ ಪಿತನ ಸಹಾಯವಿಲ್ಲದೆ ಜನಿಸಿದುದರಿಂದ ಅವರು ದೇವಪುತ್ರನೆಂದು ಕ್ರೈಸ್ತರು ಹೇಳುತ್ತಾರೆ. ಹೀಗೆ ಯಹೂದಿಯರು ಮತ್ತು ಕ್ರೈಸ್ತರು ಅವರನ್ನು ತೆಗಳಲು ಮತ್ತು ಹೊಗಳಲು ಮಿತಿಮೀರಿ ಹೋಗಿರುವರೆಂದು ಸ್ಪಷ್ಟವಾಗುತ್ತದೆ. ಯೇಸುಕ್ರಿಸ್ತರಿಗೆ ಮಾನವನಾದ ಪಿತನಿರಲಿಲ್ಲವಾದರೂ ಅವರು ದೇವಪುತ್ರನಲ್ಲ ಎಂದು ಮುಸ್ಲಿಮರು ನಂಬುತ್ತಾರೆ. ಪಿತನಿಲ್ಲದೆ ಜನನ ವಿಚಿತ್ರವಾಗಿ ತೋರುವುದಾದರೂ ಅದು ಪ್ರಕೃತಿ ನಿಯಮಗಳಿಗೆ ವಿರುದ್ಧವಾದ ಸಂಭವವಲ್ಲ. ಅನೇಕ ನಿಷ್ಕಳಂಕ ಕನ್ಯೆಯರು ಮಕ್ಕಳಿಗೆ ಜನ್ಮ ನೀಡಿದ ಬಗ್ಗೆ ವೈದ್ಯಕೀಯ ಚರಿತ್ರೆಯಲ್ಲಿ ದಾಖಲಾಗಿದೆ. ಆಧುನಿಕ ಮಾನವರ ಮೂಲಪುರುಷರಾದ ಆದಮ್‌ರಿಗೆ ತಂದೆ ಮತ್ತು ತಾಯಿ ಇರಲಿಲ್ಲವೆಂದು ಮೇಲೆ ಸೂಚಿಸಿದ ಮೂರು ಧರ್ಮಗಳ ಅನುಯಾಯಿಗಳು ನಂಬುತ್ತಾರೆ. ಯೇಸು ಕ್ರಿಸ್ತರು ದೇವನಿಂದ ನೇಮಿಸಲ್ಪಟ್ಟ ಸತ್ಯ ಪ್ರವಾದಿ ಎಂದು ಮುಸ್ಲಿಮರು ನಂಬುತ್ತಾರೆ. ಅವರು ಪಿತನಿಲ್ಲದೆ ಜನಿಸಿದುದು ಅವರು ದೇವಪುತ್ರ ನೆಂಬುದಕ್ಕೆ ಮತ್ತು ಅವರು ದೇವನೆಂಬುದಕ್ಕೆ ಸಾಕ್ಷ್ಯಾಧಾರವಾಗಲಾರದು. ಅವರು ಮನುಷ್ಯನೇ ಆಗಿದ್ದರು – ಸರಳ ಸಚ್ಚಾರಿತ್ರ್ಯವಂತ

---

ತೋರುತ್ತದೆ:

**"ಉತ್ತಮವಾದ ಸಹನೆಯೇ ನನಗೀಗ ಉಚಿತವಾಗಿದೆ. ಅಲ್ಲಾಹನಿಂದ ಮಾತ್ರ ನೆರವನ್ನು ಯಾಚಿಸಬಹುದಾಗಿದೆ." (ಅಧ್ಯಾಯ 12 ವಚನ 19)**

ವಾಗ್ದತ್ತ ಮಸೀಹ್[ಅ] ಒಂದು ನೂರು ವರ್ಷಗಳಿಗಿಂತ ಹಿಂದೆ ಹೀಗೆ ಬರೆದರು:

"ನಾವು ಮುಸ್ಲಿಮರೋ ಮುಸ್ಲಿಮೇತರರೋ ಆಗಿದ್ದರೂ ನಮ್ಮಲ್ಲಿ ಅನೇಕ ವ್ಯತ್ಯಾಸಗಳಿದ್ದರೂ ನಾವು ಲೋಕದ ಮತ್ತು ಅದರಲ್ಲಿರುವುದರ ಸೃಷ್ಟಿಕರ್ತನಾದ ಅಲ್ಲಾಹನನ್ನು ನಂಬುತ್ತೇವೆ. ನಾವು ಮಾನವರೆಂಬ ನೆಲೆಯಲ್ಲಿ ಸಮಾನರು. ನಾವು ಪರಿಶುದ್ಧ ಮನಸಾಕ್ಷಿ ಮತ್ತು ಪ್ರಾಮಾಣಿಕ ಉದ್ದೇಶಗಳೊಂದಿಗೆ ಸ್ನೇಹಿತರಾಗಬೇಕು. ನಾವು ಆಧ್ಯಾತ್ಮಿಕ ಮತ್ತು ತಾರ್ಕಿಕ ವಿಷಯಗಳಲ್ಲಿ ಪರಸ್ಪರ ಹಿತೈಷಿಗಳಾಗಬೇಕು. ನನ್ನ ಸ್ನೇಹಿತರೇ, ಮಾನವರ ಬಗ್ಗೆ ಸಹಾನುಭೂತಿ ಸೂಚಿಸದ ಧರ್ಮವು ಧರ್ಮವೆಂದು ಅರ್ಹತೆ ಪಡೆಯುವುದಿಲ್ಲ. ಒಬ್ಬ ಮನುಷ್ಯನು ಸಹಾನುಭೂತಿ ತೋರಿಸುವುದಿಲ್ಲವಾದರೆ ಅವನು ಮನುಷ್ಯನೆಂದು ಕರೆಯಲ್ಪಡಲು ಯೋಗ್ಯನಾಗುವುದಿಲ್ಲ. ನಮ್ಮ ದೇವನು ಯಾವುದೇ ಜನಾಂಗದ ಬಗ್ಗೆ ವ್ಯತ್ಯಾಸವನ್ನುಂಟುಮಾಡಿಲ್ಲ. ಪುರಾತನ ಜನಾಂಗಗಳಿಗೆ ನೀಡಿದ ಅನುಗ್ರಹಗಳನ್ನು ಅರಬ್ ದೇಶದ, ಪರ್ಶಿಯದ, ಚೈನಾದ, ಜಪಾನಿನ, ಯುರೋಪಿನ ಮತ್ತು ಅಮೇರಿಕದ ಜನಾಂಗಗಳಿಗೆ ಸಹ ನೀಡಿರುವನು. ಭೂಮಿಯು ಎಲ್ಲರಿಗೂ ವಾಸಯೋಗ್ಯವಾಗಿದೆ. ಸೂರ್ಯ, ಚಂದ್ರ ಮತ್ತು ನಕ್ಷತ್ರಗಳು ಎಲ್ಲರಿಗೂ ಸಮಾನವಾಗಿ ಬೆಳಕು ನೀಡುತ್ತವೆ. ಈ ದೈವಿಕ ದೃಷ್ಟಾಂತಗಳು ನಮಗೆ ಕಲಿಸುವುದೇ ನೆಂದರೆ, ನಾವು ಪರಸ್ಪರ ಸಮಭಾವನೆ, ಸೌಹಾರ್ದ ಮತ್ತು ಸಹಿಷ್ಣುತೆ ಯನ್ನು ಅವಲಂಬಿಸಬೇಕು. ಸಂಕುಚಿತ ಮನೋಭಾವ, ಕಠಿಣ ಹೃದಯ ಇವುಗಳಿಗೆ ಮಾನವ ಸಂಬಂಧಗಳಲ್ಲಿ ಸ್ಥಾನವಿಲ್ಲ." (ಪೈಗಾಮೆ ಸುಲ್ಹ್)

ಮೇಲಿನ ಸಂದೇಶದೊಂದಿಗೆ ಮತ್ತು ಪಂಚಮ ಖಲೀಫರ ನೇತೃತ್ವದಲ್ಲಿ ಇಸ್ಲಾಮ್ ಮತ್ತು ಅಹ್ಮದಿಯತನ್ನು ವಿಶ್ವದ 190 ದೇಶಗಳಲ್ಲಿ ಗೌರವಿಸಲಾಗುತ್ತಿದೆ.

ಮುಸ್ಲಿಮ್ ಲೋಕದ ಸಮಸ್ಯೆಗಳಿಗಿರುವ ನಿಜವಾದ ಪರಿಹಾರ ಮಾರ್ಗ ಮುಸ್ಲಿಮರೆಲ್ಲರೂ ಒಬ್ಬ ನಾಯಕನ ನೇತೃತ್ವದಲ್ಲಿ ಒಗ್ಗೂಡುವು ದಾಗಿದೆ. ಅಲ್ಲಾಹನು ಈ ಕಷ್ಟಕಾಲದಲ್ಲಿ ಮುಸ್ಲಿಮರಿಗೆ ನೇಮಿಸಿದ ನಾಯಕರನ್ನು ಅಂಗೀಕರಿಸಿ ಅವರೊಂದಿಗೆ ಸೇರಬೇಕು. ಮುಸ್ಲಿಮ ರೆಲ್ಲರೂ ಖಿಲಾಫತೆ ಅಹ್ಮದಿಯಾದ ಪತಾಕೆಯ ಕೆಳಗೆ ಒಗ್ಗೂಡಬೇಕು. ಅದು ಮುಸ್ಲಿಮರನ್ನು ಕೆಡುಕಿನಿಂದ ರಕ್ಷಿಸುವುದು. ಹಝ್ರತ್ ಪೈಗಂಬರರ[ಸ] ಕಾಲದ ನಂತರ ಮುಸ್ಲಿಮ್ ಸಮುದಾಯ ಖಲೀಫರ ಕೈಕೆಳಗೆ ಒಗ್ಗೂಡಿದ ಹಾಗೆ ಇಂದಿನ ಮುಸ್ಲಿಮ್ ಸಮುದಾಯ ಅಹ್ಮದಿಯಾ ಖಿಲಾಫತನ್ನು ಅಂಗೀಕರಿಸಿ ಒಗ್ಗೂಡಬೇಕು.

ಒಂದು ನೂರು ವರ್ಷಗಳ ಹಿಂದೆ ವಾಗ್ದತ್ತ ಮಸೀಹ್‌ರವರು ಮುಸ್ಲಿಮ್ ಸಮುದಾಯವನ್ನು ಸಂಬೋಧಿಸಿ ಹೇಳಿದರು:

**"ಸಿದ್‌ಖ್‌ಸೆ ಮೇರೀ ತರಫ್ ಆವೋ ಕೆ ಇಸ್‌ಮೇಂ ಖೈರ್ ಹೈ ಹೈಂ ದರಿಂದೇ ಹರ್ ತರಫ್ ಮೈಂ ಆಫಿಯತ್ ಕಾ ಹೂಂ ಹಿಸಾರ್."**

**"ಸತ್ಯದೊಂದಿಗೆ ನನ್ನ ಕಡೆಗೆ ಬನ್ನಿರಿ. ಅದರಲ್ಲಿ ನಿಮಗೆ ಶುಭವಿದೆ. ಕ್ರೂರಮೃಗಗಳು ಎಲ್ಲಾ ಕಡೆಗಳಲ್ಲೂ ಇವೆ. ನಾನು ಸುರಕ್ಷಿತವಾದ ಭದ್ರ ಕೋಟೆಯಾಗಿರುವೆನು." (ದುರ್ರೆ ಸಮೀನ್)**

ಇಂದು ಮುಸ್ಲಿಮ್ ಲೋಕವು ಕಚ್ಚಾಟದಲ್ಲಿ ಒದ್ದಾಡುತ್ತಿದೆ. ಅವರಿಗೆ ಯಾವುದೇ ನಿಶ್ಚಿತ ಗುರಿ ಇಲ್ಲ. ಅವರನ್ನು ವಿರೋಧಿ ಶಕ್ತಿಗಳು ಸುತ್ತುವರಿದಿವೆ ಮತ್ತು ಅವರನ್ನು ಒಬ್ಬರ ನಂತರ ಒಬ್ಬರಂತೆ ನಾಶ ಪಡಿಸಲು ನೋಡುತ್ತಿವೆ.

ನಾನು ಪ್ರಾಮಾಣಿಕವಾಗಿ ಪ್ರೀತಿ ಮತ್ತು ಸಹಾನುಭೂತಿಯನ್ನು ಹೊಂದಿ ಮುಸ್ಲಿಮರನ್ನು ಬೇಡಿಕೊಳ್ಳುತ್ತೇನೆ! ನಿಮ್ಮ ಸಮಸ್ಯೆಗಳಿಗೆ ಪರಿಹಾರವು ಅಲ್ಲಾಹನು ಮುಸ್ಲಿಮರಿಗಾಗಿ ನೇಮಿಸಿದ ಖಿಲಾಫತನ್ನು ಅಂಗೀಕರಿಸುವುದರಲ್ಲಿದೆ. ಅಲ್ಲಾಹನು ಕಳೆದ ನೂರು ವರ್ಷಗಳಿಂದ ಈ ಖಿಲಾಫತನ್ನು ಅನುಗ್ರಹಿಸುತ್ತಾ ಇದ್ದಾನೆ. ಅಲ್ಲಾಹನು ಮುಸ್ಲಿಮರಿಗೆ ವಿವೇಕವನ್ನು ದಯಪಾಲಿಸಲಿ. ಅವರು ಸತ್ಯವನ್ನು ಅಂಗೀಕರಿಸುವಂತೆ ಮಾಡಲಿ. – ಆಮೀನ್.

*

ಮನುಷ್ಯ. ಯೇಸು ಕ್ರಿಸ್ತರು ತನ್ನನ್ನು ಮನುಷ್ಯ ಕುಮಾರನೆಂದು ವಿಶ್ಲೇಷಿಸಿದುದಾಗಿ ಬೈಬಲ್ ಸಾಕ್ಷ್ಯ ನುಡಿಯುತ್ತದೆ.

## ಯೇಸು ಕ್ರಿಸ್ತರ ಮರಣ

ಯೇಸು ಕ್ರಿಸ್ತರ ಮರಣದ ಕುರಿತು ಸಹ ಯಹೂದಿಯರು, ಕ್ರೈಸ್ತರು ಮತ್ತು ಮುಸ್ಲಿಮರು ಭಿನ್ನಾಭಿಪ್ರಾಯಹೊಂದಿರುವರು. ಯೇಸು ಸುಳ್ಳುವಾದಿಯಾದ ಕಾರಣ ಅವರು ಶಿಲುಬೆಯಲ್ಲಿ ಮೃತರಾದರೆಂದು ಯಹೂದಿಯರು ನಂಬುತ್ತಾರೆ. ಇದಕ್ಕೆ ಸಾಕ್ಷ್ಯಾಧಾರವಾಗಿ ಹಳೆಯ ಒಡಂಬಡಿಕೆಯ ಈ ಕೆಳಗಿನ ವಚನವನ್ನು ಅವರು ಉಲ್ಲೇಖಿಸುತ್ತಾರೆ:

**"ಅಪರಾಧ ಮಾಡಿದವನು ಮರಣಶಿಕ್ಷೆಯನ್ನು ಹೊಂದಿದ ಮೇಲೆ ನೀವು ಅವನ ಶವವನ್ನು ಮರಕ್ಕೆ ತೂಗ ಹಾಕಿದರೆ... ಮರಕ್ಕೆ ತೂಗ ಹಾಕಲ್ಪಟ್ಟವನು ದೇವರ ಶಾಪವನ್ನು ಹೊಂದಿದವನಲ್ಲವೇ?"**

**(ಧರ್ಮೋಪದೇಶ ಕಾಂಡ 21:22-23)**

ಯಹೂದಿಯರು ಹೇಳುವುದೇನೆಂದರೆ ಯೇಸು ಕ್ರಿಸ್ತರು ಸುಳ್ಳು ಪ್ರವಾದಿಯಾದ ಕಾರಣ ದೇವನ ಶಾಪಕ್ಕೆ ಗುರಿಯಾಗಿ ಶಿಲುಬೆಯಲ್ಲಿ ಮೃತರಾದರು.

ಕ್ರೈಸ್ತರು ಸಹ ಯೇಸುಕ್ರಿಸ್ತರು ಶಿಲುಬೆಯಲ್ಲಿ ದೇವನ ಶಾಪಕ್ಕೆ ಗುರಿಯಾಗಿ ಮೃತರಾದರೆಂದು ನಂಬುತ್ತಾರೆ. ಹೊಸ ಒಡಂಬಡಿಕೆಯ ಈ ವಾಕ್ಯವನ್ನು ನೋಡಿರಿ. ಪೌಲ್ ಹೇಳಿದನು:

**"ಕ್ರಿಸ್ತನು ನಮ್ಮ ನಿಮಿತ್ತ ಶಾಪವಾಗಿ ಧರ್ಮಶಾಸ್ತ್ರದಲ್ಲಿ ಹೇಳಿರುವ ಶಾಪದೊಳಗಿಂದ ನಮ್ಮನ್ನು ಬಿಡಿಸಿದನು. ಮರಕ್ಕೆ ತೂಗಹಾಕಲ್ಪಟ್ಟ ಪ್ರತಿಯೊಬ್ಬನು ಶಾಪಗ್ರಸ್ತನು ಎಂದು ಶಾಸ್ತ್ರದಲ್ಲಿ ಬರೆದಿದೆಯಲ್ಲಾ."**

**(ಗಲಾತ್ಯದವರಿಗೆ (3:13-14)**

ಆದರೆ, ಯೇಸುಕ್ರಿಸ್ತರು ಶಿಲುಬೆಯಲ್ಲಿ ಮೃತರಾಗಲಿಲ್ಲ ಎಂದು ಪವಿತ್ರ ಖುರ್‌ಆನ್ ಹೇಳುತ್ತದೆ. ದೇವನು ತನ್ನ ಪ್ರೀತಿಗೆ ಪಾತ್ರರಾದವರನ್ನು ಹಿಂದೆ ಕಷ್ಟದಿಂದ ರಕ್ಷಿಸಿದ ಹಾಗೆ ಅವರನ್ನೂ ಶಿಲುಬೆಗೆ ಮೇಲಿನ ಮರಣದಿಂದ ರಕ್ಷಿಸಿದನು. ಯೋನಾ ಪ್ರವಾದಿ ತಿಮಿಂಗಿಲದ ಹೊಟ್ಟೆಯಿಂದ ಜೀವಂತವಾಗಿ ಹೊರಬರಲಿಲ್ಲವೇ?

ವಾಸ್ತವಿಕ ಸಂಗತಿಯೇನೆಂದರೆ, ಯೇಸುಕ್ರಿಸ್ತರು ಶಿಲುಬೆಯಲ್ಲಿ ಪ್ರಜ್ಞಾಶೂನ್ಯರಾದರು. ಅವರನ್ನು ಶಿಲುಬೆಯಿಂದ ಇಳಿಸಿ ಶುಶ್ರೂಷೆ ಮಾಡಿದಾಗ ಅವರು ಚೇತರಿಸಿಕೊಂಡರು. ಅವರು 120 ವರ್ಷಗಳ ಪ್ರಾಯವನ್ನು ತಲಪಿದಾಗ ಸಹಜವಾಗಿ ಮೃತರಾದರು.

ಯೇಸು ಕ್ರಿಸ್ತರು ಸುಳ್ಳು ಪ್ರವಾದಿ ಎಂದು ನಂಬಿದ ಯಹೂದಿಯರು ಅವರ ವಿರುದ್ಧ ತೀವ್ರ ವಿದ್ರೋಹದ ಆರೋಪವನ್ನು ಹೊರಿಸಿದರು. ಅವರು ತನ್ನನ್ನು ಯಹೂದಿಯರ ಅರಸನೆಂದು ಘೋಷಿಸಿ ರೋಮನ್ ಚಕ್ರವರ್ತಿಯ ವಿರುದ್ಧ ಬಂಡೆದ್ದಿರುವರೆಂದು ಯಹೂದಿಯರು ಆಪಾದಿಸಿದರು. ಅಲ್ಲಿನ ಆಡಳಿತಾಧಿಕಾರಿಯಾದ ಪಿಲಾತನಿಗೆ ಯೇಸು ಕ್ರಿಸ್ತರು ನಿರಪರಾಧಿ ಎಂದು ಮನವರಿಕೆಯಾಗಿತ್ತು. ಹೀಗಿದ್ದರೂ ಆತನು ಯಹೂದಿಯರ ಗಲಭೆ ಗೊಂದಲಗಳಿಂದ ಪ್ರಭಾವಿತನಾಗಿ ಅವರಿಗೆ ಶಿಲುಬೆಯ ಶಿಕ್ಷೆ ವಿಧಿಸಿದನು. ಯೇಸು ಕ್ರಿಸ್ತರು ಶಿಲುಬೆಯಲ್ಲಿ ಮೂರು ಅಥವಾ ನಾಲ್ಕು ಗಂಟೆ ಇದ್ದರು. ಅವರು ಪ್ರಜ್ಞಾಹೀನರಾಗಿರುವ ಸ್ಥಿತಿಯಲ್ಲಿ ಶಿಲುಬೆಯಿಂದ ಇಳಿಸಲ್ಪಟ್ಟರು. ಅವರನ್ನು ತೋಟದೊಳಗಿರುವ ಒಂದು ಶವ ಕುಟೀರದಲ್ಲಿ ಇರಿಸಲಾಯಿತು.

ಆ ಕಾಲದಲ್ಲಿ ಶಿಲುಬೆಗೆ ಜಡಿಯಲ್ಪಟ್ಟವರು ಹಲವಾರು ದಿನಗಳ ನಂತರ ಮೃತಪಡುತ್ತಿದ್ದರು. ಶಿಲುಬೆಯ ಶಿಕ್ಷೆಗೆ ಗುರಿಯಾದ ಅಪರಾಧಿ, ಹಸಿವೆ, ಬಾಯಾರಿಕೆಯಿಂದ ಬಳಲಿ ಮೃತನಾಗುತ್ತಿದ್ದನು. ಅಂತಹ ಜನರ ಕಾಲುಗಳನ್ನು ಮುರಿದು ಹಾಕಲಾಗುತ್ತಿತ್ತು. ಅವರು ದಾರುಣ ಯಾತನೆ ಅನುಭವಿಸಿ ಹಲವು ದಿವಸಗಳ ನಂತರ ಮೃತರಾಗುತ್ತಿದ್ದರು. ಆದರೆ ಯೇಸು ಕ್ರಿಸ್ತರನ್ನು ಶುಕ್ರವಾರ ಮಧ್ಯಾಹ್ನದ ನಂತರ ಶಿಲುಬೆಗೇರಿಸಲಾಯಿತು. ಮರುದಿನ ಸಬ್ಬತ್ ದಿನವಾದ ಕಾರಣ ಆದಿನ ಯಹೂದಿಯರಿಗೆ ಧಾರ್ಮಿಕ ಅನುಷ್ಠಾನಗಳನ್ನು ಮಾಡಲಿಕ್ಕಿರುವುದರಿಂದ ಆದಿನ ಅಪರಾಧಿಗಳು ಶಿಲುಬೆಯಲ್ಲಿ ಇರಬಾರದೆಂದು ನಿಯಮವಿತ್ತು. ಶುಕ್ರವಾರ ಸೂರ್ಯಾಸ್ತವಾದ ಕೂಡಲೆ ಸಬ್ಬತ್ ಪ್ರಾರಂಭವಾಗುವುದರಿಂದ ಯೇಸು ಕ್ರಿಸ್ತರನ್ನು ಮೂರು ನಾಲ್ಕು ಗಂಟೆ ನಂತರ ಶಿಲುಬೆಯಿಂದ ಇಳಿಸಲಾಯಿತು. ಗಾಯದಿಂದ ಉಂಟಾದ ರಕ್ತಸ್ರಾವದ ಕಾರಣ ಅವರಿಗೆ ಪ್ರಜ್ಞೆ ತಪ್ಪಿತು. ಅವರನ್ನು ಮೃತನೆಂದು ಘೋಷಿಸಿ, ಅವರನ್ನು ಅವರ ಶಿಷ್ಯ ಜೋಸೆಫ್ ಅರಿಮತಾಯನ ತೋಟದಲ್ಲಿದ್ದ ಶವ ಕುಟೀರದಲ್ಲಿ ಇರಿಸಲಾಯಿತು. ಅವರು ಜೀವಂತವಾಗಿದ್ದು ಶವ ಕುಟೀರದಿಂದ ಮೂರನೆಯ ದಿನ ಹೊರಗೆ ಹೋದರು. ಅವರು ವೇಷ ಬದಲಾಯಿಸಿ ತನ್ನ ಶಿಷ್ಯರನ್ನು ಭೇಟಿಯಾಗಿ ಅವರ ಜೊತೆಯಲ್ಲಿ ಊಟಮಾಡಿದರು. ಅವರ ಗಾಯಗಳನ್ನು ಅದಕ್ಕಾಗಿ ಶಿಷ್ಯರಿಂದ ತಯಾರು ಮಾಡಲಾದ ಲೇಪನದ ಮೂಲಕ ಗುಣಪಡಿಸಲಾಯಿತು.

ಇದು ಯೇಸು ಕ್ರಿಸ್ತರು ಶಿಲುಬೆಗೇರಿಸಲ್ಪಟ್ಟುದರ ಕುರಿತು ಇರುವ ನಿಜವಾದ ಕಥೆಯಾಗಿದೆ. ಯೇಸುಕ್ರಿಸ್ತರು ಶಿಲುಬೆಯಲ್ಲಿ ಮೃತರಾದರೆಂದು ಕ್ರೈಸ್ತರು ಹೇಳುವುದು ಚಾರಿತ್ರಿಕ ಸಾಕ್ಷ್ಯಗಳಿಗೂ ವೈಚಾರಿಕತೆಗೂ ವಿರುದ್ಧವಾಗಿದೆ. ಯೇಸುಕ್ರಿಸ್ತರು ಶಿಲುಬೆಯಲ್ಲಿ ಮೃತರಾಗಿ ಮೂರನೆಯ ದಿನ ಜೀವಂತರಾಗಿ ಆಕಾಶಾರೋಹಣ ಮಾಡಿದರೆಂದು ಕ್ರೈಸ್ತರು ಹೇಳುತ್ತಾರೆ. ಎಂತಹ ವಿರೋಧಾಭಾಸ! ಎಂತಹ ಕಟ್ಟುಕಥೆ!

ಯೇಸು ಕ್ರಿಸ್ತರು ಶಿಲುಬೆಯ ಮೇಲೆ ಮೃತಪಟ್ಟಿದ್ದಾರೆ ಎಂಬ ನಂಬಿಕೆಯ ಮೇಲೆ ಆಧುನಿಕ ಕ್ರೈಸ್ತ ಧರ್ಮ ಅವಲಂಬಿತವಾಗಿದೆ. ಯೇಸು ಕ್ರಿಸ್ತರು ಶಿಲುಬೆಯಲ್ಲಿ ಮೃತರಾಗಲಿಲ್ಲವೆಂದೂ ಅವರು ಮೃತರಾಗಿ ಮೂರನೆಯ ದಿನ ಜೀವಂತವಾಗಿ ಏಳಲಿಲ್ಲವೆಂದೂ ಸಾಬೀತು ಗೊಳ್ಳುವುದಾದರೆ ಕ್ರೈಸ್ತ ಧರ್ಮದ ಕಟ್ಟಡವು ಕುಸಿದು ಬೀಳುವುದು. ಆಧುನಿಕ ಕ್ರೈಸ್ತ ಧರ್ಮದ ನಿಜವಾದ ಸ್ಥಾಪಕರಾದ ಪೌಲ್‌ರವರು ಸ್ವತಃ ಹೀಗೆ ಹೇಳಿದ್ದಾರೆ:

**"ಕ್ರಿಸ್ತನು ಎದ್ದು ಬಂದಿಲ್ಲವಾದರೆ ನಮ್ಮ ಪ್ರಸಂಗವು ಹುರಳಿಲ್ಲದ್ದು ಮತ್ತು ನಿಮ್ಮ ನಂಬಿಕೆಯೂ ಹುರಳಿಲ್ಲದ್ದು." (1 ಕೊರಿಂಥದವರಿಗೆ 15:14)**

ಅಮೇರಿಕನ್ ಮಿಶನರಿಯಾಗಿದ್ದ ಡಾಕ್ಟರ್ ಝ್ವೀಮರ್ ಹೀಗೆ ಹೇಳುತ್ತಾರೆ:

**"ಯೇಸುಕ್ರಿಸ್ತರು ಶಿಲುಬೆಯಲ್ಲಿ ಮೃತರಾದರೆಂಬ ನಮ್ಮ ವಿಶ್ವಾಸವು ತಪ್ಪಾಗಿದ್ದರೆ ಕ್ರೈಸ್ತ ಧರ್ಮವು ಒಂದು ಹಾಸ್ಯನಾಟಕದಂತಾಗುವುದು."**

ಯೇಸು ಕ್ರಿಸ್ತರು ಶಿಲುಬೆಯಲ್ಲಿ ಮೃತರಾಗಲಿಲ್ಲ ಎಂಬುದರ ಪರವಾಗಿ ಬೈಬಲಿನ ಹತ್ತು ಸಾಕ್ಷ್ಯಾಧಾರಗಳನ್ನು ನಿಮ್ಮ ಮುಂದಿರಿಸುತ್ತೇವೆ.

### 1. ಯೋನಾ ಪ್ರವಾದಿಯ ಸೂಚಕಕಾರ್ಯ

ನಾವು ಬೈಬಲಿನ ಹೊಸ ಒಡಂಬಡಿಕೆಯಲ್ಲಿ ಹೀಗೆ ಓದುತ್ತೇವೆ:

**"ಜನರು ಗುಂಪು ಗುಂಪಾಗಿ ಕೂಡಿ ಬರುತ್ತಿರುವಾಗ ಆತನು ಹೇಳುವುದಕ್ಕೆ ತೊಡಗಿದ್ದೇನೆಂದರೆ–ಈ ಸಂತತಿ ಕೆಟ್ಟ ಸಂತತಿಯೇ; ಇದು ಸೂಚಕಕಾರ್ಯವನ್ನು ನೋಡಬೇಕೆಂದು ಅಪೇಕ್ಷಿಸುತ್ತದೆ. ಆದರೆ ಯೋನನಲ್ಲಿ ಆದ ಸೂಚಕಕಾರ್ಯವೇ ಹೊರತು ಬೇರೆ ಯಾವುದೂ ಇದಕ್ಕೆ ಸಿಕ್ಕುವುದಿಲ್ಲ. ಹೇಗೆಂದರೆ ಯೋನನು ನಿನೆವೆ ಪಟ್ಟಣದವರಿಗೆ ಗುರುತಾದ ಹಾಗೆಯೇ ಮನುಷ್ಯಕುಮಾರನು ಈ ಸಂತತಿಗೆ ಗುರುತಾಗಿರುವನು." (ಲೂಕ 11:29,30)**

ಇನ್ನೊಂದು ಬೈಬಲ್ ಉಲ್ಲೇಖ ಹೀಗಿದೆ:

"ಆತನು ಅವರಿಗೆ ಉತ್ತರ ಕೊಟ್ಟದ್ದೇನೆಂದರೆ, ವ್ಯಭಿಚಾರಿಣಿಯಂತಿರುವ ಈ ಕೆಟ್ಟ ಸಂತತಿಯು ಸೂಚಕಕಾರ್ಯವನ್ನು ನೋಡಬೇಕೆಂದು ಅಪೇಕ್ಷಿಸುತ್ತದೆ. ಆದರೆ ಯೋನನೆಂಬ ಪ್ರವಾದಿಯಲ್ಲಿ ಆದ ಸೂಚಕ ಕಾರ್ಯವೇ ಹೊರತು ಬೇರೆ ಯಾವುದೂ ಇದಕ್ಕೆ ಸಿಕ್ಕುವುದಿಲ್ಲ. ಅಂದರೆ ಯೋನನು ಹೇಗೆ ಮೂರುದಿನ ರಾತ್ರಿ ಹಗಲು ದೊಡ್ಡ ಮೀನಿನ ಹೊಟ್ಟೆಯೊಳಗೆ ಇದ್ದನೋ ಹಾಗೆಯೇ ಮನುಷ್ಯಕುಮಾರನು ಮೂರುದಿನ ರಾತ್ರಿ ಹಗಲು ಭೂಗರ್ಭದೊಳಗೆ ಇರುವನು." (ಮತ್ತಾಯ 12:39,40).

ಯೇಸು ಕ್ರಿಸ್ತರು ಇಲ್ಲಿ ತನ್ನ ಅವಸ್ಥೆಯನ್ನು ಯೋನ ಪ್ರವಾದಿಯ ಅವಸ್ಥೆಗೆ ಹೋಲಿಸಿ ಹೇಳಿದರು. ಯೋನ ಪ್ರವಾದಿ ನಿನೆವ ಪಟ್ಟಣದ ಜನರಿಗೆ ತೋರಿಸಿದ ಸೂಚಕಕಾರ್ಯವೇನು? ಬೈಬಲ್ ಹೀಗೆ ಹೇಳುತ್ತದೆ:

"ಇತ್ತ ಯೋನನನ್ನು ನುಂಗಲು ಕರ್ತನು ಒಂದು ದೊಡ್ಡ ಮೀನಿಗೆ ಅಪ್ಪಣೆ ಮಾಡಿದನು; ಯೋನನು ಮೂರುದಿನ ಹಗಲಿರುಳು ಆ ಮೀನಿನ ಹೊಟ್ಟೆಯೊಳಗೆ ಇದ್ದನು." (ಯೋನ 1:17)

"ಯೋನನು ಆ ಮೀನಿನ ಹೊಟ್ಟೆಯೊಳಗೆ ಇದ್ದುಕೊಂಡು ತನ್ನ ದೇವನಾದ ಕರ್ತನಿಗೆ ಹೀಗೆ ಪ್ರಾರ್ಥನೆ ಮಾಡಿದನು.

ಇಕ್ಕಟ್ಟಿನಲ್ಲಿ ನಾನು ಯಹೋವನಿಗೆ ಮೊರೆಯಿಟ್ಟೆನು; ಆತನು ನನಗೆ ಸದುತ್ತರವನ್ನು ದಯಪಾಲಿಸಿದನು; ಪಾತಾಳದ ಗರ್ಭದೊಳಗಿಂದ ಕೂಗಿಕೊಂಡೆನು. ಆಹಾ, ನನ್ನ ಧ್ವನಿಯನ್ನು ಲಾಲಿಸಿದೆ." (ಯೋನ 2:1,2).

ಬೈಬಲಿನ ಈ ಉಲ್ಲೇಖಗಳ ಪ್ರಕಾರ ಯೋನ ಪ್ರವಾದಿಯನ್ನು ಒಂದು ದೊಡ್ಡ ಮೀನು ನುಂಗಿತು. ಅವರು ಅದರೊಳಗೆ ಮೂರು ಹಗಲು ಮೂರು ರಾತ್ರಿ ಜೀವಂತವಾಗಿ ಇದ್ದು ಜೀವಂತವಾಗಿಯೇ ಹೊರಗೆ ಬಂದರು. ಅದು ನಿನೆವ ಪಟ್ಟಣದ ಜನರಿಗೆ ಯೋನ ಪ್ರವಾದಿ ತೋರಿಸಿದ ಸೂಚಕಕಾರ್ಯವಾಗಿತ್ತು. ಮೀನಿನ ಹೊಟ್ಟೆಯೊಳಗಿದ್ದ ಯೋನ ಪ್ರವಾದಿ ತನ್ನನ್ನು ರಕ್ಷಿಸಲು ದೇವನಿಗೆ ಮೊರೆಯಿಟ್ಟಾಗ ಅವರ ಪ್ರಾರ್ಥನೆ ಅಂಗೀಕರಿಸಲ್ಪಟ್ಟಿತು. ಅವರು ಮೀನಿನ ಹೊಟ್ಟೆಯೊಳಗೆ ಜೀವಸಹಿತ ಪ್ರವೇಶಿಸಿದ ಹಾಗೆ ಜೀವಂತವಾಗಿಯೇ ಮೀನಿನ ಹೊಟ್ಟೆಯಿಂದ ಹೊರಕ್ಕೆ ಬಂದರು. ತನ್ನ ಕಾಲದ ಕೆಟ್ಟ ಮತ್ತು ವ್ಯಭಿಚಾರಿಣಿಯಂತಿರುವ ಜನರಿಗೆ ಯೋನ ಪ್ರವಾದಿಯ ಸೂಚಕಕಾರ್ಯದಂತಹ ಸೂಚಕಕಾರ್ಯ ಹೊರತು ಇನ್ನೇನೂ ತೋರಿಸಲ್ಪಡಲಾರದು ಎಂದು ಯೇಸುಕ್ರಿಸ್ತರು ಹೇಳುತ್ತಾರೆ. ಯೋನ ಪ್ರವಾದಿ ಮತ್ತು ಯೇಸು ಕ್ರಿಸ್ತರ ಸೂಚಕಕಾರ್ಯಗಳ ಮಧ್ಯೆ ಇರುವ ಹೋಲಿಕೆ ಏನು? ಮೀನಿನ ಹೊಟ್ಟೆಯೊಳಗೆ ಯೋನ ಪ್ರವಾದಿ ಸಜೀವವಾಗಿ ಹೋಗಿ ಸಜೀವವಾಗಿ ಹೊರಗೆ ಬಂದ ಹಾಗೆ ಯೇಸು ಕ್ರಿಸ್ತರು ಸಜೀವವಾಗಿಯೇ ಭೂಮಿಯ ಗರ್ಭದೊಳಗೆ ಪ್ರವೇಶಿಸಿ ಸಜೀವವಾಗಿಯೇ ಹೊರಬರುವುದು ಎರಡು ಸೂಚಕಕಾರ್ಯಗಳಲ್ಲಿರುವ ಹೋಲಿಕೆಯಾಗಿದೆ. ಯೋನ ಪ್ರವಾದಿ ಮತ್ತು ಯೇಸು ಕ್ರಿಸ್ತರು ತಮ್ಮನ್ನು ರಕ್ಷಿಸಲು ದೇವನನ್ನು ಬೇಡಿಕೊಂಡರು. ಅವರಿಬ್ಬರ ಪ್ರಾರ್ಥನೆಗಳು ದೇವನಿಂದ ಅಂಗೀಕರಿಸಲ್ಪಟ್ಟವು. ಯೇಸು ಕ್ರಿಸ್ತರು ಭೂಮಿಯ ಗರ್ಭ ದೊಳಗೆ (ಸಮಾಧಿ ಗುಹೆಯೊಳಗೆ) ಜೀವಂತವಾಗಿ ಒಳಹೋಗಿ ಜೀವಂತವಾಗಿ ಹೊರಕ್ಕೆ ಬರದಿದ್ದರೆ ಎರಡು ಸೂಚಕಕಾರ್ಯಗಳ ಮಧ್ಯೆ ಇರುವ ಹೋಲಿಕೆಯಾದರೂ ಏನು?

ಯೇಸು ಕ್ರಿಸ್ತರು ತನ್ನ ಕಾಲದ ಜನರಿಗೆ ಕೇವಲ ಒಂದು ಸೂಚಕ ಕಾರ್ಯವನ್ನು ತೋರಿಸುವುದಾಗಿ ಹೇಳಿದ್ದರು. ಈ ಸೂಚಕಕಾರ್ಯ ಸಹ ಈಡೇರದಿದ್ದಲ್ಲಿ ಯೇಸು ಕ್ರಿಸ್ತರ ಸತ್ಯತೆಯನ್ನು ಸಾಬೀತುಗೊಳಿಸುವ ಬೇರೆ ಯಾವುದಾದರೂ ವಿಷಯ ಇದೆಯೇ? ಅವರು ಯೋನ ಪ್ರವಾದಿಯ ಸೂಚಕಕಾರ್ಯದ ಬಗ್ಗೆ ಪ್ರಸ್ತಾಪಿಸಿ ತಾನು ಶಿಲುಬೆಯಲ್ಲಿ ಮೃತನಾಗಲಾರೆ ಎಂದು ಸ್ಪಷ್ಟಪಡಿಸಿದರು. ಆದುದರಿಂದ ಯೇಸು ಕ್ರಿಸ್ತರು ಶಿಲುಬೆಯಲ್ಲಿ ಮೃತರಾಗಿರಲಿಲ್ಲ; ಅವರು ಪ್ರಜ್ಞಾಶೂನ್ಯರಾಗಿದ್ದರು ಎಂಬ ವಾದವು ಕೇವಲ ತಪ್ಪುಗ್ರಹಿಕೆ ಮೇಲೆ ಅವಲಂಬಿಸಿಲ್ಲ.

**2. ಪಿಲಾತನ ಪತ್ನಿ ಕಂಡ ಕನಸು**

ಹೊಸ ಒಡಂಬಡಿಕೆಯಲ್ಲಿ ಹೀಗೆ ಬರೆದಿದೆ:

"ಅವನು (ಪಿಲಾತನು) ನ್ಯಾಯಾಸನದಲ್ಲಿ ಕೂಡಿರುವಾಗ ಅವನ ಹೆಂಡತಿಯು – ನೀನು ಆ ಸತ್ಪುರುಷನ ಗೊಡವೆಗೆ ಹೋಗಬೇಡ; ಅವನ ದೆಸೆಯಿಂದ ಈ ಹೊತ್ತು ಕನಸಿನಲ್ಲಿ ಬಹಳ ತೊಂದರೆಪಟ್ಟೆನು ಎಂದು ಅವನ ಬಳಿಗೆ ಹೇಳಿಕಳುಹಿಸಿದಳು." (ಮತ್ತಾಯ 27:19)

ಪಿಲಾತನ ಪತ್ನಿ ಕಂಡ ಸ್ವಪ್ನವು ಸತ್ಯವೂ ಆ ಕಾಲಸ್ಥಿತಿಗೆ ಅನ್ವಯಿಸುವುದೂ ಆಗಿತ್ತು. ಯೇಸು ಕ್ರಿಸ್ತರನ್ನು ಶಿಲುಬೆಯ ಶಾಪಗ್ರಸ್ತ ಮರಣದಿಂದ ರಕ್ಷಿಸುವುದು ಆ ಕನಸನ್ನು ದೇವನು ತೋರಿಸಿದುದರ ಉದ್ದೇಶವಾಗಿತ್ತು. ದೇವನು ತನ್ನ ಪ್ರಿಯ ದಾಸರನ್ನು ಬೇರೆಯವರಿಗೆ ಕನಸನ್ನು ತೋರಿಸಿ ಸಹ ರಕ್ಷಿಸುತ್ತಾನೆ. ಉದಾಹರಣೆಗೆ ಹೇಳುವುದಾದರೆ, ಈಜಿಪ್ಟಿನ ದೊರೆಯಾದ ಫೇರೋನ ಸ್ವಪ್ನವನ್ನು ವ್ಯಾಖ್ಯಾನಿಸುವ ಮೂಲಕ ಯೋಸೆಫ್ ಪ್ರವಾದಿಯು ಸೆರೆಮನೆಯಿಂದ ಬಿಡುಗಡೆಹೊಂದಿದರು. ದೇವನು ಯೇಸುಕ್ರಿಸ್ತರನ್ನು ರಕ್ಷಿಸುವ ಉದ್ದೇಶಹೊಂದಿದ್ದನು. ಆದುದರಿಂದ ರೋಮನ್ ಗವರ್ನರಾದ ಪಿಲಾತನ ಪತ್ನಿಗೆ ಕನಸನ್ನು ಕಾಣಿಸಿ ಆಕೆ ಪಿಲಾತನ ತೀರ್ಪಿನ ಮೇಲೆ ಪ್ರಭಾವ ಬೀರುವಂತೆ ದೇವನು ಮಾಡಿದನು.

**3. ಪಿಲಾತನು ತೋರಿಸಿದ ಸಹಾನುಭೂತಿ**

ಪಾಲೆಸ್ತೀನಿನ ಆಡಳಿತಾಧಿಕಾರಿಯಾಗಿದ್ದ ಪಿಲಾತನ ಮುಂದೆ ಯಹೂದಿಯರು ಯೇಸು ಕ್ರಿಸ್ತರ ಪ್ರಕರಣವನ್ನು ದಾಖಲುಗೊಳಿಸಿದರು. ಪಿಲಾತನು ಯೇಸು ಕ್ರಿಸ್ತರ ಬಗ್ಗೆ ವಿಚಾರಣೆ ನಡೆಸಿ ಅವರು ನಿರಪರಾಧಿ ಎಂದು ಘೋಷಿಸಿದನು. ಅವನು ಹೀಗೆಂದನು:

"ಈ ಮನುಷ್ಯನು ಪ್ರಜೆಗಳನ್ನು ತಿರುಗಿ ಬೀಳುವಂತೆ ಮಾಡುವವನು ಎಂದು ಇವನನ್ನು ನನ್ನ ಬಳಿಗೆ ತಂದಿರಲ್ಲಾ; ನೀವು ಇವನ ಮೇಲೆ ತಂದ ದೂರುಗಳ ವಿಷಯವಾಗಿ ನಾನು ನಿಮ್ಮ ಮುಂದೆಯೇ ವಿಚಾರಣೆ ಮಾಡಿದರೂ ಇವನಲ್ಲಿ ಒಂದು ತಪ್ಪಾದರೂ ನನಗೆ ಕಾಣಲಿಲ್ಲ." (ಲೂಕ 23:14)

"ಪಿಲಾತನು ತಿರಿಗಿ ಯೆಹೂದ್ಯರ ಬಳಿಗೆ ಹೊರಕ್ಕೆ ಬಂದು –ನನಗೆ ಅವನಲ್ಲಿ ಯಾವ ಅಪರಾಧವೂ ಕಾಣಿಸುವುದಿಲ್ಲ. ಆದರೆ ಪಸ್ಕ ಹಬ್ಬದಲ್ಲಿ ನಾನು ಒಬ್ಬನನ್ನು ನಿಮಗೆ ಬಿಟ್ಟುಕೊಡುವ ಪದ್ಧತಿ ಉಂಟಷ್ಟೆ; ನಾನು ಯೆಹೂದ್ಯರ ಅರಸನನ್ನು ಬಿಟ್ಟುಕೊಡುವುದು ನಿಮಗೆ ಇಷ್ಟವೋ ಎಂದು ಅವರನ್ನು ಕೇಳಿದನು. ಅದಕ್ಕೆ ಅವರು–ಇವನನ್ನು ಬಿಡಬೇಡ, ಬರಬ್ಬನನ್ನು ಬಿಟ್ಟುಕೊಡಬೇಕು ಎಂದು ತಿರಿಗಿ ಕೂಗಿ ಹೇಳಿದರು. ಈ ಬರಬ್ಬನು ಒಬ್ಬ ಕಳ್ಳನಾಗಿದ್ದನು." (ಯೋಹಾನ 18:38-40)

"ಈ ಮಾತಿನ ದೆಸೆಯಿಂದ ಪಿಲಾತನು ಆತನನ್ನು ಬಿಡಿಸುವುದಕ್ಕೆ ಪ್ರಯತ್ನಿಸಿದನು. ಆದರೆ ಯೆಹೂದ್ಯರು – ನೀನು ಇವನನ್ನು ಬಿಡಿಸಿದರೆ ನೀನು ಕೈಸರನಿಗೆ ಮಿತ್ರನಲ್ಲ; ತನ್ನನ್ನು ಅರಸನಾಗಿ ಮಾಡಿಕೊಳ್ಳುವವನು ಕೈಸರನ ವಿರೋಧಿ ಎಂದು ಕೂಗಿ ಹೇಳಿದರು." (ಯೋಹಾನ 9:12)

ಮೇಲಿನ ಉಲ್ಲೇಖಗಳಿಂದ ತಿಳಿಯುವುದೇನೆಂದರೆ, ಯೇಸುಕ್ರಿಸ್ತರ ವಿರುದ್ಧ ಹೊರಿಸಲಾದ ಆರೋಪಗಳನ್ನು ಪಿಲಾತನು ಅಂಗೀಕರಿಸದೆ ಅವರನ್ನು ನಿರಪರಾಧಿಯೆಂದು ಗ್ರಹಿಸಿದ್ದನು. ಅವರನ್ನು ಬಿಡುಗಡೆ

ಮಾಡಲು ಅವನು ತನಗೆ ಸಾಧ್ಯವಿರುವಷ್ಟು ಪ್ರಯತ್ನ ಮಾಡಿದನು. ಆದರೆ ಅವನ ವಿರುದ್ಧ ಅರಸನಾದ ಕೈಸರನಿಗೆ ದೂರುನೀಡುವುದಾಗಿ ಯಹೂದಿಯರು ಬೆದರಿಕೆ ಹಾಕಿದರು. ಅವನು ಯೇಸು ಕ್ರಿಸ್ತರನ್ನು ರಕ್ಷಿಸಲು ರಹಸ್ಯವಾಗಿ ಪ್ರಯತ್ನಿಸಿದನು. ತನ್ನ ಪತ್ನಿ ಕಂಡ ಕನಸಿನ ವಿಷಯ ಅವನ ಮುಂದಿತ್ತು. ಯೇಸು ಕ್ರಿಸ್ತರ ವಿರುದ್ಧ ಯಹೂದಿ ಮುಖ್ಯ ಪುರೋಹಿತರು ಅಸೂಯೆಯ ಕಾರಣದಿಂದ ಗೂಢಾಲೋಚನೆ ನಡೆಸಿದ್ದರೆಂದು ಅವನಿಗೆ ಚೆನ್ನಾಗಿ ತಿಳಿದಿತ್ತು.

**4. ಯೇಸುಕ್ರಿಸ್ತರನ್ನು ರಕ್ಷಿಸಲು ಪಿಲಾತನು ಮಾಡಿದ ಪ್ರಯತ್ನಗಳು**

ಪಿಲಾತನಿಗೆ ಯೇಸುಕ್ರಿಸ್ತರು ನಿರಪರಾಧಿ ಎಂದು ದೃಢವಾಗಿ ತಿಳಿದಿತ್ತು. ಆದುದರಿಂದ ಯೇಸು ಕ್ರಿಸ್ತರನ್ನು ರಕ್ಷಿಸಲು ಆತನೊಂದು ರಹಸ್ಯ ಕಾರ್ಯಾಚರಣೆ ಮಾಡಿದನು. ರೋಮನ್ ಸಾಮ್ರಾಜ್ಯದ ಅಧಿಕಾರಿಯಾದ ಆತನು ಬಹಿರಂಗವಾಗಿ ಯೇಸು ಕ್ರಿಸ್ತರ ಸಹಾಯಕ್ಕೆ ಬರಲು ಸಾಧ್ಯವಿರಲಿಲ್ಲ. ಆತನು ಯೇಸು ಕ್ರಿಸ್ತರನ್ನು ರಕ್ಷಿಸಲು ಪ್ರಯತ್ನಿಸಿದ ಪ್ರಮುಖ ಪಾತ್ರಧಾರಿಯಾಗಿರುವನು. ಆತನ ಸಹಾಯಕರಲ್ಲಿ ಒಬ್ಬನು ಯೇಸುಕ್ರಿಸ್ತರ ಶಿಷ್ಯ ಅರಿಮಥಾಯದ ಯೋಸೆಫನಾಗಿದ್ದನು. ಅವನು ತನ್ನ ತೋಟದಲ್ಲಿ ಹೊಸದಾಗಿ ಒಂದು ಶವ ಕುಠೀರವನ್ನು ನಿರ್ಮಿಸಿದ್ದನು. ಇನ್ನೊಬ್ಬ ಸಹಾಯಕನು ನಿಕೊದೇಮ ಎಂಬ ಯಹೂದಿ. ಅವನು ಈ ಕಾರಸ್ಥಾನವನ್ನು ಚೆನ್ನಾಗಿ ಅರಿತವನಾಗಿದ್ದನು.

ಬೈಬಲಿನ ಹೊಸ ಒಡಂಬಡಿಕೆಯಲ್ಲಿ ಹೀಗಿದೆ:

**"ಇದಲ್ಲದೆ ಮೊದಲು ಒಂದು ಸಾರಿ ರಾತ್ರಿ ವೇಳೆಯಲ್ಲಿ ಯೇಸುವಿನ ಬಳಿಗೆ ಬಂದಿದ್ದ ನಿಕೊದೇಮನು ಸಹ ರಕ್ತಬೋಳ ಅಗರುಗಳನ್ನು ಕಲಸಿದ ಚೂರ್ಣವನ್ನು ನೂರು ಸೇರಿನಷ್ಟು ತಕ್ಕೊಂಡು ಅಲ್ಲಿಗೆ ಬಂದನು."**

**(ಯೋಹಾನ 19:39)**

ಪಿಲಾತನು ಯೇಸುಕ್ರಿಸ್ತರಿಗೆ ಶಿಲುಬೆಯ ಶಿಕ್ಷೆ ನೀಡಲು ಶುಕ್ರವಾರ ಮಧ್ಯಾಹ್ನವನ್ನು ನಿಗದಿ ಪಡಿಸಿದುದು ಬುದ್ಧಿಪೂರ್ವಕವಾಗಿದೆ. ಶುಕ್ರವಾರ ಸಂಜೆ ಸೂರ್ಯನು ಅಸ್ತಮಿಸಿದ ನಂತರ ಶಿಲುಬೆಯಲ್ಲಿ ಅವರನ್ನು ಇರಿಸುವುದು ಸಾಧ್ಯವಿರಲಿಲ್ಲ. ಏಕೆಂದರೆ ಶುಕ್ರವಾರ ಸೂರ್ಯಾಸ್ತಮಾನದ ನಂತರ ಯಹೂದಿಯರಿಗೆ ಪವಿತ್ರವಾದ ಸಬ್ಬತ್ ದಿನ ಪ್ರಾರಂಭವಾಗುತ್ತದೆ. ಪಿಲಾತನು ಅರಿಮಥಾಯನ ಯೋಸೆಫ್ ಮತ್ತು ನಿಕೋದೇಮರೆಂಬ ಯೇಸುಕ್ರಿಸ್ತರ ಮಿತ್ರರನ್ನು ತನ್ನ ಉಪಾಯವನ್ನು ಈಡೇರಿಸಲು ಆಯ್ಕೆಮಾಡಿದನು. ಯೇಸುಕ್ರಿಸ್ತರನ್ನು ಪ್ರಜ್ಞಾಶೂನ್ಯ ಸ್ಥಿತಿಯಿಂದ ಪ್ರಜ್ಞೆಗೆ ತರಲು ಆವಶ್ಯಕ ಕ್ರಮಗಳನ್ನು ಕೈಗೊಳ್ಳಲಾಯಿತು. ಹಾಗಲ್ಲವಾಗಿದ್ದರೆ, ನಿಕೋದೇಮನು ರಕ್ತಬೋಳ ಮತ್ತು ಅಗರನ್ನು ಕಲಸಿದ ಚೂರ್ಣವನ್ನು ತಂದುದೇಕೆ?

ಯೇಸು ಕ್ರಿಸ್ತರನ್ನು ಸರಕಾರಿ ದಾಖಲೆಗಳಲ್ಲಿ ಮೃತನೆಂದು ದಾಖಲಿಸಿ ಯಹೂದಿಯರನ್ನು ಸಮಾಧಾನಪಡಿಸಲಾಯಿತು ಮತ್ತು ರೋಮಿನ ಸರಕಾರಕ್ಕೆ ಹಾಗೆ ತಿಳಿಸಲಾಯಿತು. ಅರಿಮಥಾಯದ ಯೋಸೆಫನು ಯೇಸುಕ್ರಿಸ್ತರ 'ದೇಹ'ವನ್ನು ತನಗೆ ನೀಡಬೇಕೆಂದು ಪಿಲಾತನನ್ನು ಕೇಳಿಕೊಂಡಾಗ ಅವನ ಅಪೇಕ್ಷೆಯನ್ನು ಕೂಡಲೆ ಅಂಗೀಕರಿಸಲಾಯಿತು. ಪಿಲಾತನು ಮುಂಚಿತವಾಗಿ ಈ ಬಗ್ಗೆ ರಹಸ್ಯ ಯೋಜನೆ ರೂಪಿಸಿರಲಿಲ್ಲವಾದರೆ ಆತನು ಒಬ್ಬ ಆಗಂತುಕನಿಗೆ ಯೇಸುಕ್ರಿಸ್ತರ ದೇಹವನ್ನು ನೀಡುವುದಾದರೂ ಹೇಗೆ? ಯೇಸು ಕ್ರಿಸ್ತರಿಗೆ ಸಹ ಈ ರಹಸ್ಯ ಕಾರ್ಯಾಚರಣೆ ಬಗ್ಗೆ ತಿಳಿದಿತ್ತೆಂದು ತೋರುತ್ತದೆ. ನಿಕೋದೇಮನು ಮುನ್ನಾದಿನ ರಾತ್ರಿ ಯೇಸುಕ್ರಿಸ್ತರನ್ನು ಭೇಟಿಯಾದುದು ಈ ರಹಸ್ಯ ಕಾರ್ಯಾಚರಣೆಯನ್ನು ಬಹಿರಂಗಪಡಿಸುತ್ತದೆ.

**5. ಯೇಸು ಕ್ರಿಸ್ತರು ಶಿಲುಬೆಯಲ್ಲಿದ್ದ ಕಾಲಾವಧಿ**

ಯೇಸು ಕ್ರಿಸ್ತರು ಶಿಲುಬೆಯಲ್ಲಿದ್ದ ಕಾಲ ಅವರು ಅದರಲ್ಲಿ ಮೃತರಾಗಲು ಸಾಕಾಗುವಷ್ಟಾಗಿರಲಿಲ್ಲ. ಅಪರಾಧಿಗಳು ಶಿಲುಬೆಗೆ ಜಡಿಯಲ್ಪಟ್ಟ ನಂತರ ರಕ್ತಸ್ರಾವದ ಕಾರಣದಿಂದಲೂ ಬಳಲಿಕೆಯಿಂದಲೂ ಹಸಿವೆ ಬಾಯಾರಿಕೆಯಿಂದಲೂ ಯಾತನೆಪಟ್ಟು ಅನೇಕ ದಿನಗಳ ನಂತರ ಮೃತರಾಗುತ್ತಿದ್ದರು. ಶಿಲುಬೆಯಲ್ಲಿ ಸಾಯಲು ಕನಿಷ್ಠ 24ರಿಂದ 28 ಗಂಟೆಗಳ ಕಾಲ ಬೇಕಾಗುತ್ತಿತ್ತು. ಕೆಲವು ಸಾರಿ ಅನೇಕ ದಿನಗಳ ನಂತರ ಸಾವು ಸಂಭವಿಸುತ್ತಿತ್ತು. ಅಂತಹ ಸಂದರ್ಭಗಳಲ್ಲಿ ಶಿಲುಬೆಯಿಂದ ಇಳಿಸುವಾಗ ಜೀವಂತವಾಗಿದ್ದವರ ಕಾಲುಗಳನ್ನು ಮುರಿದು ಹಾಕಿ ಕೊಲ್ಲಲಾಗುತ್ತಿತ್ತು. ಹಾಗೆ ಅವರು ರಕ್ತಸ್ರಾವದಿಂದ ಸಾಯುತ್ತಿದ್ದರು.

ಯೇಸು ಕ್ರಿಸ್ತರು ಶಿಲುಬೆಯಲ್ಲಿದ್ದ ಕಾಲಾವಧಿ ಬಗ್ಗೆ ಪರಿಶಿಲಿಸಿದಾಗ ಅವರು ಕೇವಲ ಮೂರು ಅಥವಾ ನಾಲ್ಕು ಗಂಟೆಗಳ ಕಾಲ ಮಾತ್ರ ಶಿಲುಬೆಯಲ್ಲಿದ್ದರೆಂದು ತಿಳಿಯುತ್ತದೆ. ಮೂವತ್ತ ಮೂರು ವರ್ಷ ಪ್ರಾಯದ ದೃಢಕಾಯ ತರುಣರಾಗಿದ್ದ ಯೇಸು ಕ್ರಿಸ್ತರು ಇಷ್ಟು ಅಲ್ಪ ಕಾಲಾವಧಿಯಲ್ಲಿ ಶಿಲುಬೆಯಲ್ಲಿ ಮೃತರಾಗುವುದು ಸಾಧ್ಯವಿರಲಿಲ್ಲ. ಅವರ ಕಾಲುಗಳನ್ನು ಮುರಿದಿರಲಿಲ್ಲ. ಆದರೆ ಅವರೊಂದಿಗೆ ಶಿಲುಬೆಗೆ ಜಡಿಯಲ್ಪಟ್ಟ ಇಬ್ಬರು ಕಳ್ಳರ ಕಾಲುಗಳನ್ನು ಮುರಿದು ಹಾಕಲಾಗಿತ್ತು.

**"ಮಧ್ಯಾಹ್ನವಾದಾಗ ಆ ದೇಶದ ಮೇಲೆಲ್ಲಾ ಕತ್ತಲೆ ಕವಿದು ಸಾಯಂಕಾಲ ಮೂರು ಗಂಟೆ ತನಕ ಇತ್ತು. ಮೂರು ಗಂಟೆಗೆ ಯೇಸು – ಎಲೋಹಿ, ಎಲೋಹಿ, ಲಮಾ ಸಬಕ್ತಾನೀ ಅಂದರೆ ನನ್ನ ದೇವರೇ, ನನ್ನ ದೇವರೇ, ಯಾಕೆ ನನ್ನನ್ನು ಕೈಬಿಟ್ಟಿದ್ದೀ ಎಂದು ಮಹಾಧ್ವನಿಯಿಂದ ಕೂಗಿದನು."**

**(ಮಾರ್ಕ 15:33, 34)**

ಯೋಹಾನ 19:14 ಪ್ರಕಾರ ಶುಕ್ರವಾರ ಹಗಲು ಆರನೇ ಗಂಟೆ (ಅಂದರೆ ಸೂರ್ಯೋದಯವಾಗಿ ಆರು ಗಂಟೆ ಕಳೆದು) ಯೇಸುಕ್ರಿಸ್ತರನ್ನು ಶಿಲುಬೆಗೆ ಜಡಿಯಲಾಯಿತು.

ಯೇಸು ಕ್ರಿಸ್ತರು ಶಿಲುಬೆಯಲ್ಲಿ ಸಾಯಂಕಾಲ ಮೂರು ಗಂಟೆಯ ತನಕ ಪ್ರಜ್ಞೆಯಿಂದ ಇದ್ದರು. ಅನಂತರ ಅವರಿಗೆ ಪ್ರಜ್ಞೆ ತಪ್ಪಿತು. ಅದನ್ನೇ "ಮಹಾಧ್ವನಿಯನ್ನು ಗೈದು ಪ್ರಾಣಬಿಟ್ಟನು" ಎಂದು ಮಾರ್ಕ 15:37ರಲ್ಲಿ ಬರೆಯಲಾಗಿದೆ. ಹೀಗೆ ಬರೆದವರು ಅಲ್ಲಿ ಸ್ವತಃ ನೋಡಿದ ಸಾಕ್ಷಿಗಳಾಗಿರಲಿಲ್ಲ. ಮೂರ್ಛೆಯನ್ನು ಮರಣವೆಂದು ಭಾವಿಸಲಾಯಿತು. ಶಿಲುಬೆಯಲ್ಲಿ ಮೃತನಾಗುವುದೆಂದರೆ ದೇವನ ಶಾಪಕ್ಕೆ ಗುರಿಯಾಗುವುದು ಎಂದು ಅರ್ಥ. ಧರ್ಮೋಪದೇಶ ಕಾಂಡ 21:23 ಇದನ್ನೇ ಹೇಳುತ್ತದೆ. ನೋಡಿರಿ: **"ಮರಕ್ಕೆ ತೂಗ ಹಾಕಲ್ಪಟ್ಟವನು ದೇವರ ಶಾಪವನ್ನು ಹೊಂದಿದವನಲ್ಲವೇ?"**

ದೇವನ ಸತ್ಯ ಪ್ರವಾದಿಯಾಗಿದ್ದ ಯೇಸು ಕ್ರಿಸ್ತರನ್ನು ದೇವನ ಶಾಪಕ್ಕೆ ಗುರಿಯಾದವ ಎಂದು ಹೇಗೆ ತಾನೆ ಕ್ರೈಸ್ತ ಧರ್ಮಾವಲಂಬಿಗಳು ಆರೋಪಿಸಲು ಧೈರ್ಯಪಡುತ್ತಾರೆ.

**6. ರಕ್ತ ಮತ್ತು ನೀರು**

ಹೊಸ ಒಡಂಬಡಿಕೆಯ ಈ ಉಲ್ಲೇಖ ನೋಡಿರಿ:

**"ಸಿಪಾಯಿಗಳು ಬಂದು ಮೊದಲನೆಯವನ ಕಾಲುಗಳನ್ನೂ ಅವನ ಜೊತೆಯಲ್ಲಿ ಶಿಲುಬೆಗೆ ಹಾಕಿಸಿಕೊಂಡಿದ್ದ ಮತ್ತೊಬ್ಬನ ಕಾಲುಗಳನ್ನೂ ಮುರಿದರು. ಆದರೆ ಯೇಸುವಿನ ಬಳಿಗೆ ಬಂದಾಗ ಆತನು ಆಗಲೇ ಸತ್ತಿರುವುದನ್ನು ಅವರು ಕಂಡು ಆತನ ಕಾಲುಗಳನ್ನು ಮುರಿಯಲಿಲ್ಲ. ಆದರೂ ಸಿಪಾಯಿಗಳಲ್ಲಿ ಒಬ್ಬನು ಈಟಿಯಿಂದ ಆತನ ಪಕ್ಕೆಯನ್ನು ತಿವಿದನು; ತಿವಿದ ಕೂಡಲೆ ರಕ್ತವೂ ನೀರೂ ಹೊರಟಿತು." (ಯೋಹಾನ 19:32-34)**

ಸಿಪಾಯಿಗಳು ಯೇಸು ಕ್ರಿಸ್ತರ ಕಾಲುಗಳನ್ನು ಮುರಿಯಲಿಲ್ಲ. ಯಾಕೆಂದರೆ, ಸಿಪಾಯಿಗಳು ಜ್ಞಾನ ತಪ್ಪಿದ ಯೇಸು ಕ್ರಿಸ್ತರನ್ನು ಮೃತರಾದರೆಂದು ಭಾವಿಸಿದ್ದರು ಅಥವಾ ಯಹೂದಿಯರನ್ನು ಸಮಾಧಾನ ಪಡಿಸಲು ಯೇಸು ಕ್ರಿಸ್ತರು ಮೃತರಾದರೆಂದು ಹೇಳಿದರು. ಆದರೆ ಒಬ್ಬ ಸಿಪಾಯಿ ಯೇಸು ಕ್ರಿಸ್ತರ ಪಕ್ಕೆಯನ್ನು ಈಟಿಯಿಂದ ತಿವಿದಾಗ "ತಿವಿದ ಕೂಡಲೆ ರಕ್ತವೂ ನೀರೂ ಹೊರಟಿತು". ಇದು ಯೇಸು ಕ್ರಿಸ್ತರು ಮೃತರಾಗಿರಲಿಲ್ಲವೆಂಬುದಕ್ಕೆ ಸಾಕ್ಷಿಯಾಗಿದೆ. ಮೃತ ಶರೀರದಿಂದ ರಕ್ತವೂ ನೀರೂ ಹೊರಕ್ಕೆ ಬರಲಾರದು. ಜೀವವಿರುವ ವ್ಯಕ್ತಿಯಿಂದ ಮಾತ್ರ ಹೃದಯದ ರಕ್ತದೊತ್ತಡದ ಮೂಲಕ ಇದು ಸಾಧ್ಯವಾಗುವುದು. ಇದು ಚಿಂತಾರ್ಹವಾದ ವಿಷಯವಾಗಿದೆ.

### 7. ದೃಕ್ ಸಾಕ್ಷಿಗಳಿರಲಿಲ್ಲ

ಸೂರ್ಯೋದಯದ ನಂತರ ಆರನೆಯ ಗಂಟೆಯಿಂದ ಒಂಬತ್ತನೆಯ ಗಂಟೆಯ ತನಕ ಕತ್ತಲೆ ಎಲ್ಲಾ ಕಡೆ ಆವರಿಸಿತ್ತೆಂದೂ ಭೂಕಂಪ ಉಂಟಾಯಿತೆಂದೂ ಬಂಡೆಗಳು ಒಡೆದುವು ಎಂದೂ ದೇವಾಲಯದ ಪರದೆ ಹರಿದು ಇಬ್ಭಾಗವಾಯಿತೆಂದೂ ಸುವಾರ್ತೆಗಳ ಮೂವರು ಲೇಖಕರು ಹೇಳುತ್ತಾರೆ. ಧೂಳಿನ ಬಿರುಗಾಳಿ ಬೀಸುವಾಗ ಮತ್ತು ಭೂಕಂಪನವಾಗುವಾಗ ಜನರು ಶಿಲುಬೆಗೆ ಜಡಿಯಲ್ಪಟ್ಟವರನ್ನು ನೋಡಲು ನಿಲ್ಲದೆ ಮನೆಯ ಕಡೆಗೆ ಧಾವಿಸುವರೆಂಬುದು ಜನರ ಸಹಜವಾದ ಸಾಮಾನ್ಯ ನಡೆವಳಿಕೆಯಾಗಿದೆ. ಇಂತಹ ಪರಿಸ್ಥಿತಿಯಲ್ಲಿ ಅಲ್ಲಿ ಹಾಜರಿದ್ದು ಯೇಸು ಕ್ರಿಸ್ತರು ನಿಜವಾಗಿಯೂ ಶಿಲುಬೆಯಲ್ಲಿ ಮೃತರಾದರೆಂಬುದಕ್ಕೆ ಸಾಕ್ಷ್ಯನೀಡಬಲ್ಲವರು ಯಾರು? ಅಲ್ಲಿದ್ದ ಯಹೂದಿಯರು ಬಿರುಗಾಳಿ ಬೀಸುವುದನ್ನೂ ಭೂಮಿ ಕಂಪಿಸುವುದನ್ನೂ ಕಂಡು ಹೆದರಿಕೆಯಿಂದ ಮನೆಗಳಿಗೆ ಓಡಿಹೋಗಿರಬೇಕು. ಶಿಷ್ಯರಾದರೋ ಶಿಲುಬೆಗೇರಿಸಲ್ಪಡುವ ಸ್ಥಳದಿಂದ ಮೊದಲೇ ಓಡಿಹೋಗಿದ್ದರು.

ಸುವಾರ್ತೆಯ ಈ ಉಲ್ಲೇಖಗಳನ್ನು ನೋಡಿರಿ.

**"ಪೇತ್ರನು, ನೀವು ಹೇಳುವ ಆ ಮನುಷ್ಯನನ್ನು ನಾನರಿಯೆನು ಎಂದು ಹೇಳಿ ಶಪಿಸಿಕೊಳ್ಳುವುದಕ್ಕೂ ಆಣೆಯಿಟ್ಟುಕೊಳ್ಳುವುದಕ್ಕೂ ಪ್ರಾರಂಭಿಸಿದನು." (ಮಾರ್ಕ 14:71)**

**"ಆಗ ಶಿಷ್ಯರೆಲ್ಲರೂ ಆತನನ್ನು ಬಿಟ್ಟು ಓಡಿಹೋದರು." (ಮಾರ್ಕ 14:50)**

ಯೇಸು ಕ್ರಿಸ್ತರು ಮೃತರಾದರೆಂಬುದಕ್ಕೆ ಸಾಕ್ಷ್ಯ ನೀಡಲು ಅಲ್ಲಿ ಯಾರೂ ಇರಲಿಲ್ಲ. "ಪ್ರಾಣ ಬಿಟ್ಟನು" ಎಂದು ಬರೆದುದು ಬರೀ ಊಹೆ ಮಾತ್ರವಾಗಿದೆ.

### 8. ಯೇಸು ಕ್ರಿಸ್ತರ ಆಗಮನದ ಉದ್ದೇಶ "ಇಸ್ರಾಯೇಲನ ಮನೆತನದವರ ತಪ್ಪಿಸಿಕೊಂಡ ಕುರಿಗಳಿಗೆ"

ಹೊಸ ಒಡಂಬಡಿಕೆಯ ಈ ಕೆಳಗಿನ ಉಲ್ಲೇಖಗಳನ್ನು ನೋಡಿರಿ:

**"ಮನುಷ್ಯಕುಮಾರನು ಕೆಟ್ಟು ಹೋಗಿರುವದನ್ನು ಹುಡುಕಿ ರಕ್ಷಿಸುವುದಕ್ಕೆ ಬಂದನು ಎಂದು ಹೇಳಿದನು." (ಲೂಕ 19:10)**

**"ಇದಲ್ಲದೆ ಈ ಹಟ್ಟಿಗೆ ಸೇರದಿರುವ ಇನ್ನು ಬೇರೆ ಕುರಿಗಳು ನನಗೆ ಇವೆ. ಅವುಗಳನ್ನೂ ನಾನು ತರಬೇಕು; ಅವು ನನ್ನ ಸ್ವರಕ್ಕೆ ಕಿವಿಗೊಡುವುದು; ಆಗ ಒಂದೇ ಹಿಂಡು ಆಗುವುದು, ಒಬ್ಬನೇ ಕುರುಬನಿರುವನು." (ಯೋಹಾನ 10:16)**

**"ನಾನು ದೇವರ ರಾಜ್ಯದ ಸುವಾರ್ತೆಯನ್ನು ಬೇರೆ ಊರುಗಳಿಗೂ ಸಾರಿ ಹೇಳಬೇಕಾಗಿದೆ; ಇದಕ್ಕಾಗಿಯೇ ನಾನು ಕಳುಹಿಸಲ್ಪಟ್ಟಿದ್ದೇನೆ ಎಂದು ಹೇಳಿದನು." (ಲೂಕ 4:43)**

**"ಅದಕ್ಕಾತನು ತಪ್ಪಿಸಿಕೊಂಡ ಕುರಿಗಳಂತಿರುವ ಇಸ್ರಾಯೇಲನ ಮನೆತನದವರ ಬಳಿಗೇ ಹೊರತು ಮತ್ತಾರ ಬಳಿಗೂ ನಾನು ಕಳುಹಿಸಲ್ಪಟ್ಟವನಲ್ಲ ಎಂದನು."**

ಯೇಸು ಕ್ರಿಸ್ತರ ಆಗಮನದ ಉದ್ದೇಶ ಯಹೂದಿಯರ ಹನ್ನೆರಡು ಗೋತ್ರಗಳಿಗೆಲ್ಲಾ ಉಪದೇಶ ನೀಡಲಿಕ್ಕಾಗಿತ್ತು ಎಂದು ಮೇಲಿನ ಉಲ್ಲೇಖಗಳಿಂದ ಸ್ಪಷ್ಟವಾಗುತ್ತದೆ. ಆ ಗೋತ್ರಗಳು ಪಾಲೆಸ್ತೀನಿನಿಂದ ಭಾರತದ ತನಕ ಪೂರ್ವದ ದೇಶಗಳಲ್ಲಿ ಅವರ ಆಗಮನದ ಕಾಲದಲ್ಲಿ ಚದುರಿ ಹೋಗಿದ್ದವು. ಆ ಸಮಯದಲ್ಲಿ ಹನ್ನೆರಡು ಗೋತ್ರಗಳಲ್ಲಿ ಎರಡು ಗೋತ್ರಗಳು ಮಾತ್ರ ಪಾಲೆಸ್ತೀನಿನಲ್ಲಿ ಇದ್ದುವು. ಉಳಿದ ಹತ್ತು ಗೋತ್ರಗಳು ಪಾಲೆಸ್ತೀನಿನಿಂದ ಭಾರತದ ತನಕ ವಿವಿಧ ದೇಶಗಳಲ್ಲಿ ಹರಡಿ ಹೋಗಿದ್ದುವು. ಕಾಣೆಯಾಗಿ ಹೋದ ಹತ್ತು ಗೋತ್ರಗಳಿಗೆ ಉಪದೇಶ ನೀಡಲು ಯೇಸು ಕ್ರಿಸ್ತರಿಗೆ ಸಾಧ್ಯವಾಗಿರದಿದ್ದರೆ ಅವರು ತನ್ನ ಆಗಮನದ ಉದ್ದೇಶವನ್ನು ಈಡೇರಿಸಿದಂತೆ ಆಗಲಾರದು. ಯೇಸು ಕ್ರಿಸ್ತರು ಮೂವತ್ತ ಮೂರನೇ ವರ್ಷದ ಪ್ರಾಯದಲ್ಲಿ ಶಿಲುಬೆಯಲ್ಲಿ ಮೃತರಾದರೆಂಬುದು ವಾಸ್ತವಿಕವಾದರೆ ಅದು ಅವರ ಆಗಮನೋದ್ದೇಶಕ್ಕೆ ಆಘಾತಕರ ವಾಗುವುದು. ಆದರೆ ನಿಜವಾದ ಅಂಶವೇನೆಂದರೆ, ಯೇಸು ಕ್ರಿಸ್ತರು ಶಿಲುಬೆಯಲ್ಲಿ ಮೃತರಾಗದೆ ರಕ್ಷಿಸಲ್ಪಟ್ಟರು. ಅವರು ಅನಂತರ ಇಸ್ರಾಯೇಲ್ ಮನೆತನದ ಕಾಣದೆ ಹೋದ ಕುರಿಗಳನ್ನು ಹುಡುಕಿಕೊಂಡು ಪೂರ್ವದ ದೇಶಗಳಿಗೆ ಹೋದರು. ಇದರ ಬಗ್ಗೆ ಸಾಕಷ್ಟು ಚಾರಿತ್ರಿಕ ಪುರಾವೆಗಳಿವೆಯಲ್ಲದೆ ಪುರಾತತ್ವಶಾಸ್ತ್ರದ ಆಧುನಿಕ ಸಾಕ್ಷ್ಯಾಧಾರಗಳು ಸಹ ಇವೆ. ಯೇಸು ಕ್ರಿಸ್ತರು ಪರ್ಶಿಯಾ, ಅಫ್‌ಘಾನಿಸ್ತಾನ ಮತ್ತು ಕಾಶ್ಮೀರದಲ್ಲಿ, ಕಾಣದೆ ಹೋದ ಕುರಿಗಳನ್ನು ಕಂಡು ಅವರಿಗೆ ಉಪದೇಶಿಸಿದರು. ಅವರು ಪಾಲೆಸ್ತೀನಿನಲ್ಲಿ ಗಳಿಸಿದುದಕ್ಕಿಂತ ಹೆಚ್ಚಿನ ಜಯವನ್ನು ಇಲ್ಲಿ ಗಳಿಸಿದರು. ಅವರು ದೀರ್ಘಕಾಲ ಜೀವಿಸಿ ಅನಂತರ ಸ್ವಾಭಾವಿಕವಾಗಿ ಮೃತರಾದರು ಮತ್ತು ಅವರ ದೇಹವನ್ನು ಕಾಶ್ಮೀರದ ಶ್ರೀನಗರದಲ್ಲಿ ದಫನುಗೊಳಿಸಲಾಯಿತು.

### 9. ಯೇಸು ಕ್ರಿಸ್ತರು ಶತ್ರುಗಳ ವಿರುದ್ಧ ಗಳಿಸಿದ ಜಯ

ಯೇಸು ಕ್ರಿಸ್ತರು ಶಿಷ್ಯರೊಂದಿಗೆ ಹೀಗೆಂದರು:

**"ನೋಡಿರಿ, ನಿಮ್ಮಲ್ಲಿ ಒಬ್ಬೊಬ್ಬನು ತನ್ನ ತನ್ನ ಸ್ಥಳಕ್ಕೆ ಚದರಿ ಹೋಗಿ ನನ್ನನ್ನು ಒಂಟಿಗನಾಗಿ ಬಿಡುವ ಕಾಲ ಬರುವುದು, ಈಗ ಬಂದಿದೆ. ಆದರೆ ನಾನು ಒಂಟಿಗನಲ್ಲ, ತಂದೆಯು ನನ್ನ ಸಂಗಡ ಇದ್ದಾನೆ. ನೀವು ನನ್ನಲ್ಲಿದ್ದು ಮನಶ್ಶಾಂತಿಯನ್ನು ಹೊಂದಿದವರಾಗಬೇಕೆಂದು ಇದನ್ನೆಲ್ಲಾ ನಿಮಗೆ ಹೇಳಿದ್ದೇನೆ. ಲೋಕದಲ್ಲಿ ನಿಮಗೆ ಸಂಕಟ ಉಂಟು; ಧೈರ್ಯವಾಗಿರಿ, ನಾನು ಲೋಕವನ್ನು ಜಯಿಸಿದ್ದೇನೆ ಎಂದು ಹೇಳಿದನು." (ಯೋಹಾನ 16:32,33)**

ಯೇಸು ಕ್ರಿಸ್ತರು ಜಯಶಾಲಿಯಾದುದು ಹೇಗೆ? ಅವರು ಶಿಲುಬೆಯಲ್ಲಿ ಮೃತರಾಗಿ ಜಯಗಳಿಸಿದರೋ ಅಥವಾ ಅದರಲ್ಲಿ ಮೃತರಾಗದೆ ರಕ್ಷಿಸಲ್ಪಟ್ಟು ಜಯಶಾಲಿಯಾದರೋ? ಯೇಸುಕ್ರಿಸ್ತರು ಶಿಲುಬೆಯಲ್ಲಿ ಮೃತರಾಗಿದ್ದರೆ ಯಹೂದಿಯರು ಜಯಶಾಲಿಗಳಾದರು. ಅವರ ನಂಬಿಕೆ ಪ್ರಕಾರ ಯೇಸು ಕ್ರಿಸ್ತರು ಸುಳ್ಳುಗಾರನಾಗಿದ್ದರು. ಅವರಿಗೆ ಬೈಬಲಿನ ಈ ಉಲ್ಲೇಖವು ಸಹಾಯಕವಾಗಿದೆ:

**"ಮರಕ್ಕೆ ತೂಗ ಹಾಕಲ್ಪಟ್ಟವನು ದೇವರ ಶಾಪವನ್ನು ಹೊಂದಿದವನು." (ಧರ್ಮೋಪದೇಶ ಕಾಂಡ 21:23)**

ಯೇಸು ಕ್ರಿಸ್ತರು ಶಿಲುಬೆಯಿಂದ ಸಜೀವವಾಗಿ ಇಳಿಸಲ್ಪಟ್ಟರು; ಅವರು ಜ್ಞಾನತಪ್ಪಿದವರಾಗಿದ್ದರು; ಅವರು ಭೂಗರ್ಭದೊಳಗೆ ಹೋಗುವಾಗ ಸಜೀವವಾಗಿ ಹೋದರು ಮತ್ತು ಜೀವ ಸಹಿತವಾಗಿ

(23ನೇ ಪುಟ ನೋಡಿ)

# ಇಸ್ಲಾಮಿನ ಪ್ರಾಥಮಿಕ ಪಾಠಗಳು

## ನಮಾಝ್

ಅಲ್ಲಾಹನು ಮನುಷ್ಯರನ್ನು ಸೃಷ್ಟಿಸಿರುವನು. ಅವನು ಮನುಷ್ಯರ ಎಲ್ಲಾ ಆವಶ್ಯಕತೆಗಳನ್ನು ಈಡೇರಿಸಿರುವನು ಮತ್ತು ಅವರಿಗಾಗಿ ಎಲ್ಲಾ ವಿಧದ ಸಾಮಗ್ರಿಗಳನ್ನು ಒದಗಿಸಿ ಕೊಟ್ಟಿರುವನು. ಅವನು ಶರೀರ ಪೋಷಣೆಗೆ ಆಹಾರ ಪದಾರ್ಥಗಳನ್ನೂ, ಧರಿಸಲಿಕ್ಕಾಗಿ ಪೋಷಾಕನ್ನೂ ಮನುಷ್ಯರಿಗೆ ಅನುಗ್ರಹಿಸಿರುವನು. ಇವುಗಳಿಗೆಲ್ಲಾ ನಾವು ಅಲ್ಲಾಹನಿಗೆ ಕೃತಜ್ಞತೆ ಅರ್ಪಿಸುವುದು ಅತ್ಯಾವಶ್ಯಕವಾಗಿದೆ. ಅಲ್ಲಾಹನು ನಮಗೆ ನೀಡಿರುವ ಅನುಗ್ರಹಗಳನ್ನು ನಾವು ಮನವರಿಕೆ ಮಾಡಿಕೊಂಡು ಆ ಬಗ್ಗೆ ಕೃತಜ್ಞತೆಯ ಭಾವನೆಯನ್ನು ಹೊಂದಿ ಅವನನ್ನು ಆರಾಧಿಸತಕ್ಕದ್ದಾಗಿದೆ. ಅಲ್ಲಾಹನು ಪವಿತ್ರ ಖುರ್‌ಆನಿನಲ್ಲಿ ಹೀಗೆಂದಿರುವನು:

وَمَا خَلَقْتُ الْجِنَّ وَالْإِنْسَ إِلَّا لِيَعْبُدُونِ

ವಮಾ ಖಲಖ್ತುಲ್ ಜಿನ್ನ ವಲ್ ಇನ್‌ಸ ಇಲ್ಲಾ ಲಿಯಅ್‌ಬುದೂನ್.
(ಜಿನ್ನ್ ಮತ್ತು ಇನ್ಸ್ ಇವರನ್ನು ನನ್ನ ಆರಾಧನೆಗಾಗಿ ಮಾತ್ರ ಸೃಷ್ಟಿಸಿರುವೆನು.)

ಅಂದರೆ, ಮನುಷ್ಯರನ್ನು ಅಲ್ಲಾಹನ ಆರಾಧನೆಗಾಗಿಯೇ ಸೃಷ್ಟಿಸಲಾಗಿದೆ. ಎಲ್ಲಾ ವಸ್ತುಗಳು ಮನುಷ್ಯರ ಉಪಯೋಗಕ್ಕಾಗಿ ಸೃಷ್ಟಿಸಲ್ಪಟ್ಟಿವೆ ಮತ್ತು ಮನುಷ್ಯನು ಅಲ್ಲಾಹನನ್ನು ಆರಾಧಿಸಲಿಕ್ಕಾಗಿ ಸೃಷ್ಟಿಸಲ್ಪಟ್ಟಿರುವನು.

ಎಲ್ಲಾ ಆರಾಧನೆಗಳಿಗಿಂತಲೂ ಅತ್ಯಂತ ಶ್ರೇಷ್ಠವಾದುದು ನಮಾಝ್ ಆಗಿದೆ. ನಮಾಝ್ ಸತ್ಯ ವಿಶ್ವಾಸಿಗಳಿಗೆ ಅಭಿವೃದ್ಧಿಗಾಗಿರುವ ಮಾರ್ಗವಾಗಿದೆ. ಎಷ್ಟು ಅಭಿವೃದ್ಧಿ ಆಶಿಸುವುದಾದರೂ ಅದರ ಮೂಲಕ ಗಳಿಸಲು ಸಾಧ್ಯವಿದೆ. ನಮಾಝ್ ನಿರ್ಲಜ್ಜಕರವಾದ ಕೃತ್ಯಗಳಿಂದಲೂ ದುಷ್ಟ ಕಾರ್ಯಗಳಿಂದಲೂ ಮನುಷ್ಯರನ್ನು ತಡೆಯುತ್ತದೆ. ನಮಾಝ್‌ನಿಂದ ಹೃದಯ ಶುದ್ಧವಾಗುತ್ತದೆ ಮತ್ತು ಪಾಪಕೃತ್ಯಗಳ ಕೊಳೆಯು ದೂರವಾಗುತ್ತದೆ. ಮನುಷ್ಯನು ಎಲ್ಲಾ ವಿಧದ ಪಾಪಗಳಿಂದಲೂ ಕೆಡುಕುಗಳಿಂದಲೂ ಸಂರಕ್ಷಿಸಲ್ಪಡುತ್ತಾನೆ. ಹೃತ್ಪೂರ್ವಕವಾಗಿಯೂ ವಿನಮ್ರನಾಗಿಯೂ ಯಾರು ನಮಾಝ್ ಮಾಡುತ್ತಾನೋ ಅವನಿಗೆ ಅಲ್ಲಾಹನು ಗೌರವ ಮತ್ತು ಹಿರಿಮೆಯನ್ನು ನೀಡುತ್ತಾನೆ. ಅಲ್ಲದೆ ಅಲ್ಲಾಹನು ಅವನಿಗೆ ತನ್ನ ಸನ್ನಿಧಾನದಲ್ಲಿ ಸ್ಥಳ ನೀಡುತ್ತಾನೆ. ಇಂತಹ ಜನರ ಬಗ್ಗೆ ಅಲ್ಲಾಹನು ಪವಿತ್ರ ಖುರ್‌ಆನಿನಲ್ಲಿ ಹೀಗೆ ಹೇಳಿರುವನು:

أُولَٰئِكَ فِي جَنَّاتٍ مُكْرَمُونَ

ಉಲಾಇಕ ಫೀ ಜನ್ನಾತಿನ್ ಮುಕ್ರಮೂನ್
(ಅವರು ಸ್ವರ್ಗದಲ್ಲಿ ಗೌರವಿಸಲ್ಪಡುವರು)

## ನಮಾಝ್ ಎಂದರೆ ಏನು?

ಅದು ಅಲ್ಲಾಹನನ್ನು ಸ್ಮರಿಸಿ ಮಾಡುವ ಪ್ರಾರ್ಥನೆಯಾಗಿದೆ. ಅದರಲ್ಲಿ ತಸ್‌ಬೀಹ್ (ಅಲ್ಲಾಹನ ಪಾವಿತ್ರ್ಯದ ಕೊಂಡಾಡುವಿಕೆ), ತಹ್‌ಮೀದ್ (ಅಲ್ಲಾಹನ ಸ್ತುತಿ), ತಖ್‌ದೀಸ್ (ಅಲ್ಲಾಹನ ಮಹಿಮೆಯ ವರ್ಣನೆ), ಇಸ್ತಿಗ್‌ಫಾರ್ (ಕ್ಷಮಾಯಾಚನೆ), ದರೂದ್ (ಹಝ್ರತ್ ಮುಹಮ್ಮದ್ ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಬಗ್ಗೆ ಅನುಗ್ರಹ ಯಾಚನೆ), ಬಹಳ ವಿನಮ್ರ ಭಾವನೆಯಿಂದ ಮಾಡುವ ದುಆ (ಪ್ರಾರ್ಥನೆ) - ಇವೆಲ್ಲ ಸೇರಿರುತ್ತವೆ. ನೀವು ಪ್ರಾರ್ಥನೆಗೆ ನಿಂತಾಗ ಬಹಳ ವಿನಯಾನ್ವಿತರಾಗಿದ್ದುಕೊಳ್ಳಿರಿ. ನೀವು ಅಲ್ಲಾಹನನ್ನು ನೋಡುತ್ತಿರುವಿರೋ ಎಂಬಂತೆ; ಅಥವಾ ಕನಿಷ್ಠ ಪಕ್ಷ ನಿಮ್ಮನ್ನು ಅಲ್ಲಾಹನು ನೋಡುತ್ತಿರುವನೆಂದೂ ನೀವು ಅವನ ಮುಂದೆ ನಿಂತಿರುವಿರೆಂದೂ ಗ್ರಹಿಸುತ್ತಾ ಪ್ರಾರ್ಥನೆಗಾಗಿ ನಿಂತುಕೊಳ್ಳಿರಿ. ನಮಾಝ್ ಮಾಡುವಾಗ ಬೇರೇನೂ ಯೋಚನೆ ಮಾಡಬಾರದು. ಅಲ್ಲಾಹನ ಕಡೆಗೆಯೇ ನೀವು ಸಂಪೂರ್ಣ ಲಕ್ಷ್ಯ ನೀಡಬೇಕು. ನೀವು ಮಾಡಲು ಉದ್ದೇಶಿಸಿರುವ ಪ್ರಾರ್ಥನೆ ನಮಾಝ್‌ನಲ್ಲಿಯೇ ಮಾಡಬಹುದು. ಯಾರು ನಮಾಝನ್ನು ಅದರ ಎಲ್ಲಾ ನಿಬಂಧನೆಗಳೊಂದಿಗೆ ಅನುಷ್ಠಿಸುವುದಿಲ್ಲವೋ ಅಂತಹ ವ್ಯಕ್ತಿಯ ನಮಾಝ್ ನಿಜವಾದ ನಮಾಝ್ ಆಗುವುದಿಲ್ಲ. ನಮಾಝ್‌ನಲ್ಲಿ ತಾನು ಏನನ್ನು ಹೇಳುತ್ತಿದ್ದೇನೆ? ಎಂದು ತಿಳಿಯದವನ ನಮಾಝ್ ಸಹ ಸರಿಯಾದ ನಮಾಝ್ ಆಗುವುದಿಲ್ಲ. ಆದುದರಿಂದ ನೀವು ಚೆನ್ನಾಗಿ ಲಕ್ಷ್ಯವಿಟ್ಟು ಅರ್ಥ ಗ್ರಹಿಸಿ ನಮಾಝ್ ಮಾಡುವುದು ಅತ್ಯಾವಶ್ಯಕರವಾಗಿದೆ. ಅಲ್ಲಾಹನು ಯಾವ ರೀತಿ ಆಜ್ಞಾಪಿಸಿರುವನೋ ಅದೇ ರೀತಿ ನಮಾಝ್ ಮಾಡಿರಿ. ಅದರ ಫಲವಾಗಿ ನೀವು ಅಲ್ಲಾಹನ ಸಾಮೀಪ್ಯ ಪಡೆಯುವಿರಿ, ಅವನ ನಿಜವಾದ ದಾಸರಾಗುವಿರಿ ಮತ್ತು ಎಲ್ಲಾ ವಿಧದ ಪಾಪಗಳಿಂದ ವಿಮೋಚಿತರಾಗುವಿರಿ. ಆಧ್ಯಾತ್ಮಿಕವಾದ ಮತ್ತು ಲೌಕಿಕವಾದ ಎಲ್ಲಾ ಅನುಗ್ರಹಗಳು ನಿಮಗೆ ಲಭಿಸುವುವು ಹಾಗೂ ನಿಮಗೆ ದೈವಿಕ ಸಂತೃಪ್ತಿ ಸಿಗುವುದು. ಅಲ್ಲಾಹನ ತೃಪ್ತಿಗಿಂತ ಮಿಗಿಲಾದುದು ಬೇರೆ ಏನೂ ಇರುವುದಿಲ್ಲ.

## ನಮಾಝಿನ ನಿಬಂಧನೆಗಳು

**ನಮಾಝ್ ಮಾಡಲಿಕ್ಕಾಗಿ ಈ ಕೆಳಗಿನ ನಿಬಂಧನೆಗಳಿವೆ:**

1. ಶರೀರವು ಶುದ್ಧವಾಗಿರಬೇಕು.

2. ಬಟ್ಟೆಬರೆಗಳು ಸ್ವಚ್ಛವಾಗಿರಬೇಕು.
3. ನಮಾಝ್ ಅನುಷ್ಠಿಸುವ ಸ್ಥಳ ಶುದ್ಧವಾಗಿರಬೇಕು.
4. ಶರೀರದ ನಗ್ನ ಭಾಗಗಳನ್ನು ಮರೆಮಾಡಬೇಕು.
5. ಖಿಬ್ಲ (ಕಅ್‌ಬ) ಕಡೆಗೆ ಅಭಿಮುಖೀಕರಿಸಬೇಕು.
6. ನಮಾಝ್ ಮಾಡುತ್ತೇನೆ ಎಂದು ನಿಯ್ಯತ್ (ಸಂಕಲ್ಪ) ಮಾಡಬೇಕು.

## ಶರೀರದ ಶುದ್ಧೀಕರಣ

ನಮಾಝ್ ಮಾಡುವವನ ಶರೀರದಲ್ಲಿ 'ನಜಸ್' (ಕೊಳೆ) ಇರಬಾರದು. ಶರೀರ ಕೊಳಕಾಗಿದ್ದರೆ ಅದನ್ನು ತೊಳೆದು ಶುದ್ಧೀಕರಿಸಬೇಕು. ಮಲ, ಮೂತ್ರ, ರಕ್ತ, ಕೀವು, ವಾಂತಿ ಮೊದಲಾದವು ನಜಸ್‌ಗಳಾಗಿವೆ. ಮಲವಿಸರ್ಜನೆ ಮಾಡಿದವನು ಎಡಗೈಯಿಂದ ತೊಳೆದು ಶುದ್ಧೀಕರಿಸಬೇಕು. ಅನಂತರ ಕೈಯನ್ನು ಶುದ್ಧವಾಗಿರುವ ಮಣ್ಣಿನಲ್ಲಿ ಉಜ್ಜಿ ತೊಳೆಯಬೇಕು. ಸೋಪು ಉಪಯೋಗಿಸಿ ತೊಳೆಯುವುದು ಹೆಚ್ಚು ಉತ್ತಮವಾಗಿದೆ. ಮೂತ್ರ ವಿಸರ್ಜನೆಯ ನಂತರ ಸಹ ಎಡಗೈಯಿಂದ ತೊಳೆದು ಶುದ್ಧೀಕರಿಸಬೇಕು. ನೀರು ಸಿಗದಿದ್ದರೆ ಕಲ್ಲನ್ನು ಉಪಯೋಗಿಸಿ ಅಥವಾ ಮಣ್ಣಿನ ಹೆಂಟೆಗಳನ್ನು ಉಪಯೋಗಿಸಿ ಶೌಚಕಾರ್ಯವನ್ನು ನಡೆಸಬಹುದಾಗಿದೆ. ನಮಾಝ್ ಮಾಡುವವನ ವಸ್ತ್ರದಲ್ಲಿಯೋ ನಮಾಝ್ ಮಾಡುವ ಜಾಗದಲ್ಲಿಯೋ 'ನಜಸ್' ಇರಬಾರದು. ನಮಾಝ್ ಮಾಡುವ ಮೊದಲು ಶರೀರದಿಂದ ನಜಸ್ ಪದಾರ್ಥಗಳನ್ನು ತೊಳೆದು ಹಾಕಬೇಕಲ್ಲದೆ ನಮಾಝಿಗೆ ಮುಂಚಿತವಾಗಿ ವುಝು ಮಾಡುವುದೂ ಕಡ್ಡಾಯವಾಗಿದೆ.

ಕೆಲವು ಸಂದರ್ಭಗಳಲ್ಲಿ ಶರೀರ ಶುದ್ಧಿಗೆ ಸ್ನಾನ ಮಾಡಬೇಕಾಗಿರುವುದು ಕಡ್ಡಾಯವಾಗಿದೆ. ಅಂತಹ ಸಂದರ್ಭಗಳಲ್ಲಿ ನಮಾಝ್‌ಗೆ ಮುಂಚಿತವಾಗಿ ಸ್ನಾನಮಾಡುವುದು ಅತ್ಯಾವಶ್ಯಕವಾಗಿದೆ. ಪತಿ–ಪತ್ನಿಯರ ಶಾರೀರಕ ಸಂಪರ್ಕ ಮತ್ತು ಸ್ತ್ರೀಯರ ಮುಟ್ಟಿನ ಕಾಲದ ನಂತರ ಸ್ನಾನ ಮಾಡಬೇಕಾದುದು ಅತ್ಯಾವಶ್ಯಕವಾಗಿದೆ.

## ಸ್ನಾನ ಮಾಡುವ ಕ್ರಮ

ಮೊದಲು ಗುಹ್ಯಾಂಗಗಳನ್ನು ತೊಳೆಯಬೇಕು. ಅನಂತರ ವುಝು ಮಾಡಬೇಕು. ಆಮೇಲೆ ತಲೆಯ ಮೇಲೆ ನೀರು ಸುರಿದು ಶರೀರವನ್ನು ಸಂಪೂರ್ಣವಾಗಿ ತೊಳೆಯಬೇಕು. ಹೀಗೆ ಮೂರು ಸಾರಿ ಮಾಡುವುದು "ಸುನ್ನತ್" ಆಗಿದೆ. ಶರೀರದ ಯಾವುದೇ ಭಾಗ ಒದ್ದೆಯಾಗದೆ ಇರಬಾರದು. ಮರೆಯಾಗಿರುವ ಸ್ಥಳದಲ್ಲಿ ಸ್ನಾನ ಮಾಡುವುದು ಉತ್ತಮವಾಗಿದೆ. ಯಾವ ಪರಿಸ್ಥಿತಿಯಲ್ಲೂ ನಗ್ನರಾಗಿ ಸ್ನಾನಮಾಡಬಾರದು.

## ವುಝು ಮಾಡುವ ಕ್ರಮ

ನಿರ್ಮಲವಾದ ನೀರನ್ನು ಉಪಯೋಗಿಸಿ ಮಾತ್ರ ವುಝು ಮಾಡತಕ್ಕದ್ದು. ಮೊದಲು بِسْمِ اللهِ الرَّحْمٰنِ الرَّحِيْمِ (ಬಿಸ್ಮಿಲ್ಲಾಹಿರ್ರಹ್ಮಾನಿರ್ರಹೀಮ್) ಎಂದು ಹೇಳಿ ಅಂಗೈಗಳನ್ನು ಮಣಿಗಂಟಿನ ತನಕ ಮೂರು ಸಾರಿ ತೊಳೆಯಬೇಕು. ಅನಂತರ ಮೂರು ಸಾರಿ ಬಾಯಿ ಮುಕ್ಕುಳಿಸಬೇಕು. ಮತ್ತು ಮೂಗಿನ ದ್ವಾರಗಳನ್ನು ತೊಳೆಯಬೇಕು. ಅನಂತರ ಮೂರು ಸಾರಿ ಮುಖವನ್ನು ತೊಳೆಯಬೇಕು. ಅನಂತರ ಬಲಗೈಯನ್ನೂ ಎಡಗೈಯನ್ನೂ ಒಂದರ ನಂತರ ಇನ್ನೊಂದರಂತೆ ಮೊಣಕೈಗಂಟಿನ ತನಕ ಮೂರು ಸಾರಿ ತೊಳೆಯಬೇಕು. ಅನಂತರ ತಲೆಯನ್ನೂ ಕಿವಿಯನ್ನೂ ಒಂದು ಸಾರಿ ಸವರಬೇಕು. ತಲೆ ಸವರುವಾಗ ಎರಡು ಅಂಗೈಗಳನ್ನು ತಲೆಯ ಮುಂದಿನ ಭಾಗದಿಂದ ತಲೆಯ ಹಿಂದೆ ಕತ್ತಿನ ತನಕ ಸವರುತ್ತಾ ಹೋಗಿ ಪುನಃ ಅಂಗೈಗಳನ್ನು ತಲೆಯ ಮುಂಭಾಗಕ್ಕೆ ತರಬೇಕು. ಅನಂತರ ಹೆಬ್ಬೆರಳು ಮತ್ತು ತೋರು ಬೆರಳಿನಿಂದ ಎರಡು ಕಿವಿಗಳನ್ನೂ ಸವರಬೇಕು. ಅನಂತರ ಬಲಗಾಲನ್ನು ಪಾದದ ಗಂಟಿನ ತನಕ ಮೂರು ಸಾರಿ ತೊಳೆಯಬೇಕು. ಆಮೇಲೆ ಎಡಗಾಲನ್ನು ಮೂರು ಸಾರಿ ತೊಳೆಯಬೇಕು. ಇವನ್ನೆಲ್ಲ ಯಥಾಕ್ರಮದಲ್ಲಿ ಮಾಡಬೇಕಾಗಿದೆ.

ಕಾಲು ಚೀಲವನ್ನು ವುಝುವಿನ ನಂತರ ಧರಿಸಿದ್ದರೆ ಪುನಃ ವುಝು ಮಾಡುವಾಗ ಕಾಲುಚೀಲದ ಮೇಲೆ ಒದ್ದೆಯಾದ ಕೈಯಿಂದ ಕಾಲಿನ ಬೆರಳುಗಳ ಕಡೆಯಿಂದ ಪಾದದ ಗಂಟಿನ ತನಕ ಮೇಲ್ಮುಖವಾಗಿ ಸವರಬೇಕು. ವುಝು ಮಾಡಿದ ನಂತರ 24 ಗಂಟೆಗಳ ತನಕ ಹೀಗೆ ಮಾಡಬಹುದಾಗಿದೆ. ಯಾತ್ರಿಕರಿಗೆ ಇದು ಮೂರು ದಿವಸಗಳ ತನಕ ಅನುಮತಿಸಲಾಗಿದೆ. ಅನಂತರ ವುಝು ಮಾಡುವಾಗ ಕಾಲುಚೀಲ ತೆಗೆದು ಕಾಲು ತೊಳೆದು ವುಝು ಮಾಡಬೇಕಾಗಿದೆ. ಮೂರು ಬೆರಳುಗಳು ಕಾಣುವ ಹಾಗೆ ಕಾಲುಚೀಲ ಹರಿದಿದ್ದರೆ ಆ ಕಾಲುಚೀಲ ತೆಗೆದು ಕಾಲನ್ನು ತೊಳೆಯಬೇಕು. ಯಾವುದಾದರೂ ಒಂದು ಅಂಗವನ್ನು ತೊಳೆದರೆ ಅದು ತೊಂದರೆಗೆ ಕಾರಣವಾಗುವುದಾದರೆ ಅಂತಹ ಅಂಗವನ್ನು ಒದ್ದೆಗೈಯಿಂದ ಸವರಿದರೆ ಸಾಕು.

## ವುಝುವಿನ ಪ್ರಾರ್ಥನೆ

ವುಝು ಮಾಡಿದ ನಂತರ ಕಲಿಮಯೆ ಶಹಾದತ್ ಓದಿ ದುಆ ಮಾಡುವುದು ಸುನ್ನತ್ ಆಗಿದೆ. ಅದು ಹೀಗೆ:

أَشْهَدُ أَنْ لَّا إِلٰهَ إِلَّا اللهُ وَحْدَهُ لَا شَرِيْكَ لَهُ
وَأَشْهَدُ أَنَّ مُحَمَّدًا عَبْدُهُ وَرَسُوْلُهُ.
اَللّٰهُمَّ اجْعَلْنِيْ مِنَ التَّوَّابِيْنَ وَاجْعَلْنِيْ مِنَ الْمُتَطَهِّرِيْنَ

ಅಶ್‌ಹದು ಅಲ್ಲಾ ಇಲಾಹ ಇಲ್ಲಲ್ಲಾಹು ವಹ್‌ದಹೂ ಲಾ ಶರೀಕ ಲಹೂ
ವ ಅಶ್‌ಹದು ಅನ್ನ ಮುಹಮ್ಮದನ್ ಅಬ್ದುಹೂ ವ ರಸೂಲುಹೂ
ಅಲ್ಲಾಹುಮ್ಮಜ್‌ಅಲ್‌ನೀ ಮಿನತ್ತವ್ವಾಬೀನ
ವಜ್‌ಅಲ್‌ನೀ ಮಿನಲ್ ಮುತತಹ್ಹಿರೀನ್

**ಅರ್ಥ:** ಅಲ್ಲಾಹನ ಹೊರತು ಬೇರೆ ಯಾರೂ ಆರಾಧನೆಗೆ ಅರ್ಹರಲ್ಲ ಎಂದು ನಾನು ಸಾಕ್ಷ್ಯ ಹೇಳುತ್ತೇನೆ. ಅವನು ಒಬ್ಬನೇ ಆಗಿರುವವನು. ಅವನಿಗೆ ಸರಿಸಾಟಿಯಾಗಿ ಯಾರೂ ಇಲ್ಲ. ಮುಹಮ್ಮದ್ ಅವನ ದಾಸರೂ ದೂತರೂ ಆಗಿರುವರೆಂದು ಸಹ ನಾನು ಸಾಕ್ಷ್ಯ ಹೇಳುತ್ತೇನೆ. ಓ ಅಲ್ಲಾಹ್, ನೀನು ನನ್ನನ್ನು ಪಶ್ಚಾತ್ತಾಪಗೊಂಡು ನಿನ್ನ ಕಡೆಗೆ ತಿರುಗುವವರೊಂದಿಗೆ ಸೇರಿಸು; ನೀನು ನನ್ನನ್ನು ಪರಿಶುದ್ಧರೊಂದಿಗೆ ಸೇರಿಸು.

ವುಝು ಲೋಪವಾದರೆ ಪುನಃ ವುಝು ಮಾಡಬೇಕಾಗುತ್ತದೆ.

## ವುಝು ಲೋಪವಾಗುವ ಸಂಗತಿಗಳು

1. ಮೂತ್ರ ವಿಸರ್ಜನೆ
2. ಮಲ ವಿಸರ್ಜನೆ
3. ಮಲ, ಮೂತ್ರ, ವಿಸರ್ಜನಾಂಗಗಳಿಂದ ಗಾಳಿ ಅಥವಾ ಬೇರೆ ಯಾವುದಾದರೂ ವಸ್ತು ಹೊರಕ್ಕೆ ಬರುವುದು.
4. ಒರಗಿ ಅಥವಾ ಮಲಗಿ ನಿದ್ರಿಸುವುದು.
5. ಪ್ರಜ್ಞೆ ತಪ್ಪುವುದು.
6. ಯಾವುದಾದರೂ ಅಂಗದಿಂದ ರಕ್ತ ಅಥವಾ ಕೀವು ಹೊರ ಹರಿಯುವುದು.

## ತಯಮ್ಮುಮ್

ವುಝು ಮಾಡಲು ನೀರು ಸಿಗದಿದ್ದರೆ ಅಥವಾ ನೀರು ಉಪಯೋಗಿಸಿದರೆ ರೋಗ ಬಾಧೆ ಉಂಟಾಗುವುದೆಂದೋ ರೋಗ ವರ್ಧನೆ ಉಂಟಾಗಬಹುದೆಂದೋ ಭಯವಿದ್ದರೆ ವುಝುವಿಗೆ ಬದಲಾಗಿ ತಯಮ್ಮುಮ್ ಮಾಡಬೇಕು.

## ತಯಮ್ಮುಮ್ ಮಾಡುವ ಕ್ರಮ

ಶುದ್ಧವಾಗಿರುವ ಮಣ್ಣಿನಲ್ಲಿಯೋ ಮಣ್ಣಿರುವ ವಸ್ತುವಿನಲ್ಲಿಯೋ ಜಾಗದಲ್ಲಿಯೋ ಎರಡು ಅಂಗೈಗಳನ್ನು ಹೊಡೆದು ಮುಖವನ್ನು ಸವರಬೇಕು. ಪುನಃ ಎರಡು ಅಂಗೈಗಳನ್ನು ಮಣ್ಣಿಗೆ ಹೊಡೆದು ಎರಡು ಕೈಗಳನ್ನು ಮೊಣಗೈ ಗಂಟಿನವರೆಗೆ ಸವರಬೇಕು. ಎರಡು ಅಂಗೈಗಳನ್ನು ಒಮ್ಮೆ ಮಾತ್ರ ಮಣ್ಣಿಗೆ ಹೊಡೆದು ಮುಖ ಮತ್ತು ಕೈಗಳನ್ನು ಸವರಿದರೂ ಸಾಕಾಗುತ್ತದೆ.

ತಯಮ್ಮುಮ್ ವುಝುವಿಗೆ ಬದಲಾಗಿ ಮಾಡಲಾಗುತ್ತದೆ. ನೀರು ದೊರೆತ ಕೂಡಲೇ ತಯಮ್ಮುಮ್ ಲೋಪವಾಗುವುದು. ವುಝು ಯಾವುದೆಲ್ಲಾ ಕಾರಣಗಳಿಂದ ಲೋಪವಾಗುವುದೋ ಅವೆಲ್ಲಾ ಕಾರಣಗಳಿಂದ ತಯಮ್ಮುಮ್ ಸಹ ಲೋಪವಾಗುವುದು.

ಮಣ್ಣಿಗೆ ಬದಲಾಗಿ ಮರಳು, ಸುಣ್ಣ ಮೊದಲಾದವುದಗಳಿಂದಲೂ ತಯಮ್ಮುಮ್ ಮಾಡಬಹುದಾಗಿದೆ.

## ಬಟ್ಟೆಯ ಶುದ್ಧೀಕರಣ

ವಸ್ತ್ರದಲ್ಲಿ ಮೂತ್ರದ ಚಿಕ್ಕ ತುಂತುರು ಕೂಡ ತಗಲಬಾರದು. ಬೇರೆ ಮಲಿನ ವಸ್ತುಗಳೂ ಬಟ್ಟೆಗಳಿಗೆ ತಗಲಬಾರದು. ಕೊಳಕೇನಾದರೂ ಬಟ್ಟೆಗೆ ತಗಲಿದರೆ ಅದನ್ನು ನೀರಿನಿಂದ ತೊಳೆದು ಶುದ್ಧೀಕರಿಸಬೇಕು. ಬಟ್ಟೆಗಳನ್ನು ತೊಳೆದು ಶುದ್ಧೀಕರಿಸಲು ಸಾಧ್ಯವಾಗದಿದ್ದರೆ ಆ ಅಶುದ್ಧ ವಸ್ತ್ರ ಧರಿಸಿಯೇ ನಮಾಝ್ ಮಾಡಬಹುದು. ಧರಿಸಲು ವಸ್ತ್ರವೇ ಇಲ್ಲದಿದ್ದರೆ ಕುಳಿತುಕೊಂಡು ನಮಾಝ್ ಮಾಡಬೇಕು. ಆಗ ರುಕೂ ಮತ್ತು ಸುಜೂದ್ ಬರೇ ಸಂಜ್ಞೆಗಳಿಂದ ಮಾಡಬೇಕು.

## ನಮಾಝಿನ ಸ್ಥಳದ ಶುದ್ಧೀಕರಣ

ನಮಾಝ್ ಮಾಡುವ ಸ್ಥಳ ಸಹ ಸ್ವಚ್ಛವಾಗಿರಬೇಕು. ನೆಲವು ಕೊಳಕಾದ ನಂತರ ಅದು ಬಿಸಿಲಿನಿಂದ ಒಣಗಿ ಅಲ್ಲಿ ಕೊಳಕಿನ ಅಂಶವೇನಾದರೂ ಉಳಿಯದೆ ಹೋದರೆ ಅಂತಹ ಸ್ಥಳದಲ್ಲಿ ನಮಾಝ್ ಮಾಡಬಹುದಾಗಿದೆ. ಆದರೆ ಸ್ನಾನದ ಕೋಣೆ, ಸ್ಮಶಾನ, ಸೆಗಣಿ ಇರುವ ಸ್ಥಳ, ಮೃಗಶಾಲೆ, ಕಸಾಯಿಖಾನೆ, ದಾರಿಯ ಮಧ್ಯೆ ಮತ್ತು ಕಅ್‌ಬದ ಮೇಲ್ಭಾಗದಲ್ಲಿ ನಮಾಝ್ ಮಾಡಬಾರದು.

## ಖಿಬ್ಲ

ನಮಾಝ್ ಮಾಡುವಾಗ ಖಿಬ್ಲ (ಕಅ್‌ಬ)ವನ್ನು ಅಭಿಮುಖೀಕರಿಸಬೇಕು. ಆದರೆ ಶತ್ರುಗಳ ಭಯವಿರುವಾಗ ಅಥವಾ ಬೇರೆ ಯಾವುದಾದರೂ ವಿಪತ್ತಿನ ಭಯವಿರುವಾಗ ಸೌಕರ್ಯ ಪ್ರಕಾರ ಯಾವ ಭಾಗಕ್ಕೆ ತಿರುಗಿ ಬೇಕಾದರೂ ನಮಾಝ್ ಮಾಡಬಹುದಾಗಿದೆ. ಪ್ರಯಾಣದಲ್ಲಿರುವಾಗ ಅಥವಾ ರಾತ್ರಿ ಕತ್ತಲೆ ಕವಿದು ದಿಕ್ಕು ತೋರದಿರುವಾಗ ಮನಸ್ಸು ಯಾವ ಭಾಗದಲ್ಲಿ ಖಿಬ್ಲ ಇದೆಯೆಂದು

ಸೂಚಿಸುತ್ತದೆಯೋ ಆ ಭಾಗಕ್ಕೆ ತಿರುಗಿ ನಮಾಝ್ ಮಾಡಲು ಅನುಮತಿ ಇದೆ. ನಮಾಝ್ ಮಾಡಿದ ನಂತರ ತಾನು ಅಭಿಮುಖೀಕರಿಸಿದುದು ಖಿಬ್ಲವನ್ನಲ್ಲ ಎಂದು ತಿಳಿದು ಬಂದರೆ ಕೂಡ ನಮಾಝ್ ಪುನರಾವರ್ತಿಸುವ ಅಗತ್ಯವಿಲ್ಲ. ಆದರೆ ನಮಾಝ್ ಮಾಡುವ ಮಧ್ಯದಲ್ಲಿ ಸರಿಯಾದ ಖಿಬ್ಲ ಯಾವುದೆಂದು ತಿಳಿದರೆ ನಮಾಝ್ ಮಾಡುತ್ತಾ ಇರುವಾಗಲೇ ಸರಿಯಾದ ಖಿಬ್ಲದ ಕಡೆಗೆ ತಿರುಗಿ ನಮಾಝ್ ಮುಂದುವರಿಸಬೇಕು.

## ನಗ್ನತೆ ಮರೆಮಾಡುವುದು

ನಮಾಝ್ ಮಾಡುವಾಗ ಪುರುಷನು ತನ್ನ ಶರೀರದ ಹೊಕ್ಕುಳಿನಿಂದ ಮೊಣಕಾಲಿನ ತನಕದ ಭಾಗವನ್ನು ಬಟ್ಟೆಯಿಂದ ಮರೆಮಾಡುವುದು ಕಡ್ಡಾಯವಾಗಿದೆ. ಹೆಗಲುಗಳನ್ನು ಮರೆಮಾಡದಿರುವುದು ಮಕ್‌ರೂಹ್ (ಅತೃಪ್ತಿಕರ) ಆಗಿದೆ. ಸ್ತ್ರೀಯರು ಮುಖ, ಅಂಗೈ ಮತ್ತು ಪಾದ ಇವುಗಳನ್ನು ಹೊರತುಪಡಿಸಿ ಉಳಿದ ಎಲ್ಲ ಭಾಗಗಳನ್ನು ಮರೆಮಡಬೇಕು. ಮರೆಮಾಡಬೇಕಾದ ಭಾಗಗಳ ನಾಲ್ಕನೆಯ ಒಂದಂಶದಷ್ಟು ನಗ್ನವಾದರೆ ಅಂತಹ ನಮಾಝ್ ಸರಿಯಾಗಲಾರದು.

## ನಿಯ್ಯತ್ (ಸಂಕಲ್ಪ)

ನಮಾಝ್ ಮಾಡುವ ಮೊದಲು ಮನಸ್ಸಿನಲ್ಲಿ ಅದನ್ನು ಮಾಡುವ ನಿರ್ಧಾರ ಮಾಡಿಕೊಳ್ಳುವುದು ಅತ್ಯಾವಶ್ಯಕವಾಗಿದೆ. ಯಾವ ನಮಾಝ್ ಮಾಡುವುದೆಂದು ಫರ್ಝ್ (ಕಡ್ಡಾಯ ನಮಾಝ್) ಅಥವಾ ಸುನ್ನತ್ (ಪೈಗಂಬರರ ಅನುಕರಣೆಯ ನಮಾಝ್) ಅಥವಾ ನಫ್ಲ್ (ಐಚ್ಛಿಕ ನಮಾಝ್) ಎಂಬುದನ್ನು – ನಮಾಝ್ ಮಾಡುವ ಮೊದಲು ಮನಸ್ಸಿನಲ್ಲಿ ನಿರ್ಧರಿಸಬೇಕು. ★

(19ನೇ ಪುಟದಿಂದ)

ಹೊರಬಂದರು ಎಂದು ನಂಬುವುದಾದರೆ ಯೇಸು ಕ್ರಿಸ್ತರು ಶತ್ರುಗಳನ್ನು ಜಯಿಸಿದರೆಂದೂ ಅವರ ಕೆಟ್ಟ ಕಾರ್ಯಯೋಜನೆಗಳನ್ನು ನಿರರ್ಥಕಗೊಳಿಸಿದರೆಂದೂ ಹೇಳಬಹುದು. ಯೇಸು ಕ್ರಿಸ್ತರು ಹೀಗೆ ಹೇಳಿದ್ದರು:

**"ಯೋನನು ನಿನೆವ ಪಟ್ಟಣದವರಿಗೆ ಗುರುತಾದ ಹಾಗೆಯೇ ಮನುಷ್ಯಕುಮಾರನು ಈ ಸಂತತಿಗೆ ಗುರುತಾಗಿರುವನು." (ಲೂಕ 11:30)**

ಯೋನ ಪ್ರವಾದಿ ತಿಮಿಂಗಿಲದ ಹೊಟ್ಟೆಯಿಂದ ರಕ್ಷಿಸಲ್ಪಟ್ಟ ಹಾಗೆಯೇ ತಾನು ಸಹ ದೇವನಿಂದ ರಕ್ಷಿಸಲ್ಪಡುವೆನು ಎಂದು ಯೇಸು ಕ್ರಿಸ್ತರು ಯಹೂದಿಯರಿಗೆ ಹೇಳಿದ್ದರು. ಯೇಸುಕ್ರಿಸ್ತರು ಭೂಮಿಯ ಗರ್ಭ(ಸಮಾಧಿ)ವನ್ನು ಸಜೀವವಾಗಿ ಪ್ರವೇಶಿಸಿ ಸಜೀವವಾಗಿ ಹೊರಗೆ ಬಂದರೆ ಮಾತ್ರ ಅವರಿಗೆ ಮತ್ತು ಯೋನ ಪ್ರವಾದಿಗೆ ಹೋಲಿಕೆ ಅನ್ವಯಿಸುವುದು.

### 10. ಯೇಸು ಕ್ರಿಸ್ತರ ಪ್ರಾರ್ಥನೆ ಅಂಗೀಕರಿಸಲ್ಪಟ್ಟಿತು.

ದೇವನು ತನ್ನ ಪ್ರೀತಿಗೆ ಪಾತ್ರರಾದವರ ಪ್ರಾರ್ಥನೆಗಳನ್ನು ಆಲಿಸುತ್ತಾನೆಂದೂ ಅವರನ್ನು ಕಷ್ಟಗಳಿಂದಲೂ ಪರೀಕ್ಷೆಗಳಿಂದಲೂ ರಕ್ಷಿಸುತ್ತಾನೆಂದು ಬೈಬಲಿನಿಂದ ತಿಳಿಯುತ್ತದೆ. ಈ ಕೆಳಗಿನ ಉಲ್ಲೇಖಗಳನ್ನು ನೋಡಿರಿ:

**"..... ನೀತಿವಂತನ ಅತ್ಯಾಸಕ್ತಿಯುಳ್ಳ ವಿಜ್ಞಾಪನೆಯು ಬಹು ಬಲವಾಗಿದೆ. ಎಲೀಯನು ನಮ್ಮಂಥ ಸ್ವಭಾವವುಳ್ಳವನಾಗಿದ್ದನು; ಅವನು ಮಳೆ ಬರಬಾರದೆಂದು ಬಹಳವಾಗಿ ಪ್ರಾರ್ಥಿಸಲು ಮೂರು ವರ್ಷ ಆರು ತಿಂಗಳ ವರೆಗೂ ಮಳೆ ಬೀಳಲಿಲ್ಲ. ತಿರಿಗಿ ಆತನು ಪ್ರಾರ್ಥನೆ ಮಾಡಲು ಆಕಾಶವು ಮಳೆಗರೆಯಿತು, ಭೂಮಿಯು ಬೆಳೆಯಿತು." (ಯಾಕೋಬನು 5:16-18)**

**"...... ಯೇಸು ಕಣ್ಣೆತ್ತಿ ಮೇಲಕ್ಕೆ ನೋಡಿ – ತಂದೆಯೇ ನೀನು ನನ್ನ ಪ್ರಾರ್ಥನೆಯನ್ನು ಕೇಳಿದ್ದಕ್ಕೆ ನಿನ್ನನ್ನು ಕೊಂಡಾಡುತ್ತೇನೆ; ನೀನು ಯಾವಾಗಲೂ ನನ್ನ ಪ್ರಾರ್ಥನೆಯನ್ನು ಕೇಳುವವನಾಗಿದ್ದೀ ಎಂದು ನನಗೆ ಗೊತ್ತೇ ಇದೆ; ಆದರೂ ನೀನೇ ನನ್ನನ್ನು ಕಳುಹಿಸಿಕೊಟ್ಟೆ ಎಂದು ಸುತ್ತಲು ನಿಂತಿರುವ ಜನರು ನಂಬುವಂತೆ ಅವರಿಗೋಸ್ಕರ ಈ ಮಾತುಗಳನ್ನಾಡಿದೆನೆಂದು ಹೇಳಿದನು." (ಯೋಹಾನ 11:41,42)**

**"ಅಪ್ಪಾ, ತಂದೆಯೇ, ನಿನಗೆ ಎಲ್ಲವೂ ಸಾಧ್ಯ; ಈ ಪಾತ್ರೆಯನ್ನು ನಿನ್ನಿಂದ ತೊಲಗಿಸು; ಆದರೂ ನನ್ನ ಚಿತ್ತದಂತಾಗದೆ ನಿನ್ನ ಚಿತ್ತದಂತೆಯೇ ಆಗಲಿ ಎಂದನು." (ಮಾರ್ಕ 14:36)**

ಯೇಸು ಕ್ರಿಸ್ತರು ಶಿಲುಬೆಗೇರಿಸಲ್ಪಡುವ ಬಗ್ಗೆ ಬಹಳ ಭಯಪಟ್ಟಿದ್ದರೆಂದು ಮೇಲಿನ ಉಲ್ಲೇಖಗಳಿಂದ ತಿಳಿಯುತ್ತದೆ. ತನ್ನನ್ನು ಶಿಲುಬೆಯಲ್ಲಿ ಮೃತನಾಗುವುದರಿಂದ ರಕ್ಷಿಸಬೇಕೆಂದು ಅವರು ಬಹಳ ದೈನ್ಯಾವಸ್ಥೆಯಲ್ಲಿ ದೇವನನ್ನು ಬೇಡಿಕೊಂಡರು. ಅವರು ಜಯಶಾಲಿಯಾದುದು ಹೇಗೆ? ಅವರು ಶಿಲುಬೆಯಲ್ಲಿ ಮೃತಪಟ್ಟಿದ್ದರೆ ಅವರ ಜೀವಿತವು ನಿರರ್ಥಕವಾಗುತ್ತಿತ್ತು ಮತ್ತು ಶತ್ರುಗಳು ಅವರನ್ನು ಸುಳ್ಳು ಪ್ರವಾದಿ ಎಂದು ಹೇಳುತ್ತಿದ್ದರು. ಶಿಲುಬೆಯಲ್ಲಿ ಮೃತಪಡುವ ಯೋಚನೆ ಅವರಿಗೆ ಅಸ್ವೀಕಾರಾರ್ಹವಾಗಿತ್ತು. ಅವರು ಸಾತ್ವಿಕನಾದ ಕಾರಣ ಅವರಿಗೆ ಮರಣದ ಭೀತಿ ಇರಲಿಲ್ಲ. ಆದರೆ ಶಿಲುಬೆಯಲ್ಲಿ ಮೃತನಾಗಿ ಶಾಪಕ್ಕೆ ಗುರಿಯಾದ ಮರಣಕ್ಕೆ ತುತ್ತಾದವನೆಂದು ಕರೆಯಲ್ಪಡಲು ಅವರಿಗೆ ಇಷ್ಟವಿರಲಿಲ್ಲ ಮತ್ತು ಆ ಬಗ್ಗೆ ಹೆದರಿದ್ದರು. ಅವರು ಶಿಲುಬೆಯಲ್ಲಿ ಮೃತನಾಗುವುದು ಅವರ ಪ್ರವಾದಿತ್ವದ ನಿರಾಕರಣೆಗೆ ಸಮವಾಗುತ್ತಿತ್ತು.

ಹೊಸ ಒಡಂಬಡಿಕೆಯ ಈ ಉಲ್ಲೇಖ ನೋಡಿರಿ: "

**"ಕ್ರಿಸ್ತನು ತಾನು ಭೂಲೋಕದಲ್ಲಿದ್ದಾಗ ಮರಣಕ್ಕೆ ತಪ್ಪಿಸಿ ಕಾಪಾಡಶಕ್ತನಾಗಿರುವಾತನಿಗೆ ಬಲವಾಗಿ ಕೂಗುತ್ತಾ ಕಣ್ಣೀರನ್ನು ಸುರಿಸುತ್ತಾ ಪ್ರಾರ್ಥನೆ ವಿಜ್ಞಾಪನೆಗಳನ್ನು ಸಮರ್ಪಿಸಿ ದೇವರ ಮೇಲಣ ಭಯಭಕ್ತಿಯ ನಿಮಿತ್ತ ಕೇಳಲ್ಪಟ್ಟನು." (ಇಬ್ರಿಯರಿಗೆ 5:7)**

ಯೇಸು ಕ್ರಿಸ್ತರ ಪ್ರಾರ್ಥನೆಯು ನಿಸ್ಸಂಶಯವಾಗಿಯೂ ದೇವನಿಂದ ಅಂಗೀಕರಿಸಲ್ಪಟ್ಟಿತು. ಅವರು ಶಿಲುಬೆಯಲ್ಲಿ ಮೃತರಾಗದೆ ರಕ್ಷಿಸಲ್ಪಟ್ಟರು. ಅವರು ಕಾಣದೆ ಹೋದ ಕುರಿಗಳಿಗೆ ಸಂದೇಶ ತಲಪಿಸಲು ಪೂರ್ವದೇಶಗಳಿಗೆ ಯಾತ್ರೆ ಮಾಡಿ ದೀರ್ಘಕಾಲ ಜೀವಿಸಿದರು. ಈ ಉಲ್ಲೇಖ ನೋಡಿರಿ:

**"ನಾನು ದೇವರ ರಾಜ್ಯದ ಸುವಾರ್ತೆಯನ್ನು ಬೇರೆ ಊರುಗಳಿಗೂ ಸಾರಿ ಹೇಳಬೇಕಾಗಿದೆ; ಇದಕ್ಕಾಗಿಯೇ ನಾನು ಕಳುಹಿಸಲ್ಪಟ್ಟಿದ್ದೇನೆ ಎಂದು ಹೇಳಿದನು." (ಲೂಕ 4:43)**

ಪ್ರಿಯರೇ, ಯೇಸು ಕ್ರಿಸ್ತರು ಶಿಲುಬೆಯಲ್ಲಿ ಮೃತರಾಗಲಿಲ್ಲ ಎಂದು ಬೈಬಲಿನ ಸಾಕ್ಷ್ಯಾಧಾರಗಳಿಂದಲೂ ಸಾಬೀತಾಗುತ್ತದೆ. ಆದುದರಿಂದ ಇಂದಿನ ಕ್ರೈಸ್ತ ಧರ್ಮ ತಪ್ಪು ನಂಬಿಕೆಯ ಮೇಲೆ ಸ್ಥಾಪಿಸಲ್ಪಟ್ಟಿದೆ ಎಂಬುದು ಸ್ಪಷ್ಟವಾಗಿದೆ. ★

# 117ನೇ ಅಹ್ಮದಿಯಾ ವಾರ್ಷಿಕ ಸಮ್ಮೇಳನ

ಖಾದಿಯಾನ್: ಮೇ 25, 26, 27 ದಿನಾಂಕಗಳಲ್ಲಿ ಭಾರತದ ಅಹ್ಮದಿಯಾ ಕೇಂದ್ರವಾದ
ಖಾದಿಯಾನ್‌ನಲ್ಲಿ ತ್ರಿದಿನ ರಾಷ್ಟ್ರೀಯ ಸಮ್ಮೇಳನ ಜರಗಿತು.

ಅಹ್ಮದಿಯಾ ಮುಸ್ಲಿಂ ಜಮಾಅತಿನ ಭಾರತದ ಪ್ರಧಾನ ಕಾರ್ಯದರ್ಶಿ ಮೌಲಾನ ಮುಹಮ್ಮದ್
ಇನಾಂ ಘೋರಿ ಸಾಹೇಬ್ ಧ್ವಜಾರೋಹಣ ಮಾಡುವುದರೊಂದಿಗೆ ಸಮ್ಮೇಳನ ಆರಂಭವಾಯಿತು.
ಸಮ್ಮೇಳನದ ಯಶಸ್ಸಿಗೆ ಕಾರ್ಯಕರ್ತರು ಸಮರ್ಪಣಾ ಭಾವದಿಂದ ರಂಗಕ್ಕಿಳಿಯಬೇಕೆಂದೂ ಈ
ಆಧ್ಯಾತ್ಮಿಕ ಸತ್ಕಾರದಿಂದ ಪ್ರಯೋಜನ ಪಡೆಯಬೇಕೆಂದೂ ಅವರು ವಿನಂತಿಸಿದರು.

ಸದರ್ ಅಂಜುಮನ್ ಅಹ್ಮದಿಯಾ ಅಧ್ಯಕ್ಷ ಡಾ। ಸಾಲಿಹ್ ಮುಹಮ್ಮದ್ ಅಲಾದಿನ್ ಸಾಹೇಬ್,
"ದೇವೇಕತ್ವ ಮತ್ತು ಖಿಲಾಫತ್" ಎಂಬ ವಿಷಯದಲ್ಲಿ ಭಾಷಣ ಮಾಡುತ್ತಾ, ದೇವನ ಏಕತ್ವವನ್ನು
ಪ್ರಚಾರಗೊಳಿಸಲು ಮತ್ತು ಆಧ್ಯಾತ್ಮಿಕ ಅನುಗ್ರಹವನ್ನು ಗಳಿಸಲು ಅಹ್ಮದಿಯಾ ಜಮಾಅತ್ ಕೈಗೊಂಡ
ಅನೇಕ ಯೋಜನೆಗಳ ಕುರಿತು ವಿಶದೀಕರಿಸಿದರು.

"ಮುಹಮ್ಮದ್ ಪೈಗಂಬರರ[ಸ] ಜೀವನ ಮತ್ತು ಚಟುವಟಿಕೆಗಳು" ಎಂಬ ವಿಷಯದ ಬಗ್ಗೆ ಇಸ್ಲಾಹೋ
ಇರ್ಶಾದ್ ಕಾರ್ಯದರ್ಶಿ ಮೌಲಾನ ಮುಹಮ್ಮದ್ ಉಮರ್ ಸಾಹೇಬ್ ಮಾತನಾಡಿದರು. ಇಸ್ಲಾಂ
ಧರ್ಮ ಮನುಷ್ಯನ ಸಮತ್ವ ಮತ್ತು ಅವನ ಸ್ಥಾನಮಾನಗಳಿಗೆ ಗೌರವ ನೀಡುತ್ತದೆ. ಯಾವುದೇ
ರೀತಿಯ ತಾರತಮ್ಯ ತೋರಿಸದೆ ಜನರಿಗೆ ಸಮಾನ ಅವಕಾಶ ನೀಡಬೇಕೆಂಬ ಪೈಗಂಬರರ[ಸ]
ಅಧ್ಯಾಪನೆಗಳ ಬಗ್ಗೆ ಅವರು ವಿವರಿಸಿದರು. ಸ್ತ್ರೀಯರ ಸ್ಥಾನಮಾನಗಳನ್ನು ಎತ್ತರಿಸಲು ಪೈಗಂಬರರು[ಸ]
ಕೈಗೊಂಡ ಕ್ರಮಗಳನ್ನು ಅವರು ವಿಶದಪಡಿಸಿದರು. ವಿಜಯಿಯಾಗಿ ಮಕ್ಕ ನಗರಕ್ಕೆ ಮರಳಿ ಬಂದ
ಪೈಗಂಬರರು[ಸ] ತನ್ನ ವಿರೋಧಿಗಳಿಗೆ ಕ್ಷಮಾದಾನ ಮಾಡಿದ ಘಟನೆ ಅನುಕರಣೀಯ ಮಾದರಿಯೆಂದು
ಅವರು ಹೇಳಿದರು.

ಪ್ರಥಮ ದಿನದ ಎರಡನೇ ಅಧಿವೇಶನದಲ್ಲಿ ಅಹ್ಮದಿಯಾ ವಿಶ್ವಾಸಗಳನ್ನು ಪರಿಚಯಪಡಿಸುತ್ತಾ
ಮೌಲಾನ ಹಮೀದ್ ಕೌಸರ್ ಸಾಹೇಬ್ ಭಾಷಣವಿತ್ತರು. "ಲೋಕದ ಸಮಸ್ಯೆಗಳಿಗೆ ಇಸ್ಲಾಮಿನ
ಪರಿಹಾರ" ಎಂಬ ವಿಷಯದಲ್ಲಿ ಮೌಲಾನ ಕರೀಮುದ್ದೀನ್ ಶಾಹಿದ್ ಸಾಹೇಬ್ ಮಾತನಾಡಿದರು.

ಎರಡನೇ ದಿನದ ಸಮ್ಮೇಳನದಲ್ಲಿ ಜಂಇಯ್ಯತುಲ್ ಮುಬಶ್ಶಿರೀನ್ ಪ್ರಿನ್ಸಿಪಾಲ್ ಸುಲ್ತಾನ್
ಅಹ್ಮದ್ ಝಫರ್ ಸಾಹೇಬ್ ಖಲೀಫತುಲ್ ಮಸೀಹ್ ಹಝ್ರತ್ ಮಿರ್ಝಾ ಮಸ್ರೂರ್ ಅಹ್ಮದ್
ಅವರ ನಾಯಕತ್ವದಲ್ಲಿ ಅಹ್ಮದಿಯಾ ಮುಸ್ಲಿಂ ಜಮಾಅತ್ ಗಳಿಸಿದ ಯಶಸ್ಸನ್ನು ವಿವರಿಸಿದರು.
ಮೌಲಾನ ಇನಾಂ ಘೋರಿ ಸಾಹೇಬ್ ವಾಗ್ದತ್ತ ಮಸೀಹರ ಧರ್ಮ ಸೇವೆ ಬಗ್ಗೆ ಮಾತನಾಡಿದರು.

ಮೂರನೇ ದಿನ ಹಝ್ರತ್ ಖಲೀಫತುಲ್ ಮಸೀಹ್ ಅವರು ಎಂ.ಟಿ.ಎ. ಮೂಲಕ ಮಾಡಿದ
ಸಮಾರೋಪ ಭಾಷಣದೊಂದಿಗೆ ಜಲಸಾ ಸಾಲಾನ ಮುಕ್ತಾಯವಾಯಿತು. ಕಾರ್ಯಕ್ರಮಗಳೆಲ್ಲ
"ಮುಸ್ಲಿಂ ಟೆಲಿವಿಷನ್ ಅಹ್ಮದಿಯಾ" (MTA) ಮೂಲಕ ನೇರ ಪ್ರಸಾರವಾಯಿತು.

# ಅಹ್ಮದಿಯಾ ಜಮಾಅತಿನ ಅಭಿವೃದ್ಧಿ ವಿರೋಧಿಗಳನ್ನು ಪ್ರಕೋಪಗೊಳಿಸುತ್ತದೆ



ಹಝ್ರತ್ ಮಿರ್ಝಾ ಮಸ್ರೂರ್ ಅಹ್ಮದ್
ಅಹ್ಮದಿಯಾ ಪಂಚಮ ಖಲೀಫ

ಖಾದಿಯಾನ್: ಇಂದು ದೇವಾನುಗ್ರಹದಿಂದ ಅಹ್ಮದಿಯಾ ಮುಸ್ಲಿಂ ಜಮಾಅತಿಗೆ ಅನೇಕ ಜನರು ಸೇರುತ್ತಿದ್ದಾರೆ. ಯುರೋಪ್ ಮತ್ತು ಅಮೇರಿಕದಲ್ಲಿ ಜಮಾಅತ್ ಕ್ರಮಕ್ರಮವಾಗಿ ಮುನ್ನೇರುತ್ತಿದೆಯೆಂದೂ ಆಫ್ರಿಕದಲ್ಲಿ ಜಮಾಅತಿನ ಬೆಳವಣಿಗೆ ದ್ರುತಗತಿ ಗಳಿಸಿದೆಯೆಂದೂ ಖಲೀಫ ಹಝ್ರತ್ ಮಿರ್ಝಾ ಮಸ್ರೂರ್ ಅಹ್ಮದ್ ಸಾಹೇಬ್ ಹೇಳಿದರು. ಖಾದಿಯಾನಿನ 117ನೇ ರಾಷ್ಟ್ರೀಯ ವಾರ್ಷಿಕ ಸಮ್ಮೇಳನದ ಸಮಾರೋಪ ಭಾಷಣವನ್ನು ಲಂಡನಿನಿಂದ ಉಪಗ್ರಹ ಮೂಲಕ ಅವರು ಮಾಡುತ್ತಿದ್ದರು.

ಖಾದಿಯಾನಿನ ಜಲಸಾ ಸಾಲಾನದ ಪ್ರಾಧಾನ್ಯವನ್ನು ಖಲೀಫ ವಿವರಿಸಿದರು. ವಾಗ್ದತ್ತ ಮಸೀಹರು ಆರಂಭಿಸಿದ ಈ ಸಮ್ಮೇಳನ ಅನುಗ್ರಹೀತವಾಗಿದೆ. ವಾಗ್ದತ್ತ ಮಸೀಹರ ಜನ್ಮ ನಾಡಾದ ಖಾದಿಯಾನಿನಲ್ಲಿ ವಾಸಿಸುವ ಅಹ್ಮದಿಯರಿಗೆ ದೊಡ್ಡ ಜವಾಬ್ದಾರಿಕೆಯಿದೆ ಎಂದು ಅವರು ಹೇಳಿದರು.

ಅಹ್ಮದಿಯತಿನ ವಿರೋಧಿಗಳು ಅಹ್ಮದಿಯಾ ಜಮಾಅತ್ ಬೆಳೆಯುವುದಿಲ್ಲವೆಂದು ಪ್ರಚಾರ ಮಾಡುತ್ತಾರೆ. ಇದು ಅಹ್ಮದಿಯತಿನ ಅಭೂತಪೂರ್ವವಾದ ಅಭಿವೃದ್ಧಿ ಕಂಡು ವಿರೋಧಿಗಳಿಗೆ ಉಂಟಾದ ಭೀತಿಯ ಜಲ್ಪ ಹೊರತು ಬೇರೇನೂ ಅಲ್ಲ. ಧರ್ಮಾಂಧ ಉಗ್ರವಾದಿಗಳು ಅಹ್ಮದಿಯರ ವಿರುದ್ಧವಾಗಿ ವರ್ತಿಸುವುದು ಪಾಕಿಸ್ತಾನದಲ್ಲಿ ಮಾತ್ರವಲ್ಲ, ಲೋಕದಲ್ಲಿಡೀ ಅಹ್ಮದಿಯರನ್ನು ಭೇಟೆಯಾಡಲು ಅವರು ಪ್ರಯತ್ನಿಸುತ್ತಾರೆ. ನಿರ್ಭಾಗ್ಯಕರವಾಗಿ, ಈಗ ಭಾರತದಲ್ಲಿ ಸಹ ಅಹ್ಮದಿಯರು ಕಷ್ಟ ಅನುಭವಿಸುತ್ತಿದ್ದಾರೆಂದು ಅವರು ಹೇಳಿದರು. ಈ ಪೀಡನೆಗಳೆಲ್ಲ ಅಹ್ಮದಿಯತ್ ಸತ್ಯವೆಂಬುದಕ್ಕೆ ಸಾಕ್ಷ್ಯ ಕೂಡ ಆಗಿದೆಯೆಂದೂ ಅಂತಹ ಎಲ್ಲ ದೌರ್ಜನ್ಯಗಳನ್ನು ಸಹಿಸುತ್ತಾ ಅಹ್ಮದಿಯತ್ ಜಯಗಳಿಸುವುದೆಂದೂ ಖಲೀಫರು ಹೇಳಿದರು.

ಶತ್ರುಗಳ ಪೀಡನೆಗಳು ಮತ್ತು ವಿಧ್ವಂಸಕ ಕೃತ್ಯಗಳು ಮುಂದುವರಿದುಕೊಂಡು ಹೋಗುವುದಾದರೂ ಅಹ್ಮದಿಯರು ಸ್ಥಿರಚಿತ್ತರಾಗಿ ಅದನ್ನು ಎದುರಿಸುವರೆಂದೂ ವಿರೋಧಿಗಳು ಎಂದಿಗೂ ಜಯಗಳಿಸಲಾರರೆಂದೂ ಖಲೀಫರು ಪುನಃ ನೆನಪಿಸಿದರು. ಜನರಿಗೆಲ್ಲ ಅಹ್ಮದಿಯಾ ಸಂದೇಶವನ್ನು ತಲಪಿಸಬೇಕೆಂದು ಒಂದು ವರ್ಷ ಮೊದಲು ಅಹ್ಮದಿಯರಿಂದ ಪಡೆದ ವಾಗ್ದಾನ ಬಗ್ಗೆ ಅವರು ನೆನಪು ಹುಟ್ಟಿಸಿದರು. ★

ಅಹ್ಮದಿಯರಿಗೆ ಸುತ್ತೋಲೆ

## ತಹ್‌ರೀಕ್ ಜದೀದ್ ಚಂದಾದ ಶೇಕಡ ನೂರರಷ್ಟು ವಸೂಲಾತಿ

ತಹ್‌ರೀಕ್ ಜದೀದ್ ಚಂದಾದ ವಾಗ್ದಾನಗಳು ಪ್ರತಿವರ್ಷ ನವೆಂಬರ್ ದಿನಾಂಕ ಒಂದರಿಂದ ಪ್ರಾರಂಭವಾಗಿ ಮುಂದಿನ ವರ್ಷ ಅಕ್ಟೋಬರ್ 31ರ ತನಕ ಜಾರಿಯಲ್ಲಿರುತ್ತವೆ. ಹಝ್‌ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹುರವರ ಅನುಗ್ರಹೀತ ಕಾಲಘಟ್ಟದಿಂದ ಜಮಾಅತಿನ ನಿಷ್ಠಾವಂತರು ತಮ್ಮ ತಹ್‌ರೀಕ್ ಜದೀದ್ ಚಂದಾದ ವಾಗ್ದಾನಗಳನ್ನು ರಮಝಾನ್ ಮಾಸದ ಹದಿನೈದನೇ ದಿನಾಂಕದೊಳಗೆ ಪೂರ್ಣವಾಗಿ ಈಡೇರಿಸಲು ಪ್ರಯತ್ನಿಸುತ್ತಾರೆ. ಈ ವರ್ಷ ಪವಿತ್ರ ರಮಝಾನ್ ಮಾಸವು ಆಗಸ್ಟ್ ದಿನಾಂಕ 23ರಂದು ಪ್ರಾರಂಭವಾಗಲಿದೆ. ಆದುದರಿಂದ ತಹ್‌ರೀಕ್ ಜದೀದ್ ಚಂದಾದ ಪಾವತಿಗೆ ಕೇವಲ ಅಂದಾಜು ಎರಡು ತಿಂಗಳು ಮಾತ್ರ ಬಾಕಿಯಿದೆ.

ಎಲ್ಲಾ ಪ್ರಾಂತೀಯ ಮತ್ತು ಝೋನಲ್ ಅಮೀರ್‌ರರು, ಅಧ್ಯಕ್ಷರು, ಝೋನಲ್ ಮತ್ತು ಸ್ಥಳೀಯ ತಹ್‌ರೀಕ್ ಜದೀದ್ ಕಾರ್ಯದರ್ಶಿಗಳು ಮೊದಲಾದವರೊಂದಿಗೆ ಅಪೇಕ್ಷಿಸಲಾಗುವುದೇನೆಂದರೆ, ಪ್ರತಿಯೊಂದು ಜಮಾಅತಿನ ನಿಷ್ಠಾವಂತರಿಂದ ಅವರ ವಾಗ್ದಾನಗಳ ಶೇಕಡಾ ನೂರರಷ್ಟು ವಸೂಲಾತಿಗೆ ತೀವ್ರ ಮತ್ತು ಪರಿಣಾಮಕಾರಿ ಪ್ರಯತ್ನವನ್ನು ಪ್ರಾರಂಭಿಸಬೇಕು. ತತ್ಫಲವಾಗಿ, ವಾಗ್ದಾನಗಳನ್ನು ಶೇಕಡಾ ನೂರರಷ್ಟು ಪಾವತಿ ಮಾಡಿದ ಜಮಾಅತ್‌ಗಳ ಪಟ್ಟಿಯಲ್ಲಿ ಅವರ ಜಮಾಅತ್ ದಾಖಲಾಗಿ ನಮ್ಮ ಪ್ರಿಯ ನೇತಾರರಾದ ಹಝ್‌ರತ್ ಖಲೀಫತುಲ್ ಮಸೀಹ್‌ರವರ ಅನುಗ್ರಹೀತ ಸನ್ನಿಧಿಗೆ ಅದನ್ನು ಸಲ್ಲಿಸಲು ಸಾಧ್ಯವಾಗುವಂತೆಯೂ ಅವರು ದೇವಸನ್ನಿಧಿಯಲ್ಲಿ ಮಾಡುವ ಪ್ರಾರ್ಥನೆಯ ಫಲವನ್ನು ಗಳಿಸುವ ಸೌಭಾಗ್ಯ ಲಭಿಸುವಂತೆಯೂ ಆಗಲಿ.

ವ ಬಿಲ್ಲಾಹಿ ತೌಫೀಕ್ – ಎಲ್ಲವೂ ಅಲ್ಲಾಹನ ಸಹಾಯದ ಮೂಲಕ ಸಾಧಿಸುವುದು.

ಅಲ್ಲಾಹನು ನಿಮ್ಮ ಪ್ರಯತ್ನಗಳನ್ನು ಫಲಪ್ರದವನ್ನಾಗಿ ಮಾಡಲಿ. ಜಮಾಅತಿನ ಎಲ್ಲ ನಿಷ್ಠಾವಂತರನ್ನು ತನ್ನ ಅಪರಿಮಿತ ಅನುಗ್ರಹ, ಕೃಪೆಗೆ ಮತ್ತು ಬರಕತ್ತುಗಳಿಗೆ ವಾರೀಸುದಾರರನ್ನಾಗಿ ಮಾಡುವಂತಾಗಲಿ.

ವಕೀಲುಲ್ ಮಾಲ್ ತಹ್‌ರೀಕ್ ಜದೀದ್
ಖಾದಿಯಾನ್

# ನಿಧನ ವಾರ್ತೆ

## ಖತೀಜಮ್ಮ ಸಾಹಿಬ

ಬಜ್ಪೆ ನಿವಾಸಿ ಖತೀಜಮ್ಮ ಸಾಹಿಬ ಜನವರಿ 29ರಂದು ತನ್ನ 77ನೇ ವಯಸ್ಸಿನಲ್ಲಿ ನಿಧನರಾದರು. "ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್".

ಅವರು ಕರಂಬಾರ್‌ನ ಪ್ರಥಮ ಅಹ್ಮದಿ ಜನಾಬ್ ಕೋಯ ಹಸನ್ ಸಾಹೇಬರ ತಮ್ಮ ಮರ್ಹೂಮ್ G.ಹಸನಬ್ಬ ಸಾಹೇಬರ ಪತ್ನಿ ಮತ್ತು B.H. ಮುಹಮ್ಮದ್ ಸಾಹೇಬರ ಸಹೋದರಿ. ಸುಮಾರು 58 ವರ್ಷಗಳ ಮೊದಲೇ ಪತಿಯ ವಿಯೋಗ ಉಂಟಾಗಿ, ತನ್ನ ಏಕಮಾತ್ರ ಪುತ್ರಿಯೊಂದಿಗೆ ಅವರು ಜೀವಿಸುತ್ತಿದ್ದರು. ಕೆಲವು ವರ್ಷಗಳ ಮುಂಚೆ ಅವರ ಮಗಳು ಸಹ ಮೃತಪಟ್ಟರು.

ತ್ಯಾಗಮಯಿಯಾದ ಖತೀಜಮ್ಮ ಸಾಹಿಬ ಅವರು ಜಮಾಅತಿನ ಚಟುವಟಿಕೆಗಳಲ್ಲಿ ಉತ್ಸಾಹದಿಂದ ಭಾಗವಹಿಸುತ್ತಿದ್ದರು.

ಅಲ್ಲಾಹನು ಅವರಿಗೆ ಮಗ್ಫಿರತನ್ನೂ ಜನ್ನತನ್ನೂ ಕರುಣಿಸಲಿ. ಆಮೀನ್.

## ಬೀಪಾತಿಮ ಸಾಹಿಬ

ಮೊಗ್ರಾಲ್ ಜಮಾಅತಿನ ಬೀಪಾತಿಮ ಸಾಹಿಬ ಎಪ್ರಿಲ್ 16ರಂದು ತನ್ನ 85ನೇ ವಯಸ್ಸಿನಲ್ಲಿ ನಿಧನರಾದರು. "ಇನ್ನಾಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್."

ಅವರು ಮೊಗ್ರಾಲಿನ ಪ್ರಥಮ ಅಹ್ಮದಿಯರ ಪೈಕಿ ಓರ್ವರಾದ ಮರ್ಹೂಮ್ ಜನಾಬ್ ಟಿ.ಎ. ಅಬ್ದುಲ್ ಖಾದರ್ ಸಾಹೇಬರ ಪತ್ನಿ, ಮೊಗ್ರಾಲ್ ಜಮಾಅತಿನ ಸೆಕ್ರಿಟರಿ ಮಾಲ್ ಟಿ.ಎ. ಮುಬಾರಕ್ ಅಹ್ಮದ್ ಸಾಹೇಬ್ ಅವರ ಹಿರಿಯ ಪುತ್ರ.

ವಾತ್ಸಲ್ಯಮಯಿಯಾದ ಅವರು ಓರ್ವ ಪುತ್ರನನ್ನೂ ಇಬ್ಬರು ಪುತ್ರಿಯರನ್ನೂ ಅನೇಕ ಬಂಧುಗಳನ್ನೂ ಅಗಲಿದ್ದಾರೆ.

ಅಲ್ಲಾಹನು ಅವರಿಗೆ ಮಗ್ಫಿರತನ್ನೂ ಜನ್ನತನ್ನೂ ದಯಪಾಲಿಸಲಿ. ಆಮೀನ್.

---

**"ಇನ್‌ಸಾನಿಯತ್ ಜಿಂದಾಬಾದ್"**

**"ಮಾನವೀಯತೆ ಚಿರಕಾಲ ಬಾಳಲಿ"**

**"LOVE FOR ALL
HATRED FOR NONE"**

**"ಎಲ್ಲರೊಡನೆ ಸ್ನೇಹ
ಯಾರೊಡನೆಯೂ ದ್ವೇಷವಿಲ್ಲ"**

ಪುಸ್ತಕ ವಿಭಾಗ

# ಧರ್ಮದ ನಾಮದಲ್ಲಿ ರಕ್ತಪಾತ

ಅಧ್ಯಾಯ - 9

- ಹಝ್ರತ್ ಮಿರ್ಝಾ ತಾಹಿರ್ ಅಹ್ಮದ್

## ಇಸ್ಲಾಮಿಕ ಭಯೋತ್ಪಾದನೆ?

ಇಸ್ಲಾಮಿಕ ಭಯೋತ್ಪಾದನೆ ಎಂದರೇನು? ನಾನು ಆಶ್ಚರ್ಯಚಕಿತನಾಗುತ್ತೇನೆ. ಬೆಳಕು ಅಂಧಕಾರದೊಂದಿಗೆ, ಜೀವನ ಮರಣದೊಂದಿಗೆ ಮತ್ತು ಶಾಂತಿ ಯುದ್ಧದೊಂದಿಗೆ ಎಂತಹ ಸಂಬಂಧಹೊಂದಿದೆಯೋ ಅದೇ ರೀತಿಯ ಸಂಬಂಧವನ್ನು ಇಸ್ಲಾಮ್ ಭಯೋತ್ಪಾದನೆಯೊಂದಿಗೆ ಹೊಂದಿದೆ. ಅವು ಪರಸ್ಪರ ಸಂಬಂಧ ಸ್ಥಾಪಿಸುತ್ತವೆಯಾದರೂ ಅವು ನೇರವಾಗಿ ವಿರುದ್ಧ ದಿಕ್ಕುಗಳಿಂದ ಬರುತ್ತವೆ. ಅವು ಪರಸ್ಪರ ಕೈ ಕೈ ಮಿಲಾಯಿಸುತ್ತಿವೆಯಾಗಿ ಕಂಡುಬರುತ್ತದೆ. ಆದರೆ ಅವು ಒಂದರ ಕೈಯನ್ನು ಇನ್ನೊಂದು ಹಿಡಿದು ಸಂತೋಷದಿಂದ ಸಾಗಲಾರವು.

ಹೀಗಿದ್ದರೂ ಹಲವಾರು ಸಂದರ್ಭಗಳಲ್ಲಿ ಮುಸ್ಲಿಮರು ಒಂದು ಗುಂಪಿನ ಪರವಾಗಿ, ಅಥವಾ ಬಹುಸಂಖ್ಯಾತರಾಗಿ ಮುಸ್ಲಿಮರು ಇರುವ ಒಂದು ದೇಶದ ಪರವಾಗಿ ಭಯೋತ್ಪಾದಕ ಕೃತ್ಯಗಳಲ್ಲಿ ಅನೇಕ ಸಂದರ್ಭಗಳಲ್ಲಿ ಭಾಗವಹಿಸುತ್ತಾರೆ ಎಂಬ ಸಂಗತಿಯನ್ನು ನಿರಾಕರಿಸಲಾಗದು.

ಇದೇ ರೀತಿ ಭಯೋತ್ಪಾದಕ ಕೃತ್ಯಗಳನ್ನು ಮಾಡುವ ಬೇರೆ ಗುಂಪುಗಳು ವಿಶ್ವದಾದ್ಯಂತ ಇಲ್ಲವೇ? ಇಸ್ಲಾಮಿಕ ಭಯೋತ್ಪಾದನೆ ಎಂದು ಹೆಸರಿಸಿದ ಹಾಗೆಯೇ ಬೇರೆ ಗುಂಪುಗಳನ್ನು ಇದೇ ಮಾದರಿಯನ್ನು ಅವಲಂಬಿಸಿ "ಸಿಖ್ ಭಯೋತ್ಪಾದನೆ", "ಹಿಂದೂ ಭಯೋತ್ಪಾದನೆ", "ಕ್ರೈಸ್ತ ಭಯೋತ್ಪಾದನೆ", "ಯಹೂದಿ ಭಯೋತ್ಪಾದನೆ" "ನಾಸ್ತಿಕ ಭಯೋತ್ಪಾದನೆ", "ಬೌದ್ಧ ಭಯೋತ್ಪಾದನೆ", "ಆನಿಮಿಸ್ಟ್ ಭಯೋತ್ಪಾದನೆ", "ಬಹುದೇವಾರಾಧಕರ ಭಯೋತ್ಪಾದನೆ" ಎಂದು ಎಲ್ಲಾ ರೀತಿಯ ಭಯೋತ್ಪಾದನೆಗಳಿಗೆ ಹೆಸರು ಕೊಡುವುದು ಸರಿಯಾಗುವುದೇ?

ಲೋಕದಾದ್ಯಂತ ದುರದೃಷ್ಟಕರವಾಗಿ ವಿಜೃಂಭಿಸುತ್ತಿರುವ ವಿವಿಧ ರೀತಿಯ ಭಯೋತ್ಪಾದಕ ಕೃತ್ಯಗಳ ಕಡೆಗೆ ನೋಡದಂತೆ ಕಣ್ಣು ಮುಚ್ಚಿರುವುದು ಸುಲಭವೇನೂ ಅಲ್ಲ. ವಾಸ್ತವಿಕವಾಗಿ ಒಂದು ಉದ್ದೇಶಿತ ಆದರ್ಶದ ಹೆಸರಿನಲ್ಲಿ ಅಥವಾ ಉದಾತ್ತ ಧ್ಯೇಯಕ್ಕಾಗಿ ಹೆಚ್ಚು ಹೆಚ್ಚಾಗಿ ಹಿಂಸಾಚಾರ, ರಕ್ತಪಾತ ಮತ್ತು ಕೊಲೆಗಳನ್ನು ಭಯೋತ್ಪಾದಕರು ನಡೆಸುವುದರ ಬಗ್ಗೆ ವೀಕ್ಷಕರು ಅರಿಯದಿರುವುದು ಸಾಧ್ಯವಿಲ್ಲ. ಭಯೋತ್ಪಾದನೆ ಒಂದು ಜಾಗತಿಕ ಸಮಸ್ಯೆಯಾಗಿದೆ. ಅದರ ಯಥಾರ್ಥವಾದ ಸ್ವರೂಪವನ್ನು ಅಧ್ಯಯನ ಮಾಡುವುದು ಆವಶ್ಯಕವಾಗಿದೆ. ಕೆಲವು ಮುಸ್ಲಿಮ್ ಗುಂಪುಗಳು ಮತ್ತು ದೇಶಗಳು ನಿಶ್ಚಿತ ಗುರಿಗಳನ್ನು ಸಾಧಿಸಲಿಕ್ಕಾಗಿ ಭಯೋತ್ಪಾದನೆಯ ಕಡೆಗೆ ಏಕೆ ತಿರುಗುತ್ತಿವೆ ಎಂಬುದನ್ನು ಮನವರಿಕೆ ಮಾಡಲು ಹಿಂಸಾಚಾರದ ಹಿಂದೆ ಇರುವ ಶಕ್ತಿಗಳನ್ನು ಅರಿತುಕೊಳ್ಳದೆ ಸಾಧ್ಯವಾಗಲಾರದು.

ಎಲ್ಲ ರೀತಿ ಜಾತೀಯ ಹಿಂಸಾಚಾರಗಳು ಇಂದು ಲೋಕದಲ್ಲಿ ಅವು ಎಲ್ಲಿಯಾದರೂ ಯಾವ ವೇಷ ಧರಿಸಿಯಾದರೂ ನಡೆಯುತ್ತಿರುವುದರ ಮೂಲ ಹೇತುವು ರಾಜಕೀಯವಾಗಿದೆ. ಧರ್ಮವು ಶೋಷಕವಲ್ಲ. ಅದನ್ನು ಆಂತರಿಕ ಮತ್ತು ಬಾಹ್ಯ ರಾಜಕೀಯ ಸ್ವಾರ್ಥ ಶಕ್ತಿಗಳು ಶೋಷಿಸುತ್ತಿವೆ.

ಉದಾಹರಣೆಗೆ, ಜನಾಂಗವಾದದ ಕಾರಣದಿಂದ ಉತ್ಪಾದಿಸಲ್ಪಡುವ ಭಯೋತ್ಪಾದನೆಯನ್ನು ನೋಡುವ. ಅದರ ಬಗ್ಗೆ ಕೂಲಂಕಷವಾಗಿ ಪರಿಶೀಲಿಸಿದರೆ ಅದಕ್ಕೆ ರಾಜಕೀಯ ಕಾರಣಗಳನ್ನೇ ಕಂಡುಕೊಳ್ಳಬಹುದು. ಕೆಲವು ಚಿಕ್ಕ ಮಟ್ಟಿನ ಭಯೋತ್ಪಾದನೆ ವಿದ್ರೋಹ ಮತ್ತು ಪ್ರಚಲಿತ ಸಾಮಾಜಿಕ ವ್ಯವಸ್ಥೆಯ ಮತ್ತು ಸಂಸ್ಕೃತಿಯ ಬಗ್ಗೆ ದ್ವೇಷದ ಕಾರಣದಿಂದ ಉಂಟಾಗುತ್ತದೆ. ಅಂತಹ ಕೃತ್ಯಗಳನ್ನು ಹುಚ್ಚರ ಅಥವಾ ಬಂಡುಗಾರರ ಕೃತ್ಯಗಳೆಂದು ಸಾಮಾನ್ಯವಾಗಿ ಗ್ರಹಿಸಲಾಗುತ್ತದೆ. ಒಂದು ವಿಶಿಷ್ಟ ರೀತಿಯ ಭಯೋತ್ಪಾದನೆ ಮಾಫಿಯಾ ಗುಂಪುಗಳ ಮೇಲಾಟದ ಕಾರಣದಿಂದ ಸಂಭವಿಸುತ್ತದೆ. ಮಾಫಿಯಾದ ಒಂದು ಗುಂಪು ಇನ್ನೊಂದು ಗುಂಪಿನ ವಿರುದ್ಧ ಭಯೋತ್ಪಾದಕ ಕೃತ್ಯಗಳನ್ನು ಮಾಡುತ್ತದೆ. ಒಂದು ಸಂಗತಿ ಸ್ವತಃಸಿದ್ಧವಾಗುತ್ತದೆ: ಭಯೋತ್ಪಾದನೆಯು ನಿಜವಾಗಿಯೂ ಅಧಿಕಾರಕ್ಕಾಗಿರುವ ಒಂದು ಹೋರಾಟವಾಗಿದ್ದು ಆ ಕಾರಣದಿಂದ ಅದು ರಾಜಕೀಯವಾಗಿದೆ.

ತಥಾ ಕಥಿತ "ಇಸ್ಲಾಮಿಕ ಭಯೋತ್ಪಾದನೆ"ಯನ್ನು ನಾವು ಪರಿಶೀಲಿಸಿದರೆ ಇಸ್ಲಾಮಿನ ಮುಖವಾಡದ ಹಿಂದೆ ಕಾರ್ಯಪ್ರವೃತ್ತವಾಗಿರುವ ರಾಜಕೀಯ ಶಕ್ತಿಗಳನ್ನು ಕಾಣಬಹುದು. ಹೆಚ್ಚಿನ ಸಂದರ್ಭಗಳಲ್ಲಿ ಕೌಶಲದಿಂದ ಸಾಹಸ ಕಾರ್ಯ ನಿರ್ವಹಿಸುವ ನಿಜವಾದ ಶೋಷಕರು ಮುಸ್ಲಿಮರೇ ಆಗಿರುವುದಿಲ್ಲ. ನಾವು ಕೆಲವು ನಿರ್ದಿಷ್ಟ ಭಯೋತ್ಪಾದಕ ಉದಾಹರಣೆಗಳನ್ನು ನೋಡುವ ಮತ್ತು ಅವುಗಳ ಮೂಲಕಾರಣಗಳನ್ನು ಕಂಡುಹಿಡಿಯುವ. ನಾವು ಇರಾನ್ ಕಡೆಗೆ ತಿರುಗುವ ಮತ್ತು ಅಲ್ಲಿ ಖುಮೈನಿಸಂ ತಲೆದೋರಿದುದು ಹೇಗೆಂದು ನೋಡುವ.

ಶಾಹ್‌ರವರ ಕಾಲದಲ್ಲಿ ಇರಾನ್‌ನಲ್ಲಿ ಬಹಳ ಅಭಿವೃದ್ಧಿ ಉಂಟಾಗಿತ್ತೆಂಬುದು ಎಲ್ಲರಿಗೂ ತಿಳಿದ ಸಂಗತಿಯಾಗಿದೆ. ಮಹತ್ವಾಕಾಂಕ್ಷೆಯ ಔದ್ಯೋಗಿಕ ಮತ್ತು ಆರ್ಥಿಕ ಯೋಜನೆಗಳು ಆ ದೇಶಕ್ಕೆ ಬಹಳ ಪ್ರಕಾಶಮಾನವಾದ ಮುನ್ನಡೆಗೆ ನಾಂದಿ ಹಾಡಿತು. ಆದರೆ ಮನುಷ್ಯನು ಕೇವಲ ಆಹಾರದಿಂದ ಮಾತ್ರ ತೃಪ್ತನಾಗುವನೇ? ಶಾಹ್‌ರವರ ನಿರಂಕುಶಾಧಿಕಾರಕ್ಕೊಳಗಾದ ಇರಾನಿನ ಜನರ ಬಗ್ಗೆ ಹೇಳುವುದಾದರೆ ಅದಕ್ಕಿರುವ ಅವರ ಸ್ಪಷ್ಟ ಉತ್ತರ "ಇಲ್ಲ" ಎಂದಾಗಿತ್ತು. ತಮ್ಮ ರಾಜ್ಯಾಡಳಿತೆಯಲ್ಲಿ ಜವಾಬ್ದಾರಿಭರಿತ ಒಂದು ಪಾಲನ್ನು ಅವರು ಆವಶ್ಯಪಡುತ್ತಿದ್ದರು. ಅವರು ಕೇವಲ ತುಂಬಿದ ಹೊಟ್ಟೆಗಳಿಂದ ತೃಪ್ತರಾಗಲು ಸಾಧ್ಯವಾಗಲಿಲ್ಲ. ಅವರು ಆತ್ಮಾಭಿಮಾನ ಮತ್ತು ಗೌರವದ ಗಳಿಕೆಗಾಗಿ ಹಸಿದಿದ್ದರು. ಶಾಹ್‌ರವರ ಆಡಳಿತದ ಕಟ್ಟುನಿಟ್ಟಿನ ವ್ಯವಸ್ಥೆಯ ಹಿಂಸೆಯಿಂದ ಬೇಸತ್ತು ಅವರು ಸ್ವಾತಂತ್ರ್ಯಕ್ಕಾಗಿ ಅತ್ಯಾಶೆ ಹೊಂದಿದ್ದರು. ಅವರು ಹೆಚ್ಚು ಹೆಚ್ಚಾಗಿ ತಂಟೆಗೋರರಾಗಿ ಮತ್ತು ಚಂಚಲತೆಯಿಂದ ವರ್ತಿಸಲು ತೊಡಗಿದರು. ಅದು ಹಿಂಸಾತ್ಮಕ ರಕ್ತಪಾತ ಕ್ರಾಂತಿಗೆ ಸಕಾಲವಾಗಿತ್ತು.

ಆಸನ್ನವಾಗಿದ್ದ ಕ್ರಾಂತಿ ಇಸ್ಲಾಮಿಕವಾಗಿ ಪರಿಣಮಿಸದೆ ಇರುತ್ತಿದ್ದಲ್ಲಿ ಅಲ್ಲಿ ಕಮ್ಯುನಿಸ್ಟ್ ಕ್ರಾಂತಿ ಉಂಟಾಗಿ ಹೆಚ್ಚು ತೀವ್ರವಾದುದೂ ಹೆಚ್ಚು ರಕ್ತಪಾತ ಉಂಟುಮಾಡುವುದೂ ಆಗುತ್ತಿತ್ತು. ಉತ್ತರದಿಂದ ದಕ್ಷಿಣದವರೆಗೆ ಮತ್ತು ಪೂರ್ವದಿಂದ ಪಶ್ಚಿಮದ ವರೆಗೆ ಇರಾನನ್ನು

ಅಲುಗಾಡಿಸಿದ ಆ ಗಲಭೆಗೊಂದಲಗಳು ದೀರ್ಘಕಾಲದ ತನಕ ಜನರಿಗೆ ಅವರ ಹಕ್ಕುಗಳನ್ನು ಮತ್ತು ಸ್ವಾತಂತ್ರ್ಯವನ್ನು ನಿರಾಕರಿಸಿದ ಕಾರಣದಿಂದ ಮತ್ತು ಒಂದು ದೊಡ್ಡ ಪಾಶ್ಚಿಮಾತ್ಯ ಶಕ್ತಿಯು ಮಾಡಿದ ಶೋಷಣೆಗಳಿಂದ ಸಹಜವಾಗಿ ಮತ್ತು ಅನಿವಾರ್ಯವಾಗಿ ಪರಿಣಮಿಸಿದವುಗಳಾಗಿದ್ದುವು. ಇರಾನಿನ ಶಾಹ್‌ರವರ ನಿರಂಕುಶಾಧಿಕಾರವನ್ನು ಅಮೇರಿಕ ಬೆಂಬಲಿಸುತ್ತಿತ್ತೆಂದು ಮತ್ತು ಅದಕ್ಕೆ ಅಮೇರಿಕದ ಪೂರ್ಣ ಅಂಗೀಕಾರವಿತ್ತೆಂದು ಇರಾನಿನ ಜನರು ತಿಳಿದಿದ್ದರು. ಜನರ ರೋಷಾವೇಶಗಳು ಶಾಹ್‌ರವರ ನಿರಂಕುಶ ಪ್ರಭುತ್ವವನ್ನು ಕೆಡವಿ ಹಾಕುವುದರ ಮೂಲಕ ಮತ್ತು ಶಾಹ್‌ರವರ ಆಡಳಿತೆಯನ್ನು ಜಾರಿಗೊಳಿಸುತ್ತಿದ್ದ ಆಂತರಿಕ ಶಕ್ತಿಗಳನ್ನು ನಿರ್ನಾಮಗೊಳಿಸುವುದರಿಂದ ಮಾತ್ರ ತೃಪ್ತವಾಗಿರಲಿಲ್ಲ.

ತನಗೆ ಅಮೇರಿಕದ ಬೆಂಬಲವಿದೆ ಎಂಬ ಪ್ರಜ್ಞೆಯಿದ್ದ ಶಾಹ್‌ರವರಲ್ಲಿ ನಿರಂಕುಶಾಧಿಕಾರದ ಎಲ್ಲಾ ದುರ್ಗುಣಗಳು ಪ್ರಕಟನಾಗುತ್ತಿದ್ದುವು. ಶಾಹ್‌ರವರನ್ನು ಭಯದಿಂದ ನೋಡುತ್ತಿದ್ದವರು ಭಯೋತ್ಪಾದನೆಗೆ ಮುನ್ನುಗ್ಗಿದರು. ಜನರು ವಿದ್ರೋಹ ಮಾಡುವರೆಂಬ ಭಯವು ಶಾಹ್‌ರವರನ್ನು ಸಮಯ ಕಳೆದಂತೆ ಇನ್ನಷ್ಟು ಕಠೋರವಾಗಿ ವರ್ತಿಸುವಂತೆ ಮಾಡಿತು. ಕ್ರಮೇಣ ಅತ್ಯಂತ ಕೆಟ್ಟ ಪೋಲೀಸು ರಾಜ್ಯ ಇರಾನಿನಲ್ಲಿ ಸ್ಥಾಪಿತವಾಯಿತು. ಈ ಪೋಲೀಸು ರಾಜ್ಯವನ್ನು ಪೂರ್ಣವಾಗಿ ಅಮೇರಿಕದ ಸರಕಾರ ಬೆಂಬಲಿಸುತ್ತಿತ್ತೆಂದು ಜನರು ಮನವರಿಕೆ ಮಾಡಿದರು. ಶಾಹ್ ಕೇವಲ ಒಂದು ಬೊಂಬೆಯ ಹಾಗೆ ವರ್ತಿಸುತ್ತಿದ್ದರು. ಆ ಬೊಂಬೆಯ ದಾರಗಳನ್ನು ಅಮೇರಿಕದ ಸೂಕ್ಷ್ಮ ಕೈಚಳಕ ಪ್ರದರ್ಶಕ ಬೆರಳುಗಳು ಹಿಡಿದು ಆಡಿಸುತ್ತಿದ್ದುವು. ಇದು ಜನರಲ್ಲಿ ದ್ವೇಷಾಗ್ನಿಯನ್ನು ಬಡಿದೆಬ್ಬಿಸಿ ಕ್ರಾಂತಿಗೆ ಪಕ್ವವಾದ ಸ್ಥಿತಿಯನ್ನು ಉಂಟುಮಾಡಿತು.

ಈ ಸಂದರ್ಭವನ್ನು ಆಯತುಲ್ಲಾ ಖುಮೈನಿ ಸದುಪಯೋಗಪಡಿಸಿದರು. ಈ ಕ್ರಾಂತಿಗೆ ಬಣ್ಣ ನೀಡಲು ಖುಮೈನಿ ಬಳಸಿದ ತತ್ವಾದರ್ಶಗಳು ಶಿಯಾ ಪಂಥದ ಇಸ್ಲಾಮ್ ಪ್ರಕಾರವಾಗಿತ್ತು. ಆದರೆ ಅಮೇರಿಕದ ವಿರುದ್ಧ ದ್ವೇಷವನ್ನು ಬಡಿದೆಬ್ಬಿಸಿದುದು ಶಿಯಾ ಪಂಥದ ಇಸ್ಲಾಮ್ ಬಗ್ಗೆ ಪ್ರೀತಿಯೇ? ಅಥವಾ ಅದು ಅದರ ಹಿಂದಿದ್ದ ಉದ್ದೇಶ ಲಕ್ಷ್ಯಗಳನ್ನು ಮರೆಮಾಡುವುದಕ್ಕಾಗಿ ಉಪಯೋಗಿಸಿದ ಒಂದು ಮುಖವಾಡವೇ? ಖುಮೈನಿ ಇಸ್ಲಾಮಿನ ಪತಾಕೆಯನ್ನು ಹಾರಿಸದಿರುತ್ತಿದ್ದರೆ ಅಲ್ಲಿ ಬೇರೆ ಯಾವುದಾದರೂ ಹೆಸರಿನಲ್ಲಿ ಕ್ರಾಂತಿ ಉಂಟಾಗುತ್ತಿರಲಿಲ್ಲವೇ? ಖುಮೈನಿ ಆ ಸಂದರ್ಭವನ್ನು ಉಪಯೋಗಿಸಿ ಅದಕ್ಕೆ ಇಸ್ಲಾಮಿಕವಾದ ಬಣ್ಣವನ್ನು ಕೊಡದಿರುತ್ತಿದ್ದರೆ ಆ ದ್ವೇಷದ ವಾತಾವರಣವನ್ನು ರಾಷ್ಟ್ರೀಯ ಭಾವನೆ ಅಥವಾ ವೈಜ್ಞಾನಿಕ ಸಮಾಜವಾದ ಮೊದಲಾದ ಬೇರೆ ಯಾವುದಾದರೂ ಧರ್ಮೇತರ ವಿಚಾರಧಾರೆಯು ತನ್ನ ಉಪಯೋಗಕ್ಕೆ ಬಳಸುತ್ತಿರಲಿಲ್ಲವೇ?

ವಾಸ್ತವಿಕ ಸಂಗತಿ ಏನೆಂದರೆ ಖುಮೈನಿ ತನ್ನ ಹಿಮ್ಮಡಿಯ ಹಿಂಭಾಗದಿಂದ ಹೆಜ್ಜೆ ಹಾಕಿ ಬರುತ್ತಾ ಇದ್ದ ಶಕ್ತಿಗಳಿಗಿಂತ ಮುಂದಾಗಿ ಹೆಜ್ಜೆ ಹಾಕಿದರು. ಸಮಯಾವಕಾಶ ದೊರೆತಿದ್ದರೆ ಆ ಶಕ್ತಿಗಳು ಅವರನ್ನು ಮತ್ತು ಅವರು ಉದ್ದೇಶಿಸಿದುದನ್ನು ಹಿಂದಕ್ಕೆ ಹಾಕಿ ಮುಂದೆ ಸಾಗುತ್ತಿದ್ದವು. ಇರಾನಿನ ಪರಿಸ್ಥಿತಿ ಬಹಳ ಬಿಕ್ಕಟ್ಟಿನಿಂದ ಕೂಡಿದುದು ಮತ್ತು ಕಂಗೆಡಿಸುವಂತಾದುದು ಇದೇ ಕಾರಣದಿಂದಾಗಿದೆ. ಕ್ರಾಂತಿಯನ್ನು ಉತ್ತೇಜಿಸಿದುದು ಕಮ್ಯುನಿಸಂ ವಿರುದ್ಧವಾಗಿ ಅಥವಾ ಬೇರೆ ಯಾವುದಾದರೂ ವಿಚಾರಧಾರೆಯ ವಿರುದ್ಧವಾಗಿ ಅಲ್ಲ. ಅದು ಗುರಿ ಇಟ್ಟದ್ದು ಶಾಹ್‌ರನ್ನು ಮತ್ತು ಅವರ ಸಲಹೆಗಾರರನ್ನಾಗಿತ್ತು. ಖುಮೈನಿಯಿಂದ ಕಡಿವಾಣವನ್ನು ಎಡಪಕ್ಷ ನಾಯಕರು ಹಿಡಿಯುವ ಸಾಧ್ಯತೆ ಇದ್ದುದರಿಂದ ಅವರು ಮೂರು ಕ್ಷೇತ್ರಗಳಲ್ಲಿ ಏಕಕಾಲದಲ್ಲಿ ಹೋರಾಡ ಬೇಕಾಯಿತು. ಶಾಹ್‌ರವರನ್ನು ಅಧಿಕಾರದಿಂದ ಹೊರತಳ್ಳಿದ ನಂತರ ಅವರು ಶಾಹ್‌ರವರ ಸಹಾಯಕರನ್ನು ನಾಶಗೊಳಿಸಲೆತ್ನಿಸಿದರಲ್ಲದೆ ಅಮೇರಿಕ ಪ್ರಭಾವ ಬೀರುತ್ತಿದೆ ಎಂದು ಭಾವಿಸಲಾಗುತ್ತಿರುವಲ್ಲೆಲ್ಲಾ ಅದರ ಪ್ರಭಾವವನ್ನು ಬೇರುಸಹಿತ ಕಿತ್ತೆಸೆದರು. ಅವರ ಈ ಕೃತ್ಯ ಎಡ ವಿಚಾರಧಾರೆಗೆ ಸಹಾಯ ಮಾಡಬಹುದಿತ್ತು ಮತ್ತು ಅದನ್ನು ತಡೆಗಟ್ಟಲು ಪ್ರಯತ್ನಿಸದೆ ಇರುತ್ತಿದ್ದರೆ ಖುಮೈನಿಯ ಕೈಗಳಿಂದ ಅಧಿಕಾರವನ್ನು ಕಿತ್ತುಕೊಂಡು ಇಸ್ಲಾಮಿಕ ತತ್ವಾದರ್ಶಗಳಿಗೆ ಪ್ರತಿಯಾಗಿ ಮಾರ್ಕ್ಸಿಸಂ ಮತ್ತು ಲೆನಿನಿಸಂ ಸ್ಥಾಪಿತವಾಗುವ ಸಂಭವವಿದ್ದಿತು.

ಆಯತುಲ್ಲಾ ಖುಮೈನಿ ಬುದ್ಧಿಶಾಲಿಯೂ ಶಕ್ತಿವಂತರೂ ಆಗಿದ್ದುದರಿಂದ ಅವರು ಇಸ್ಲಾಮಿಕ ತತ್ವಾದರ್ಶಗಳ ಎರಡಲಗಿನ ಖಡ್ಗವನ್ನು ಅಮೇರಿಕನ್ ಬಲಪಂಥದ ವಿರುದ್ಧ ಮತ್ತು ರಶ್ಯಿಯನ್ ಎಡಪಂಥದ ವಿರುದ್ಧ ಪರಿಣಾಮಕಾರಿಯಾಗಿ ಪ್ರಯೋಗಿಸುವ ಭಾಗ್ಯವನ್ನು ಪಡೆದರು.

ಒಟ್ಟಾರೆ ಹೇಳುವುದಾದರೆ, ಇರಾನಿನ ಕ್ರಾಂತಿಗೆ ಮಾರ್ಗದರ್ಶನ ನೀಡಿದುದು ಮತ್ತು ಉಪದೇಶಿಸಿದುದು ಇಸ್ಲಾಮಿನ ತತ್ವಾದರ್ಶಗಳಲ್ಲ. ಇರಾನಿನಲ್ಲಿ ಸಂಭವಿಸಿದುದು ಮತ್ತು ಸಂಭವಿಸುತ್ತಾ ಇರುವುದು ಖುಮೈನಿಸಂ ಎಂದು ನೀವು ಹೇಳಬಹುದು. ಅಲ್ಲಿ ಕಾರ್ಯಪ್ರವೃತ್ತವಾಗಿರುವ ಶಕ್ತಿಗಳು ವಾಸ್ತವಿಕವಾಗಿಯೂ ಸಾರಭೂತವಾಗಿಯೂ ಧಾರ್ಮಿಕ ರೂಪದವುಗಳಲ್ಲ. ಶಾಹ್‌ರವರ ವಿರುದ್ಧ ಇರಾನಿನ ಜನರ ಆಕ್ರೋಶವನ್ನು ರಾಜಕೀಯ ಶಕ್ತಿಗಳು ಉಪಯೋಗಿಸಿಕೊಂಡದ್ದು ಉದ್ದೇಶಿತ ರಾಜಕೀಯ ಗುರಿಗಳನ್ನು ಸಾಧಿಸಲಿಕ್ಕಾಗಿ ಮಾತ್ರವಾಗಿತ್ತು.

ಒಂದಲ್ಲವಾದರೆ ಇನ್ನೊಂದು ರೀತಿಯ ವಿದೇಶೀಯ ಶಕ್ತಿಗಳು ಇರಾನನ್ನು ಶೋಷಿಸುತ್ತಾ ತಮ್ಮ ದಾಸತ್ವಕ್ಕೆ ಅಧೀನಗೊಳಿಸುತ್ತಾ ಇದ್ದುದರ ವಿರುದ್ಧ ಇರಾನಿನ ಜನತೆಗೆ ಪ್ರಜ್ಞೆ ಹೆಚ್ಚುತ್ತಾ ಹೋದುದರ ಚರಿತ್ರೆ ದೀರ್ಘವಾಗಿದೆ. ಇರಾನಿನ ಜನಸಂಖ್ಯೆಯ ಬಹುದೊಡ್ಡ ಭಾಗ ಮುಸ್ಲಿಮರಾಗಿದ್ದರೂ ತಮ್ಮ ದೇಶವನ್ನು ಅರಬಿಗಳು ಆಕ್ರಮಿಸಿ ಅಧೀನಕ್ಕೊಳಪಡಿಸಿದ ಚರಿತ್ರೆಯನ್ನು ಮರೆತುಬಿಡಲು ಅಥವಾ ಕ್ಷಮಿಸಲು ಅವರು ಶಕ್ತರಾಗಿಲ್ಲ ಎಂಬ ವಿಷಯವನ್ನು ನಾವು ಕಡೆಗಣಿಸಲಾಗದು. ಅವರಿಗಾದ ಗಾಯಗಳು ಬಹಳ ಹಿಂದೆಯೇ ಗುಣ ಹೊಂದಿವೆ ಎಂದು ತೋರುವುದಾದರೂ ಸಮಾನ ಧರ್ಮ ಮತ್ತು ಅನ್ಯ ದೇಶಗಳ ವಿರುದ್ಧ ಸಮಾನ ದ್ವೇಷವು ಅವರ ಮತ್ತು ಅರಬಿಗಳ ಸಂಬಂಧವನ್ನು ಬಿಗಿಪಡಿಸಿದ್ದರೂ ಕಳೆದ ಕೆಲವು ನೂರು ವರ್ಷಗಳ ಕಾಲಾವಧಿಯಲ್ಲಿ ಅರಬಿಗಳು ಇರಾನಿನ ಮೇಲೆ ಗಳಿಸಿದ ಪ್ರಭುತ್ವವು ಅವರಲ್ಲಿ ಒಂದು ರೀತಿಯ ಅತೃಪ್ತಿಯ ಒಳಹರಿವನ್ನು ಉಂಟುಮಾಡಿದೆ ಎಂಬ ಸಂಗತಿಯನ್ನು ಅಲ್ಲಗಳೆಯಲಾಗದು.

ಇಸ್ಲಾಮಿನ ಆಗಮನದ ಮೊದಲು ಇರಾನ್ ಬಹಳ ಶಕ್ತಿಶಾಲಿ ಮತ್ತು ವೈಭವಪೂರ್ಣವಾದ ನಾಗರಿಕತೆಯನ್ನು ಹೊಂದಿದ್ದು ಅದು ಲೋಕದಾದ್ಯಂತ ಪ್ರಭಾವಶಾಲಿಯಾಗಿತ್ತು ಎಂಬುದನ್ನು ಗಮನದಲ್ಲಿ ಇಟ್ಟುಕೊಳ್ಳಬೇಕು. ಇಸ್ಲಾಮಿನ ಸ್ಥಾಪನೆಯ ಕಾಲದಲ್ಲಿ ಅರಬಿಗಳಿಗೆ ಎರಡು ಲೋಕಗಳ ಪರಿಚಯ ಮಾತ್ರವಿತ್ತು. ಒಂದು ರೋಮನ್ ಪ್ರಭುತ್ವದ ಪಶ್ಚಿಮ ಮತ್ತು ಇರಾನಿನ ಖುಸ್ರೋ ಪ್ರಭುತ್ವದ ಪೂರ್ವ.

ಪುರಾತನವಾದ ಕೀರ್ತಿಶಾಲಿ ಕಾಲಘಟ್ಟದ ನೆನಪುಗಳು ಇಸ್ಲಾಮಿಕ ಭ್ರಾತತ್ವದ ಪ್ರಭಾವದಿಂದ ಸ್ವಲ್ಪಮಟ್ಟಿಗೆ ನಿಗ್ರಹಿಸಲ್ಪಟ್ಟಿದ್ದರೂ ಅವುಗಳನ್ನು ಪೂರ್ಣವಾಗಿ ಅಳಿಸಿಬಿಡಲು ಸಾಧ್ಯವಾಗಲಿಲ್ಲ. ಇರಾನಿನ

ಬುದ್ಧಿಜೀವಿಗಳ ಹೃದಯಗಳಲ್ಲಿ ಇರಾನಿನ ನಾಗರಿಕತೆಯ ಕುರಿತು ಉದ್ದವೂ ಸ್ಥಾಯಿಯೂ ಆಗಿರುವ ನೆರಳು ಯಾವಾಗಲೂ ಇರುತ್ತಿತ್ತು.

ಇರಾನ್ ಮತ್ತು ಅರಬಿಗಳ ಮಧ್ಯೆ ಇದ್ದ ವೈರದ ದೀರ್ಘಚರಿತ್ರೆಯು ಮತ್ತು ಇರಾನಿನವರು ಅರಬ್ ದೇಶಕ್ಕೆ ಶಿಕ್ಷೆ ನೀಡಲು ನಡೆಸಿದ ಆಕ್ರಮಣಗಳು ಅರಬಿಗಳ ಮನಸ್ಸುಗಳಲ್ಲಿ ರೇಗಿಸುವ ಕುರೂಪವಾದ ಗಾಯದ ಕಲೆಗಳನ್ನು ಉಂಟುಮಾಡಿದ್ದು ಸಮಯವು ಬಹಳ ದೊಡ್ಡ ರೋಗ ಚಿಕಿತ್ಸಕವಾಗಿದ್ದರೂ ಅದನ್ನು ಅಳಿಸಿ ಬಿಡಲು ಅಸಮರ್ಥ ವಾಗಿತ್ತು. ಇದು ಮನುಷ್ಯ ಸಹಜವಾದುದಾಗಿದೆ. ಲೋಕದ ಎಲ್ಲಾ ಕಡೆಗಳಲ್ಲಿ ಇರುವ ಜನರು ತಮ್ಮನ್ನು ತಮ್ಮ ಹಿಂದಿನ ಕಾಲದ ಚರಿತ್ರೆಯಿಂದ ದೂರಸರಿಸಲು ಮತ್ತು ತಮಗಾದ ಅಪಮಾನಗಳನ್ನು ಮತ್ತು ಗಾಯಗಳನ್ನು ಮರೆತುಬಿಡಲು ಅಸಮರ್ಥರಾಗುತ್ತಾರೆ. ಚರಿತ್ರೆಯ ಇಂತಹ ಅಧ್ಯಾಯಗಳು ಶಾಶ್ವತವಾಗಿ ಮುಚ್ಚಲ್ಪಡುವುದಿಲ್ಲ. ಅವುಗಳು ಪುನಃ ಪುನಃ ತೆರೆಯಲ್ಪಡುತ್ತವೆ.

ಅರಬಿಗಳ ಮತ್ತು ಇರಾನಿನ ಜನರ ವೈರದ ಚರಿತ್ರೆಯ ವಿವರಣೆ ಸಾಕಷ್ಟಾಯಿತು. ನಾವು ಆಧುನಿಕ ಕಾಲಕ್ಕೆ ಬರೋಣ. ಇರಾನಿನ ಜನರು ತಮ್ಮ ದುಃಖ ದುಮ್ಮಾನಗಳನ್ನು ಸೂಚಿಸುತ್ತಿದ್ದುದು ಅರಬಿಗಳ ವಿರುದ್ಧ ಮಾತ್ರವಲ್ಲ. ದ್ವಿತೀಯ ಮಹಾಯುದ್ಧದ ಕಾಲದಲ್ಲಿ ಮುಖ್ಯವಾಗಿ ಬ್ರಿಟಿಷ್ ಸೇನಾಬಲದಿಂದ ಅವರು ಅತ್ಯಂತ ಕೆಟ್ಟ ರೀತಿಯಲ್ಲಿ ಅಧೀನ ಸ್ಥಿತಿಗೆ ಪಾತ್ರವಾಗಬೇಕಾಯಿತು. ಅರಬಿಗಳ ಬಗ್ಗೆ ಹೇಳುವುದಾದರೆ, ಸಮಾನ ಸಾಂಸ್ಕೃತಿಕ ಮತ್ತು ಧಾರ್ಮಿಕ ಸಂಬಂಧಗಳಿಂದ ಅವರ ಪ್ರಭುತ್ವವು ಸಹಿಸುವಂತಾಗಿತ್ತು. ಆದರೆ ಬ್ರಿಟಿಷರ ಬಗ್ಗೆ ಹೇಳುವುದಾದರೆ, ಆಳುವವರ ಮತ್ತು ಆಳಲ್ಪಡುವವರ ಮಧ್ಯೆ ಇರುವ ಕಂದಕವು ಸಂಕುಚಿತಗೊಳ್ಳುವುದಕ್ಕೆ ಪ್ರತಿಯಾಗಿ ಇನ್ನಷ್ಟು ಅಗಲವಾಯಿತು. ಯಾವುದಾದರೂ ಸಾಮಾಜಿಕ, ಸಾಂಸ್ಕೃತಿಕ ಅಥವಾ ಧಾರ್ಮಿಕ ಸಮಾನತೆಯ ಮೂಲಕ ಸೇತುಬಂಧನವೂ ಅಸಾಧ್ಯವಾಯಿತು.

ಬ್ರಿಟಿಷರ ಪ್ರಭಾವವು ಕುಂದಿದಾಗ ತೃತೀಯ ಲೋಕದ ದೇಶಗಳನ್ನು ಪರೋಕ್ಷವಾಗಿ ತಮ್ಮ ಅಧೀನಕ್ಕೊಳಪಡಿಸಲು ಕೈಗೊಂಬೆ ಸರಕಾರಗಳ ಮೂಲಕ ಪಾಶ್ಚಿಮಾತ್ಯ ಶಕ್ತಿಗಳು ಪ್ರಯತ್ನಿಸಿದ ಕಾಲಘಟ್ಟವು ಪ್ರಾರಂಭಿಸಿತು. ಈ ಹೊಸ ಸಾಮ್ರಾಜ್ಯಶಾಹಿತ್ವದ ಕಾಲದಲ್ಲಿ ಇರಾನಿನ ಕೈಗೊಂಬೆ ಸರಕಾರವು ಬ್ರಿಟಿಷ್ ಮಡಿಲಿನಿಂದ ಅಮೇರಿಕದ ಮಡಿಲಿಗೆ ವರ್ಗಾಯಿಸಲ್ಪಟ್ಟಿತು. ಈ ರೀತಿ ಇರಾನಿನ ಶಾಹ್ ಅಮೇರಿಕದ ಸಾಮ್ರಾಜ್ಯ ಶಾಹಿಯ ಒಂದು ಲಾಂಛನವಾದರು. ಅಮೇರಿಕದ ಸಾಮ್ರಾಜ್ಯಶಾಹಿಯು ತನ್ನ ತತ್ವಾದರ್ಶದೊಂದಿಗೆ ಸಂಘರ್ಷ ಮಾಡುವ ತತ್ವಾದರ್ಶಗಳಿಗೆ ವಿರುದ್ಧವಾಗಿ ಬೆಂಬಲ ನೀಡುತ್ತದೆ. ಉದಾಹರಣೆಗೆ ಪೋಲೆಂಡ್, ನಿಕರಗ್ವ, ಇಸ್ರಾಯೇಲ್ ಮತ್ತು ದಕ್ಷಿಣ ಆಫ್ರಿಕದಲ್ಲಿ.

ಖುಮೈನಿಯ ಕ್ರಾಂತಿಯಿಂದ ಉರಿದೆದ್ದ ದ್ವೇಷದ ಇಂಧನವು ಅಮೇರಿಕದ ದಬ್ಬಾಳಿಕೆಯಿಂದ ಮಾತ್ರ ಉತ್ಪಾದಿಸಲ್ಪಟ್ಟದ್ದಲ್ಲ. ಭೂಮಿ ಯಲ್ಲಿ ಅಂತರ್ಗತವಾಗಿ ಸಂಗ್ರಹವಾಗುವ ಎಣ್ಣೆ ಮತ್ತು ಗ್ಯಾಸ್‌ಗಳ ಹಾಗೆ ಅದು ನೂರಾರು ವರ್ಷಗಳಿಂದ ಸಂಚಯಗೊಳ್ಳುತ್ತಿತ್ತು. ಮುಖ್ಯ ವಾಗಿ ಗಮನಿಸಬೇಕಾದುದೇನೆಂದರೆ ಈ ದ್ವೇಷವು ಮೂಲತಃ ಧಾರ್ಮಿಕ ವಾದ ಕಾರಣದಿಂದ ಉದ್ಭವಿಸಿದುದಲ್ಲ. ಖುಮೈನಿ, ದ್ವೇಷವನ್ನು ಇಸ್ಲಾಮಿನ ಹೆಸರಿನಲ್ಲಿ ಸ್ವಪ್ರಯೋಜನಕ್ಕಾಗಿ ಉಪಯೋಗಿಸಿಕೊಳ್ಳ ದಿರುತ್ತಿದ್ದರೆ ಯಾವುದಾದರೂ ಕಮ್ಯುನಿಸ್ಟ್ ಧುರೀಣನು ಅದನ್ನು ಸಾಮಾಜಿಕ ನ್ಯಾಯದ ಹೆಸರಿನಲ್ಲಿ ತನ್ನ ಪ್ರಯೋಜನಕ್ಕೆ ಖಂಡಿತವಾಗಿ ಬಳಸುತ್ತಿದ್ದನು. ಕ್ರಾಂತಿಗೆ ಧಾರ್ಮಿಕವಾದ ಅಥವಾ ಧಾರ್ಮಿಕೇತರ ಹೆಸರು ನೀಡಿದರೂ ಅದಕ್ಕೆ ಕಾರಣೀಭೂತವಾದ ಶಕ್ತಿಗಳು ಹಾಗೆಯೇ ಉಳಿಯುತ್ತಿದ್ದವು.

ಖುಮೈನಿ ತನ್ನ ಜನತೆಯಲ್ಲಿ ಕೆಲವರ ವಿರುದ್ಧ ಮಾಡಿದ ಅತಿರೇಕ ವರ್ತನೆಗಳು ಮತ್ತು ಇತರ ದೇಶಗಳಲ್ಲಿ ನಡೆಸಿದ ಸೇಡಿನ ಕೃತ್ಯಗಳು ಇಸ್ಲಾಮಿಕವೆಂದು ಗಣಿಸುವವರೊಡನೆ ನಾನು ಹೀಗೆ ಹಲವಾರು ಸಾರಿ ಹೇಳಿದ್ದೇನೆ: ಇರಾನಿನವರು ತಮ್ಮ ಅತೃಪ್ತಿಯನ್ನು ಕೃತಿಗಿಳಿಸಿದುದಕ್ಕೆ ಇಸ್ಲಾಮ್ ಧರ್ಮದೊಂದಿಗೆ ಯಾವ ಸಂಬಂಧವೂ ಇಲ್ಲ. ಒಂದು ರೀತಿಯಲ್ಲಿ ಹೇಳುವುದಾದರೆ, ಪಾಶ್ಚಿಮಾತ್ಯ ರಾಷ್ಟ್ರಗಳು ಖುಮೈನಿಯನ್ನು ತಮ್ಮ ಶತ್ರು ಎಂದು ತಿಳಿದುಕೊಳ್ಳುವುದಕ್ಕಿಂತ ತಮಗೆ ಉಪಕಾರ ಮಾಡಿದವನೆಂದು ಗಣಿಸಬೇಕು. ನಾನು ಹೀಗೆ ಹೇಳಲು ಕಾರಣ ವೇನೆಂದರೆ, ಖುಮೈನಿ ತನ್ನ ಸ್ವಾರ್ಥಕ್ಕಾಗಿ ಇರಾನಿನ ಪರಿಸ್ಥಿತಿಯನ್ನು ಉಪಯೋಗಿಸಿ ಅದಕ್ಕೆ ಇಸ್ಲಾಮಿನ ಹೆಸರನ್ನು ಕೊಟ್ಟು ಮುಸ್ಲಿಮ್ ಮುಲ್ಲಾಗಳ ಕೂಟದ ಆಡಳಿತೆಯನ್ನು ಬೆಂಬಲಿಸಿ ಅದು ಸ್ಥಾಪಿತ ವಾಗುವಂತೆ ಮಾಡದಿರುತ್ತಿದ್ದರೆ ಇರಾನಿನ ಎಡಪಂಥೀಯ ನಾಯಕರಿಗೆ ಅಧಿಕಾರ ದೊರೆತು ಅವರು ತಮ್ಮ ಸ್ವಾರ್ಥ ಸಾಧನೆಗೆ ಅದನ್ನು ಬಳಸುತ್ತಿದ್ದರು. ಇಂದು ನಾವು ಇರಾನನ್ನು ಅದು ಹಸುರಾಗಿದ್ದು ಅದರಲ್ಲಿ ಕೆಂಪು ಚೆಲ್ಲಿರುವುದಾಗಿ ಕಾಣುತ್ತಿರುವುದಕ್ಕೆ ಪ್ರತಿಯಾಗಿ ನಾವು ಅದನ್ನು ಸಂಪೂರ್ಣ ಕೆಂಪಾಗಿ ಕಾಣುತ್ತಿದ್ದೆವು. ಡಾಕ್ಟರ್ ಮೊಸಾದಿಕ್ ರವರಿಂದ ರಚಿಸಲ್ಪಟ್ಟು ಅವರಿಂದ ತರಬೇತಿ ಪಡೆದ ಕಮ್ಯುನಿಸ್ಟ್ ನಾಯಕತ್ವವು ಶಾಹ್‌ರವರ ಪತನದ ಕಾಲದಲ್ಲಿ ಬಲಹೀನಗೊಂಡು ಇರಾನಿನ ಆ ಚಾರಿತ್ರಿಕ ನವಯುಗ ಸ್ಥಾಪನೆಯ ಕಾಲದಲ್ಲಿ ಯಾವುದೇ ಕ್ರಾಂತಿಕಾರಕ ಮತ್ತು ಸಫಲದಾಯಕ ಕೆಲಸ ಮಾಡಲು ಅಸಮರ್ಥ ವಾಗಿತ್ತು ಎಂದು ಹೇಳುವುದು ಮುಗ್ಧತೆಯಾಗಿದೆ. ವಾಸ್ತವಿಕವಾಗಿ ಕಮ್ಯುನಿಸ್ಟ್ ನಾಯಕತ್ವವು ಚೆನ್ನಾಗಿ ತರಬೇತಿ ಹೊಂದಿದುದೂ ಬೆಂಬಲಿಗ ರಿಂದ ಕೂಡಿದುದೂ ಆಗಿತ್ತು. ಅದು ಸಂದರ್ಭವನ್ನು ಕಾಯುತ್ತಿತ್ತು. ಆಯತುಲ್ಲಾ ಖುಮೈನಿಯವರು ಇಲ್ಲದಿದ್ದಲ್ಲಿ ಇರಾನ್ ಒಂದು ಮಾರ್ಕ್ಸಿಸ್ಟ್ ಆಡಳಿತೆಯ ದೇಶವಾಗುತ್ತಿತ್ತು. ಅಂತಹ ಘಟನೆ ಎಣ್ಣೆಯಿಂದ ಶ್ರೀಮಂತವಾದ ಆದರೆ ಸೈನಿಕ ಶಕ್ತಿಯಲ್ಲಿ ಬಲಹೀನವಾದ ಮಧ್ಯಪೂರ್ವ ದೇಶಗಳಿಗೆ ವಿನಾಶಕಾರವಾಗುತ್ತಿತ್ತು. ಆದುದರಿಂದ ಖುಮೈನಿಯ ಇಸ್ಲಾಂ ಅದು ಎಷ್ಟು ರಕ್ತರಂಜಿತವಾಗಿ ಮತ್ತು ದುಸ್ಸಹವಾಗಿ ಪಶ್ಚಿಮಕ್ಕೆ ತೋರಿಕೆ ಯಾದರೂ – ಒಂದು ಪ್ರಚ್ಛನ್ನ ಅನುಗ್ರಹವಾಗಿದೆ ಎಂದು ಪಶ್ಚಿಮದವರು ಗಣಿಸಬೇಕು. ಆಯತುಲ್ಲಾ ಖುಮೈನಿಯ ಪಾತ್ರವನ್ನು ಈ ಹಿನ್ನೆಲೆಯಲ್ಲಿ ನೋಡಬೇಕು.

ಇರಾಖ್–ಇರಾನ್ ಯುದ್ಧದ ಕುರಿತು ಈ ವಿಷಯದೊಂದಿಗೆ ಪ್ರಸ್ತಾಪಿಸುವುದು ಸಮಂಜಸವೆಂದು ತೋರುವುದಿಲ್ಲವಾದರೂ ಅದು ಇಸ್ಲಾಮಿಕ ಲೋಕಕ್ಕೆ ಸೇರಿದ ಈ ಭಾಗದಲ್ಲಿ ಸೋಟನಾತ್ಮಕ ಸಂಭವಗಳ ಮೇಲೆ ಬೆಳಕು ಚೆಲ್ಲುತ್ತದೆ. ಎರಡೂ ದೇಶಗಳು ಮುಸ್ಲಿಮ್ ಎಂದು ವಾದಿಸುತ್ತವೆ ಮತ್ತು ದ್ವೇಷಿಸಲು, ನಾಶಮಾಡಲು ಮತ್ತು ಪರಸ್ಪರರನ್ನು ನಿರ್ನಾಮಗೊಳಿಸಲು ಬೇಕಾದ ಸ್ಫೂರ್ತಿಗೆ ಇಸ್ಲಾಮಿನ ಪವಿತ್ರನಾಮ ವನ್ನು ಬಳಸುತ್ತವೆ.

ಯುದ್ಧದಲ್ಲಿ ಇರಾಖಿ ವಿಭಾಗದಿಂದ ಕೊಲ್ಲಲ್ಪಟ್ಟ ಸೈನಿಕರನ್ನು ಹುತಾತ್ಮರೆಂದು ಇರಾಖಿ ಸಂಪರ್ಕ ಮಾಧ್ಯಮಗಳು ಹೊಗಳಿದುವು. ಇರಾಖಿಗಳಿಂದ ಕೊಲ್ಲಲ್ಪಟ್ಟ ಇರಾನಿ ಸೈನಿಕರನ್ನು ಅವಿಶ್ವಾಸಿಗಳೆಂದು ಖಂಡಿಸಿ ಅವರನ್ನು ಇರಾಖಿ ಸಂಪರ್ಕ ಮಾಧ್ಯಮಗಳು ನೇರವಾಗಿ ನರಕಕ್ಕೆ ರವಾನಿಸಿದುವು. ಇರಾನಿಗಳಿಂದ ಇದಕ್ಕೆ ತದ್ವಿರುದ್ಧವಾಗಿ ತಮ್ಮವರ ಪರವಾಗಿ ಸಂಪರ್ಕ ಮಾಧ್ಯಮಗಳು ವರ್ತಿಸಿದುವು. ಒಬ್ಬ ಇರಾಖಿ ಸೈನಿಕನು ಇರಾನಿ ಸೈನಿಕನಿಂದ ಕೊಲ್ಲಲ್ಪಟ್ಟಾಗ "ಅಲ್ಲಾಹು ಅಕ್‌ಬರ್"

(ಅಲ್ಲಾಹನು ದೊಡ್ಡವನು) ಎಂಬ ಧ್ವನಿಯಿಂದ ರಣಾಂಗಣವು ಪ್ರತಿಧ್ವನಿಸಿತು. ಇಸ್ಲಾಮ್ ಯಾರ ಪಕ್ಷದಲ್ಲಿತ್ತು? ಆಶ್ಚರ್ಯವಾಗುತ್ತದೆ! ಇವೆಲ್ಲಾ ಘಟನೆಗಳು ಅವರ ಘೋಷಣೆಗಳ ಪೊಳ್ಳುತನವನ್ನು ಸ್ಪಷ್ಟಪಡಿಸುತ್ತವೆ. ಒಂದೇ ಒಂದು ಸತ್ಯಾಂಶವನ್ನು ಯಾವುದೇ ಸಂಶಯವಿಲ್ಲದೆ ಸಾಬೀತುಗೊಳಿಸಬಹುದು. ಉತ್ತಮವಾದೊಂದು ಉದ್ದೇಶಕ್ಕಾಗಿ ತಮ್ಮ ಜೀವಗಳನ್ನು ಬಲಿಯರ್ಪಿಸಿದ ಇರಾಖಿ ಮತ್ತು ಇರಾನಿ ಸೈನಿಕರು ಅವರ ನಾಯಕರಿಂದ ವಂಚನೆಗೆ ಪಾತ್ರರಾಗಿದ್ದರು. ಇಸ್ಲಾಮ್ ಅಲ್ಲಿಯಾಗಲಿ ಇಲ್ಲಿಯಾಗಲಿ ಇರಲಿಲ್ಲ.

ಪವಿತ್ರ ಖುರ್‌ಆನ್ ಹೀಗೆ ಹೇಳುತ್ತದೆ:

**"ಖಂಡಿತವಾಗಿಯೂ ಅಲ್ಲಾಹನು ಸತ್ಯವಿಶ್ವಾಸಿಗಳನ್ನು ಸಂರಕ್ಷಿಸುತ್ತಾನೆ. ಯಾವ ವಂಚಕನನ್ನಾಗಲಿ ಕೃತಘ್ನನನ್ನಾಗಲಿ ಅಲ್ಲಾಹನು ಮೆಚ್ಚುವುದಿಲ್ಲ."**

**"ಯಾರ ವಿರುದ್ಧ ಯುದ್ಧ ಹೂಡಲಾಗಿದೆಯೋ ಅವರಿಗೆ ಪ್ರತಿಯುದ್ಧ ಮಾಡುವ ಅನುಮತಿ ಇದೆ; ಏಕೆಂದರೆ ಅವರು ಆಕ್ರಮಣ ಕ್ಕೊಳಗಾಗಿದ್ದಾರೆ. ನಿಶ್ಚಯವಾಗಿಯೂ ಅವರಿಗೆ ಸಹಾಯ ನೀಡಲು ಅಲ್ಲಾಹನಿಗೆ ಸಾಮರ್ಥ್ಯವಿದೆ."**

**"'ಅಲ್ಲಾಹನೇ ನಮ್ಮ ಪ್ರಭು' ಎಂದು ಹೇಳಿದ ಮಾತ್ರಕ್ಕೆ ಅವರನ್ನು ಅನ್ಯಾಯವಾಗಿ ಅವರ ಮನೆಗಳಿಂದ ಹೊರಗೆ ಅಟ್ಟಲಾಯಿತು. ಅಲ್ಲಾಹನು ಜನರಲ್ಲಿ ಕೆಲವರನ್ನು (ಅವರು ಎಸಗುವ ದೌರ್ಜನ್ಯಗಳನ್ನು) ಬೇರೆ ಕೆಲವರ ಮೂಲಕ ತಡೆಯದಿರುತ್ತಿದ್ದರೆ ಸನ್ಯಾಸಿ ಮಠಗಳೂ ಇಗರ್ಜಿಗಳೂ ಯಹೂದಿ ಮಂದಿರಗಳೂ ಮಸ್‌ಜಿದ್‌ಗಳೂ ನಿರ್ನಾಮವಾಗುತ್ತಿದ್ದುವು. ಅವುಗಳಲ್ಲಿ ಅಲ್ಲಾಹನ ನಾಮ ಹೆಚ್ಚು ಹೆಚ್ಚಾಗಿ ಸ್ಮರಿಸಲ್ಪಡುತ್ತವೆ. ತನಗೆ ನೆರವು ನೀಡುವವರಿಗೆ ಅಲ್ಲಾಹನು ಖಂಡಿತ ವಾಗಿಯೂ ನೆರವಾಗುತ್ತಾನೆ. ನಿಶ್ಚಯವಾಗಿಯೂ ಅಲ್ಲಾಹನು ಸರ್ವ ಸಮರ್ಥನೂ ಪ್ರತಾಪಶಾಲಿಯೂ ಆಗಿದ್ದಾನೆ." (22: 39-41)**

**"ಅವರು ಯುದ್ಧಕ್ಕಾಗಿ ಬೆಂಕಿಯನ್ನು ಹೊತ್ತಿಸಿದಾಗಲೆಲ್ಲಾ ಅಲ್ಲಾಹನು ಅದನ್ನು ನಂದಿಸಿದ್ದಾನೆ. ಭೂಮಿಯಲ್ಲಿ ಗಲಭೆಗೊಂದಲ ಗಳನ್ನು ಹಬ್ಬಿಸಲು ಅವರು ಓಡಾಡುತ್ತಾರೆ. ಆದರೆ ಅಲ್ಲಾಹನು ಗಲಭೆಕೋರರನ್ನು ಇಷ್ಟಪಡುವುದಿಲ್ಲ." (5:65)**

**"ಸತ್ಯವಿಶ್ವಾಸಿಗಳ ಪೈಕಿ ಎರಡು ಗುಂಪುಗಳು ಪರಸ್ಪರ ಹೋರಾಟಕ್ಕಿಳಿದರೆ, ನೀವು ಅವರ ಮಧ್ಯೆ ಸಂಧಾನವೇರ್ಪಡಿಸಿರಿ. ಆ ಬಳಿಕ ಅವರಲ್ಲಿ ಒಂದು ಗುಂಪು ಇನ್ನೊಂದು ಗುಂಪಿನ ಮೇಲೆ ಆಕ್ರಮಣವೆಸಗಿದರೆ, ಅಲ್ಲಾಹನ ಆಜ್ಞೆಯ ಕಡೆಗೆ ಅವರು ಮರಳುವ ತನಕ ಅವರ ವಿರುದ್ಧ ಹೋರಾಡಿರಿ. ಅನಂತರ, ಆ ಗುಂಪು ಮರಳಿದರೆ ಅವರ ಮಧ್ಯೆ ನ್ಯಾಯಯುತವಾಗಿ ಸಂಧಾನ ಮಾಡಿಸಿರಿ ಹಾಗೂ ನ್ಯಾಯೋಚಿತವಾಗಿ ವರ್ತಿಸಿರಿ. ನಿಶ್ಚಯವಾಗಿಯೂ ಅಲ್ಲಾಹನು ನ್ಯಾಯವಂತರನ್ನು ಪ್ರೀತಿಸುತ್ತಾನೆ."**

**"ಸತ್ಯವಿಶ್ವಾಸಿಗಳು (ಪರಸ್ಪರ) ಸಹೋದರರು. ಆದುದರಿಂದ ನಿಮ್ಮ ಸಹೋದರರ ಮಧ್ಯೆ ರಾಜಿ ಮಾಡಿಸಿರಿ. ನಿಮ್ಮ ಮೇಲೆ ಕೃಪೆ ಬೀರಲ್ಪಡಲಿಕ್ಕೋಸ್ಕರ ಅಲ್ಲಾಹನಿಗೆ ಭಯಭಕ್ತಿ ತೋರಿಸಿರಿ." (49:10, 11)**

ಯುದ್ಧಕಾಲದಲ್ಲಿ ಪವಿತ್ರ ಖುರ್‌ಆನಿನ ಈ ಉಪದೇಶಗಳನ್ನು ಯುದ್ಧಮಾಡುವ ದೇಶಗಳು ಕಡೆಗಣಿಸಿದುವು. ಹಜ್ಜ್ ಯಾತ್ರೆಯ ಕಾಲದಲ್ಲಿ ಇರಾನಿನ ಸರಕಾರವು ಖುಮೈನಿಯ ಕ್ರಾಂತಿಯ ಸಂದೇಶವನ್ನು ಯಾತ್ರಿಕರ ಮೂಲಕ ಮುಸ್ಲಿಮ್ ಲೋಕಕ್ಕೆ ತಲಪಿಸಲು ಪ್ರಯತ್ನ ಮಾಡಿತು. ಆದರೆ ದುರದೃಷ್ಟಕರವಾಗಿ ಈ ಪ್ರಯತ್ನಗಳಿಂದ ಕೆಲವು ಸಾರಿ ಮುಸ್ಲಿಮರಿಗೆ ಉಪದ್ರವಗಳುಂಟಾಗುವ ಕೆಟ್ಟ ಘಟನೆಗಳು ಸಂಭವಿಸಿದುವು. ಉದಾಹರಣೆಗೆ 1987ರ ಹಜ್ಜ್ ಕಾಲದಲ್ಲಿ ಮಕ್ಕದಲ್ಲಿ ನಡೆದ ಹಿಂಸಾಚಾರ ಮತ್ತು ಅದರ ವಿರುದ್ಧ ಸೌದಿ ಅರೇಬಿಯಾ ಸರಕಾರ ಕೈಗೊಂಡ ಪ್ರತಿರೋಧ ಕಾರ್ಯಾಚರಣೆಗಳು ಪಾಶ್ಚಿಮಾತ್ಯ ಸಂಪರ್ಕ ಮಾಧ್ಯಮಗಳಲ್ಲಿ ಹೆಚ್ಚಿನ ಚರ್ಚೆಗೆ ಪಾತ್ರವಾಯಿತು. ಆದರೆ ಪವಿತ್ರ ಖುರ್‌ಆನ್ ಮುಸ್ಲಿಮರಿಗೆ ಹೀಗೆ ಉಪದೇಶ ನೀಡುತ್ತದೆ:

**"ಮಸ್‌ಜಿದುಲ್ ಹರಾಮ್ (ಕಅ್‌ಬ) ಸಮೀಪದಲ್ಲಿ ನೀವು ಅವರೊಡನೆ ಯುದ್ಧ ಮಾಡಬಾರದು. ಅಲ್ಲಿ ಅವರು ನಿಮ್ಮೊಡನೆ ಯುದ್ಧ ಪ್ರಾರಂಭಿಸಿದರೆ ಹೊರತು. (ಅಲ್ಲಿ ಸಹ) ಅವರು ನಿಮ್ಮೊಡನೆ ಯುದ್ಧ ಮಾಡಿದರೆ ನೀವು ಅವರನ್ನು ವಧಿಸಿರಿ. (ದುಷ್ಕರ್ಮಿಗಳಾದ) ಈ ಅವಿಶ್ವಾಸಿಗಳಿಗೆ ಇದೇ ಶಿಕ್ಷೆ." (2:192)**

ಇಸ್ರಾಯೇಲ್ ದೇಶಕ್ಕೆ ಬಹಿರಂಗವಾಗಿ ಅಥವಾ ರಹಸ್ಯವಾಗಿ ಸಹಾಯ ಮಾಡುತ್ತಿದ್ದ ಪ್ರಮುಖ ಶಕ್ತಿಗಳಿಗೆ (ಅವುಗಳಲ್ಲಿ ಮುಖ್ಯವಾದುದು ಅಮೇರಿಕ) ಖುಮೈನಿ ಮತ್ತು ಖುಮೈನಿಸಮಿನಿಂದ ಲಭಿಸಿದ ಒಂದು ಪ್ರಯೋಜನವೇನೆಂದರೆ ಖುಮೈನಿ ಇರಾಖ್ – ಇರಾನ್ ಯುದ್ಧವನ್ನು ಮುಂದುವರಿಸುವಂತೆ ಅವರು ಮಾಡಿದರು. ತಮ್ಮ ಬದಿಯಲ್ಲಿರುವ ಅತ್ಯಂತ ಉಪದ್ರವಕಾರಿ ಮುಳ್ಳಾದ ಇಸ್ರಾಯೇಲಿನ ಕಡೆಗೆ ಗಮನಹರಿಸದೆ ಅನ್ಯ ವಿಷಯದ ಕಡೆಗೆ ಮುಸ್ಲಿಮ್ ರಾಷ್ಟ್ರಗಳು ಗಮನಹರಿಸುವಂತೆ ಅದು ಮಾಡಿತು. ಬಾಹ್ಯಶತ್ರುವಿನ ಕಡೆಗೆ ಗಮನಹರಿಸುವುದನ್ನು ಕೈಬಿಟ್ಟ ಮುಸ್ಲಿಮ್ ರಾಷ್ಟ್ರಗಳಲ್ಲಿ ಪರಸ್ಪರ ಅಪನಂಬಿಕೆ ಪ್ರಾರಂಭವಾಯಿತು.

ಮಧ್ಯಪೂರ್ವ ದೇಶಗಳಲ್ಲಿ ಅನೈಕ್ಯ ತಲೆದೋರಿತು. ಇಸ್ರಾಯೇಲ್ ಬಗ್ಗೆ ಇದ್ದ 'ಭಯ' ಕಡೆಗಣಿಸಲ್ಪಟ್ಟಿತು. ಅದು ಚಿಕ್ಕ ಮತ್ತು ಅಗೋಚರ ವಿಪತ್ತೆಂದೂ ಅದರ ಕುರಿತು ಮುಂದೆ ಗಮನಿಸಬಹುದೆಂದೂ ಅವರು ಯೋಚಿಸಿದರು. ಒಂದು ವಿಭಾಗದ ಮುಸ್ಲಿಮರಿಗ ಇನ್ನೊಂದು ವಿಭಾಗದ ಮುಸ್ಲಿಮರಿಂದ ಉಂಟಾಗುವ ವಿಪತ್ತಿನ ಭಯವು ಹೆಚ್ಚು ಒತ್ತಡ ಉಂಟುಮಾಡಿತು. ಬಾಹ್ಯಶತ್ರುವಿನ ಬಗ್ಗೆ ಅನಂತರ ಕ್ರಮ ಕೈಗೊಳ್ಳಬಹುದೆಂದು ಅವರು ಯೋಚಿಸಿದರು. ಆದರೆ ಸಾಮಾನ್ಯ ಸೈನಿಕನನ್ನು ವಂಚಿಸಲು "ಇಸ್ಲಾಮ್ ಅಪಾಯಕ್ಕೆ ತುತ್ತಾಗಿದೆ" ಎಂದು ಎರಡು ಪಕ್ಷದ ಜನರು ಘೋಷಿಸಲು ತೊಡಗಿದರು. ವಾಸ್ತವಿಕವಾಗಿ ಸಂಭವಿಸಿದುದು ಇದಾಗಿದೆ. ಹಿಂದಿನ ಕಾಲದ ಸ್ಪರ್ಧೆಗಳು ಮತ್ತು ದ್ವೇಷಾಸೂಯೆಗಳು ಪುನರುತ್ಥಾನಗೊಂಡವು. ಅರಬಿ ಮತ್ತು ಅರಬೀಯೇತರ ಅಜ್‌ಮಿಗಳಾದ ಇರಾನಿಯರ ಮಧ್ಯೆ ಹೋರಾಟವೆಂಬಂತೆ ಚಿತ್ರಿಸಲ್ಪಟ್ಟವು. ಆ ಯುದ್ಧ ಇಸ್ಲಾಮೀ ಮತ್ತು ಇಸ್ಲಾಮೀಯೇತರ ಸೈನ್ಯಗಳ ಮಧ್ಯೆ ನಡೆದ ಯುದ್ಧವಾಗಿರಲಿಲ್ಲ ಅಥವಾ ಶಿಯಾ–ಸುನ್ನಿಗಳ ಮಧ್ಯೆ ಯುದ್ಧವಾಗಿರಲಿಲ್ಲ. ಅದು ಸಾವಿರಾರು ವರ್ಷಗಳಿಂದ ಬಾಕಿಯಾಗಿ ಉಳಿದ ವೈರದ ಪುನರ್ ಚಿತ್ರೀಕರಣವಾಗಿತ್ತು. ಇರಾಖ್ ಮತ್ತು ಸೌದಿ ಅರೇಬಿಯಾವನ್ನು ವಿಮರ್ಶಿಸುತ್ತಾ ಇದ್ದ ಅರಬಿಗಳು ಅನಿವಾರ್ಯವಾಗಿ ಇದೇ ಕಾರಣದಿಂದ ಇರಾಖ್ ಪರವಾಗಿ ವರ್ತಿಸಲಾರಂಭಿಸಿದರು. ಇರಾನ್‌ನಿಂದ ಬೆದರಿಕೆಯು ಹೆಚ್ಚಾಗುತ್ತಿರುವ ಕಾರಣ ಅರಬಿಗಳು ತಮ್ಮ ಸಂರಕ್ಷಣೆಗಾಗಿ ಹೀಗೆ ಮಾಡಬೇಕಾಯಿತು.

ಇಸ್ಲಾಮ್ ಧರ್ಮದ ಆಗಮಕ್ಕೆ ಮೊದಲು ಅರಬಿಗೋತ್ರಗಳು ಚಿಕ್ಕಮಟ್ಟ ಕಾರಣಗಳಿಂದ ಪರಸ್ಪರ ದೀರ್ಘಕಾಲ ಹೋರಾಡುತ್ತಿದ್ದರು. ಇಸ್ಲಾಮ್ ಇದನ್ನು ಕೊನೆಗೊಳಿಸಿತು. ಅದು ಮುಸ್ಲಿಮರನ್ನು ಭ್ರಾತೃಗಳ ಒಂದು ಸಂಘವಾಗಿ ರೂಪಿಸಿತು. ಅಲ್ಲಿ ಸ್ಪರ್ಧೆಯಾಗಲಿ ತಾರತಮ್ಯ ಭಾವನೆಗಳಾಗಲಿ ಇರಲಿಲ್ಲ. ಆದರೆ ಮುಸ್ಲಿಮರು ಇಸ್ಲಾಮ್ ಧರ್ಮದ ಉಪದೇಶಗಳನ್ನು ಅವಲಂಬಿಸಿ ಜೀವಿಸುವುದನ್ನು ಬಿಟ್ಟುಬಿಟ್ಟಾಗ ಸಹೋದರರು ಶತ್ರುಗಳಾದರು ಮತ್ತು ಗೋತ್ರದ ಸಂಘರ್ಷಗಳು ಮುಂದೆ

ಬಂದುವು. ಆದುದರಿಂದ ನಾವು ಇಂದು ಇಸ್ಲಾಮಿಕ ಲೋಕದಲ್ಲಿ ಕಾಣುವುದು ಇಸ್ಲಾಮಿಕ ನಡೆವಳಿಕೆಗಳನ್ನಲ್ಲ. ಅಲ್ಲಿ ನಾವು ಹಿಂದಿನ ಕಾಲದ ಗೋತ್ರ ಸಂಘರ್ಷಗಳ ಪುನರುಜ್ಜೀವನವನ್ನು ಕಾಣುತ್ತೇವೆ.

ಬೃಹತ್ ಶಕ್ತಿಗಳು ಯುದ್ಧವನ್ನು ಖಂಡಿಸಿ ಯುದ್ಧವು ಕೊನೆಗೊಳ್ಳಬೇಕೆಂದು ಹೇಳುತ್ತಾ ಇದ್ದರೂ ಆ ಯುದ್ಧ ಮುಂದುವರಿಸಲು ಆಯುಧಗಳನ್ನು ಇರಾನಿಗೂ ಇರಾಖಿಗೂ ಪೂರೈಕೆ ಮಾಡುತ್ತಾ ಇದ್ದದ್ದು ಅವರೇ ಆಗಿದ್ದರು. ಯುದ್ಧವಿಮಾನಗಳು, ರೋಕೆಟ್‌ಗಳು, ಕ್ಷಿಪಣಿಗಳು, ಕೆನನ್‌ಗಳು, ಟ್ಯಾಂಕ್ ಮತ್ತು ಇತರ ಸೈನಿಕವಾಹನಗಳು ಹಾಗೂ ವಿನಾಶಕಾರಿ ಆಯುಧಗಳು ಧಾರಾಳವಾಗಿ ಎರಡು ಪಕ್ಷಗಳಿಗೂ ಪೂರೈಕೆ ಮಾಡಲಾಯಿತು. ಅವುಗಳಲ್ಲಿ ಯಾವುದನ್ನೂ ಇರಾನ್ ಮತ್ತು ಇರಾಖ್ ಸ್ವತಃ ಉತ್ಪಾದಿಸಿದ್ದು ಅಲ್ಲ. ಬಹಿರಂಗವಾಗಿ ಅಥವಾ ರಹಸ್ಯವಾಗಿ ಮಧ್ಯಪ್ರಾಚ್ಯದ ಎಣ್ಣೆ ಮತ್ತು ಪಾಶ್ಚಿಮಾತ್ಯ ಆಯುಧಗಳು ಕೈಗಳಿಂದ ಕೈಗಳಿಗೆ ಬದಲಾಯಿಸಲ್ಪಟ್ಟವು. ಯುದ್ಧದ ಬೆಂಕಿಗೆ ಇಂಧನವನ್ನು ಪೂರೈಸಿದುದು ಇರಾಖ್ ಮತ್ತು ಇರಾನ್ ಉತ್ಪಾದಿಸಿದ ಎಣ್ಣೆಯನ್ನು ಪಾಶ್ಚಿಮಾತ್ಯ ಮತ್ತು ಮುಸ್ಲಿಮೇತರ ಪೌರ್ವಾತ್ಯ ದೇಶಗಳು ಆಯುಧಗಳನ್ನಾಗಿ ಪರಿವರ್ತಿಸಿ ನೀಡುವುದರ ಮೂಲಕವಾಗಿದೆ. ಪಶ್ಚಿಮದ ರಾಷ್ಟ್ರದ ಬಗ್ಗೆ ಹೇಳುವುದಾದರೆ, ಅವರ ವ್ಯಾಪಾರ ಬಹಳ ಲಾಭಕರವಾಗಿತ್ತು. ಅವರು ತಮ್ಮ ಹಳೆಯ ಮತ್ತು ಬಳಕೆಯಲ್ಲಿಲ್ಲದ ಆಯುಧಗಳನ್ನು ಎಣ್ಣೆಗೆ ಬದಲಾಗಿ ನೀಡಿದರು. ಇದಕ್ಕಿಂತ ಹೆಚ್ಚು ಲಾಭಕರವಾದ ವ್ಯಾಪಾರ ಬೇರೆ ಏನಿದೆ?

ನಾವು ಇದರ ಮೊದಲು ಬರೆದಂತೆ, ಕಠಿಣ ಶತ್ರುವಾದ ಇಸ್ರಾಯೇಲನ್ನು ಸಂಪೂರ್ಣವಾಗಿ ಮರೆತು ಬಿಡಲಾಯಿತು. ಮುಸ್ಲಿಮರು ಮುಸ್ಲಿಮರನ್ನು ಕೊಂದರು. ಮುಸ್ಲಿಮ್ ಲೋಕದ ಎಣ್ಣೆಯು ಮುಸ್ಲಿಮ್ ದೇಶಗಳ ಆರ್ಥಿಕ ವ್ಯವಸ್ಥೆಯನ್ನು ಸುಟ್ಟುಹಾಕಿ ನಾಶಮಾಡಲು ಬಳಸಲ್ಪಟ್ಟಿತು. ಹಿಂದಿನ ದಶಕದಲ್ಲಿ ಕಷ್ಟಪಟ್ಟು ಗಳಿಸಲಾದ ಆರ್ಥಿಕ ಪ್ರಗತಿಯು ನಾಶವಾಯಿತು. ಪ್ರಗತಿ ಮತ್ತು ಅಭಿವೃದ್ಧಿಗೆ ಬದಲಾಗಿ, ಇರಾನ್ ಮತ್ತು ಇರಾಖ್ ಹಿಮ್ಮುಖವಾಗಿ ಚಲಿಸಲು ತೊಡಗಿದುವು.

ಎಲ್ಲಾ ಯುದ್ಧಗಳು ಆರ್ಥಿಕ ಪ್ರಗತಿ, ಭೌತಿಕ ಮತ್ತು ಮಾನವೀಯ ಸಂಪನ್ಮೂಲ, ಸಾಂಸ್ಕೃತಿಕ ಮತ್ತು ಔದ್ಯೋಗಿಕ ಬೆಳವಣಿಗೆಯ ಮೇಲೆ ವಿನಾಶಕರವಾದ ಪ್ರಭಾವ ಬೀರುತ್ತವೆ. ಆದರೆ ಅಭಿವೃದ್ಧಿ ಹೊಂದಿದ ದೇಶಗಳ ಬಗ್ಗೆ ಹೇಳುವುದಾದರೆ, ಯುದ್ಧಕ್ಕೆ ಸಂಬಂಧಿಸಿದ ಉದ್ಯಮಿಗಳು ತಮ್ಮ ಸ್ವಂತ ಸಂಪನ್ಮೂಲಗಳಿಂದ ಅಥವಾ ತಮ್ಮ ಮಿತ್ರರ ಸಂಪನ್ಮೂಲಗಳಿಂದ ಬೆಂಬಲ ಪಡೆಯುತ್ತವೆ. ಯುದ್ಧದ ಆವಶ್ಯಕತೆಗಳು, ಒತ್ತಡಗಳು ಮತ್ತು ಅವರ ಬದುಕಿಗಿರುವ ಹೋರಾಟವು ಅವರ ಸಂಪನ್ಮೂಲಗಳನ್ನು ಕರಗಿಸುವುದಿಲ್ಲ. ಯುದ್ಧವು ಅವರ ವೈಜ್ಞಾನಿಕ ಜ್ಞಾನವನ್ನು ಮತ್ತು ತಾಂತ್ರಿಕತೆಯನ್ನು ಒಂದು ಚಿಕ್ಕ ಕಾಲಾವಧಿಯಲ್ಲಿ ವರ್ಧಿಸುತ್ತದೆ. ಯುದ್ಧ ಕಾಲದಲ್ಲಿ ಗಳಿಸಿದ ಅನುಭವವು ಯುದ್ಧ ಮುಗಿದ ಕೂಡಲೇ ಆರ್ಥಿಕ ವ್ಯವಸ್ಥೆಯನ್ನು ಪುನರ್ ನಿರ್ಮಿಸಲು ಮತ್ತು ಅದನ್ನು ಅತ್ಯಧಿಕವಾಗಿ ಮುಂದೆ ತಳ್ಳಲು ಬಳಸಲ್ಪಡುತ್ತದೆ. ವಿನಾಶಕಾರಿ ಯುದ್ಧಗಳು ಹೊಸ ನಿರ್ಮಾಣಕಾರಿ ವಿಚಾರಗಳಿಗೆ ಒತ್ತು ನೀಡುತ್ತವೆ ಹಾಗೂ ವೈಜ್ಞಾನಿಕ ಮತ್ತು ಔದ್ಯಮಿಕ ಪ್ರಗತಿಗೆ ಹೇತುವಾಗುತ್ತವೆ. ಆದುದರಿಂದ ದೀರ್ಘವಾದ ಯುದ್ಧದಿಂದ ಭೌತಿಕವಾಗಿ ಬಡವಾದರೂ ಅವು ಬೇಗನೆ ಉತ್ತಮ ಭವಿಷ್ಯ ರೂಪಿಸುವ ರೀತಿಯಲ್ಲಿ ಪ್ರಗತಿ ಗಳಿಸುತ್ತವೆ.

ಆದರೆ ವೈಜ್ಞಾನಿಕವಾಗಿ ಮತ್ತು ಆರ್ಥಿಕವಾಗಿ ಹಿಂದುಳಿದ ಆದರೆ ಯುದ್ಧದ ಸುಖಭೋಗವನ್ನು ಬಯಸುವ ರಾಷ್ಟ್ರಗಳ ಸ್ಥಿತಿ ಹೀಗೆ ಅಲ್ಲ. ಅವರಿಗಿರುವ ಏಕಮಾತ್ರ ಅವಕಾಶ ತಮ್ಮದೆಲ್ಲವನ್ನೂ ಮಾರಾಟ ಮಾಡುವುದು ಮತ್ತು ತಮ್ಮ ಭವಿಷ್ಯವನ್ನು ಸಹ ವೈಜ್ಞಾನಿಕವಾಗಿ ಮತ್ತು ಔದ್ಯಮಿಕವಾಗಿ ಅಭಿವೃದ್ಧಿ ಹೊಂದಿದ ರಾಷ್ಟ್ರಗಳಿಗೆ ಆಯುಧಗಳಿಗಾಗಿ ಒತ್ತೆ ಇಡುವುದಾಗಿದೆ. ಇರಾನ್-ಇರಾಖ್ ಯುದ್ಧದ ಹಾಗೆ ಅಷ್ಟು ದೀರ್ಘ ಕಾಲ ಯುದ್ಧವನ್ನು ತೃತೀಯ ವಿಶ್ವದ ದೇಶಗಳಲ್ಲಿ ನಡೆಸುವುದು ಮೇಲಿನಂತೆ ಮಾಡದೆ ಅಸಾಧ್ಯವಾಗಿದೆ. ಈ ದೇಶಗಳು ಪರಸ್ಪರ ಮಾಡುವ ದೌರ್ಜನ್ಯಗಳಿಗೆ ಮತ್ತು ಬೇರೆ ದೇಶಗಳ ವಿರುದ್ಧ ಇವು ಕೆಲವೊಮ್ಮೆ ಮಾಡುವ ದೌರ್ಜನ್ಯಗಳಿಗೆ ಈ ದೇಶಗಳಿಗೆ ಆಯುಧಗಳನ್ನು ಪೂರೈಸುವ ದೇಶಗಳು ಸಹ ಸ್ವಲ್ಪ ಮಟ್ಟಿಗೆ ಜವಾಬ್ದಾರಿಯಾಗಿವೆ.

ಯುದ್ಧ ಮುಗಿದ ನಂತರ ಎಲ್ಲಾ ಸಾಲಗಳನ್ನು ಪಾವತಿ ಮಾಡಿ, ಸಾಮಗ್ರಿಗಳ ಬದಲಾವಣೆಗಳನ್ನು ಲೆಕ್ಕಕ್ಕೆ ತೆಗೆದುಕೊಂಡ ನಂತರ ಯುದ್ಧದಲ್ಲಿ ಲಾಭ ಪಡೆದವರಾರು? ಎಂಬ ಪ್ರಶ್ನೆ ಕೇಳುವುದು ಸಮಂಜಸವಾಗಿದೆ.

ಇಸ್ಲಾಮ್ ಧರ್ಮವು ಬರ್ಬರ ಧರ್ಮವೆಂದೂ ಅದು ಭಯೋತ್ಪಾದನೆಯನ್ನು ಬೆಂಬಲಿಸುತ್ತದೆ ಎಂದೂ ಅದು ದ್ವೇಷವನ್ನೂ ಅಸಹಿಷ್ಣುತೆಯನ್ನೂ ಪ್ರಚಾರಮಾಡುತ್ತದೆ ಎಂದೂ ಮತ್ತು ಅದು ತನ್ನ ಅನುಯಾಯಿಗಳನ್ನು ಪರಸ್ಪರ ವಿರೋಧಿಸಿ ರಕ್ತಹರಿಸುವ ಗುಂಪುಗಳಾಗಿ ವಿಭಜಿಸುತ್ತದೆ ಎಂದೂ ಖಂಡಿಸಲಾಗುವುದನ್ನು ನಾವು ನೋಡಿದ್ದೇವೆ. ಇದು ಆಶ್ಚರ್ಯಕರವಲ್ಲ. ಆದರೆ ಮುಸ್ಲಿಮ್ ಸಮುದಾಯದ ಪರಸ್ಪರ ಹೋರಾಡುವ ದುರದೃಷ್ಟಕರ ಗುಂಪುಗಳಿಗೆ ವಿನಾಶಕಾರಿ ಆಯುಧಗಳನ್ನು ಪೂರೈಕೆ ಮಾಡುವ ಮತ್ತು ಸಂಚುಗಳನ್ನು ರೂಪಿಸಿ ಕೃತಿಗಿಳಿಸುವವರಿಗೆ ಈ ಯುದ್ಧಗಳ ಅಂತಿಮ ಲಾಭಗಳು ಲಭಿಸುತ್ತವೆ ಎಂಬುದೊಂದು ಸತ್ಯವಾಗಿದೆ.

"ಇಸ್ಲಾಮಿಕ ಭಯೋತ್ಪಾದನೆ" ಎಂಬ ಪದ ಪ್ರಯೋಗದೊಂದಿಗೆ ಪಾಶ್ಚಿಮಾತ್ಯ ವಾರ್ತಾ ಮಾಧ್ಯಮಗಳು ಕಳೆದ ದಶಕದಲ್ಲಿ ಪ್ರಚಾರ ಗೊಳಿಸಿರುವ ಇನ್ನೊಂದು ಪದಪ್ರಯೋಗ "ಇಸ್ಲಾಮಿಕ ಅಣು ಬಾಂಬ್" ಎಂದಾಗಿದೆ. ಪಾಕಿಸ್ತಾನದ ಬಳಿ ಈ ಬಾಂಬ್ ಇದೆ ಎಂದು ಹೇಳಲಾಗುತ್ತಿದೆ. "ಇಸ್ಲಾಮಿಕ ಭಯೋತ್ಪಾದನೆ" ಎಂಬ ಪ್ರಯೋಗದೊಂದಿಗೆ "ಇಸ್ಲಾಮಿಕ ಅಣುಬಾಂಬ್" ಪ್ರಯೋಗ ಇರಬೇಕಾದುದೇ ಆಗಿದೆ. ಯುದ್ಧಕ್ಕೆ ಸಂಬಂಧಿಸಿದ ಬೇರೆ ಕೆಲವು ಸಾಂಕೇತಿಕ ಪದಗಳಿಗೂ ಇಸ್ಲಾಮಿಕವೆಂಬ ಪ್ರತ್ಯಯವನ್ನು ಅವರು ಸೇರಿಸಲೂಬಹುದು. ಆದರೆ "ಕ್ರೈಸ್ತ ಅಣು ಬಾಂಬ್", "ಯಹೂದಿ ಅಣುಬಾಂಬ್", "ಹಿಂದೂ ಅಣುಬಾಂಬ್", "ವರ್ಣದ್ವೇಷಿ ಅಣುಬಾಂಬ್" ಅಥವಾ "ಶಿಂಟೋ ಅಣುಬಾಂಬ್" ಎಂಬ ಪದ ಪ್ರಯೋಗಗಳನ್ನು ನಮಗೆ ಏಕೆ ಕೇಳಿಸುತ್ತಾ ಇಲ್ಲ? ಬೇರೆ ಧರ್ಮಗಳೊಂದಿಗೆ ಸಹ ಸಾವಿರಾರು ಬಾಂಬ್‌ಗಳನ್ನು ಅನ್ವಯಿಸಿ ಹೇಳಲು ಸಾಧ್ಯವಿರುವಾಗ ಪಾಶ್ಚಿಮಾತ್ಯ ವಾರ್ತಾಮಾಧ್ಯಮಗಳು ಒಂದು ಧರ್ಮವನ್ನು ಮಾತ್ರ ಆಯ್ಕೆ ಮಾಡಿ ಆ ಧರ್ಮದ ಬಾಂಬನ್ನು (ಇಸ್ಲಾಮಿಕ ಬಾಂಬ್) ಮಾತ್ರ ಖಂಡಿಸಲು ಕಾರಣವೇನು?

ಈ ಮೊದಲು ನಾವು ಬರೆದಂತೆ ಕಾರ್ಯಪ್ರವೃತ್ತವಾಗಿರುವ ಶಕ್ತಿಗಳು ಮೂಲತಃ ಧಾರ್ಮಿಕ ಸ್ವರೂಪದವುಗಳಲ್ಲ. ಭಯೋತ್ಪಾದಕ ಶಕ್ತಿಗಳು ಮುಸ್ಲಿಮ್ ಗುಂಪುಗಳಲ್ಲಿ ಮತ್ತು ದೇಶಗಳಲ್ಲಿ ಕಾರ್ಯಪ್ರವೃತ್ತವಾಗಿರುವಾಗ ಅವುಗಳನ್ನು "ಇಸ್ಲಾಮಿಕ" ಎಂದು ಹೆಸರಿಸಲು ಕಾರಣವೇನು? ಇರಾಖ್-ಇರಾನ್ ಯುದ್ಧದಲ್ಲಿ ಹೋರಾಡುವ ದೇಶಗಳಿಗೆ ಆಯುಧಗಳನ್ನು ನಿರಂತರ ಪೂರೈಕೆಮಾಡಿ ದೀರ್ಘಕಾಲ ಯುದ್ಧವು ಮುಂದುವರಿಯುವಂತೆ ಮಾಡಿದ ಶಕ್ತಿಗಳು ಬಹಳ ಹೆಚ್ಚು

ಜೀವ ಮತ್ತು ಸ್ವತ್ತಿನ ನಾಶಕ್ಕೆ ಮತ್ತು ಅದರ ಫಲವಾಗಿ ಮನುಷ್ಯರು ಅನುಭವಿಸಬೇಕಾಗಿ ಬಂದ ವರ್ಣಿಸಲು ಅಸಾಧ್ಯವಾದ ಕಷ್ಟನಷ್ಟಗಳಿಗೆ ಹೊಣೆಗಾರರಾಗುವುದರಿಂದ ತಪ್ಪಿಸಿಕೊಳ್ಳಲಾರರು. ಈ ಶಕ್ತಿಗಳ ಅಗೋಚರ ಗುರಿಯೇನಾಗಿದ್ದರೂ ಅವರು ಖುಮೈನಿಸಂ ದೀರ್ಘಕಾಲ ಬಾಳುವಂತೆ ಮಾಡುವರು. ಯುದ್ಧ ಮಾಡುವ ದೇಶಗಳನ್ನು ಅವರ ಸ್ವಂತ ಸೊರಗಿದ ಸಂಪನ್ಮೂಲದೊಂದಿಗೆ ಬಿಟ್ಟು ಬಿಡುತ್ತಿದ್ದರೆ ಖುಮೈನಿಸಂ ಅವನತಿ ಹೊಂದಲು ಪ್ರಾರಂಭಿಸುತ್ತಿತ್ತು.

ಯುದ್ಧವು ಬೇರೆ ವಿಷಯಗಳೊಂದಿಗೆ ಇರಾನಿಯರಲ್ಲಿ ರಾಷ್ಟ್ರೀಯ ಭಾವನೆಯನ್ನು ಪುನರುಜ್ಜೀವನಗೊಳಿಸಿ ಅದು ಬಲಿಷ್ಠವಾಗುವಂತೆ ಮಾಡಿತು. ಅದರ ಫಲ ಸ್ವರೂಪವಾಗಿ ಇರಾನಿಯರು ಆಂತರಿಕ ಸಮಸ್ಯೆಗಳಿಂದ ತಮ್ಮ ಗಮನವನ್ನು ಬಾಹ್ಯ ಶತ್ರುವಿನ ಬೆದರಿಕೆಗಳ ಕಡೆಗೆ ತಿರುಗಿಸಿದರು. ಯುದ್ಧವಿಲ್ಲದಿರುತ್ತಿದ್ದರೆ ಇರಾನಿಯರು ಬಹಿರಂಗ ವಾಗಿ ಅಸಹಿಷ್ಣುವಾಗಿರುವ ಖುಮೈನಿಯರ ಮತ ಶ್ರದ್ಧೆಯಿಂದ ಬಹಳ ಬೇಗನೆ ಭ್ರಮನಿರಸನಕ್ಕೊಳಗಾಗುತ್ತಿದ್ದರು. ಇರಾನಿನ ಒಳಗೆ ಕ್ರಾಂತಿಯ ಮೌಲ್ಯಮಾಪನ ಮಾಡುವ ಪ್ರಕ್ರಿಯೆ ಬಗ್ಗೆ ಒಲವು ಬಹಳ ಬಲಯುತ ವಾಗಿವೆ. ಅದರ ಸಾಧಕ ಬಾಧಕಗಳನ್ನು ಅರಿಯಲೆತ್ನಿಸಲಾಗುತ್ತಿದೆ. ಗಣ್ಯರಲ್ಲಿ ಬಹುತೇಕ ಜನರನ್ನು ನಾಶಮಾಡಲಾಗಿದ್ದರೂ ಬಾಕಿಯಾಗಿ ಉಳಿದಿರುವ ಬುದ್ಧಿಜೀವಿಗಳು ಖುಮೈನಿಯ ಕ್ರಾಂತಿ ಯಿಂದುಂಟಾದ ಲಾಭನಷ್ಟಗಳನ್ನು ಪುನರ್ಮೌಲ್ಯಮಾಪನ ನಡೆಸುವರು. ಇರಾನಿಗೆ ಹೊಸದಾದೊಂದು ವ್ಯವಸ್ಥೆಯನ್ನು ಕಂಡುಹಿಡಿಯುವ ಪ್ರಕ್ರಿಯೆಯು ಆಸನ್ನವಾಗಿದೆ.

ಯುದ್ಧ ಕಾಲದಲ್ಲಿ ಸಾಮಾನ್ಯ ಜನರ ಮನೋಸ್ಥೈರ್ಯವನ್ನು ಕಾಪಾಡುವ ಆವಶ್ಯಕತೆಯು ಯುದ್ಧದ ಉತ್ಸುಕತೆಯಿಂದ ಈಡೇರಿಸಲ್ಪಡುತ್ತಿತ್ತು. ಇರಾನ್ ಮನೋಸ್ಥೈರ್ಯವನ್ನು ಕಳೆದುಕೊಂಡರೆ ಅದು ಮಹಾ ದೊಡ್ಡ ಅನಿಶ್ಚಿತತೆಯ ದಿನವಾಗುವುದು. ಈಗಿನ ಸರಕಾರ ಎಡ ಅಥವಾ ಬಲ ಶಕ್ತಿಗಳಿಂದ ಅಥವಾ ಮಧ್ಯಮಾರ್ಗಿಗಳಲ್ಲಿ ಉಳಿದವರಿಂದ ಬದಲಾಯಿಸಲ್ಪಟ್ಟರೂ ಸರಕಾರದ ನಿಯಂತ್ರಣ ಪಡೆಯಲು ಬಹಳ ದೊಡ್ಡ ಹೋರಾಟ ನಡೆಯುವುದು. ಎಲ್ಲಾ ವಸ್ತುಗಳು ಕರಗಿಸುವ ಪಾತ್ರೆಗೆ ಮರಳುವುವು ಮತ್ತು ಇರಾನಿಗೆ ಮುಂದೇನಿದೆ ಎಂದು ಯಾರೂ ದೃಢವಾಗಿ ಹೇಳಲಾರರು. ಅಲ್ಲಾಹನಿಗೆ ಮಾತ್ರ ಎಲ್ಲವೂ ಚೆನ್ನಾಗಿ ತಿಳಿದಿದೆ. ಇರಾನಿಯರ ಕಷ್ಟಕಾಲ ಮುಗಿದು ಅವರು ಶಾಂತಮಯ ಸ್ಥಿತಿಗೆ ತಲಪಲಿ ಎಂದು ಅಲ್ಲಾಹನೊಡನೆ ಪ್ರಾರ್ಥಿಸಲು ಮಾತ್ರ ನನಗೆ ಸಾಧ್ಯ. ಅವರು ಧೈರ್ಯಶಾಲಿಗಳೂ ಅನುಗ್ರಹಿಸಲ್ಪಟ್ಟವರೂ ಆಗಿರುವರು. ಅವರು ಹಿಂದಿನ ಕಾಲದಲ್ಲಿ ಬಹಳ ಕಷ್ಟ ಅನುಭವಿಸಿದ್ದಾರೆ. ಈಗ ಸಹ ಅವರು ಕಷ್ಟ ಅನುಭವಿಸುತ್ತಿದ್ದಾರೆ. ಅವರು ಇರಾನಿಯೇತರರಿಂದಲೂ ಇರಾನಿಗಳಿಂದಲೂ ಕಷ್ಟ ಅನುಭವಿಸುತ್ತಿದ್ದಾರೆ. ಅದರ ಜೊತೆಗೆ ಅವರು ಕೆಟ್ಟ ಹೆಸರು ಸಂಪಾದಿಸಿರುವುದು ಒಂದು ವಿಡಂಬನೆಯಾಗಿದೆ. ಅಲ್ಲಾಹನು ಅವರ ಮೇಲೆ ದಯೆದೋರಲಿ. ಅವರನ್ನು ಅಲ್ಲಾಹನು ಅವರ ಮಹಾಸಂಕಟ ದಿಂದ ಪಾರುಗಾಣಿಸಲಿ.

ಇರಾನಿನಲ್ಲಿ ಖುಮೇನಿಯ ಕ್ರಾಂತಿಯ ಇನ್ನೊಂದು ಮಗ್ಗುಲಿಗೆ ತಿರುಗುವ. ಅಧಿಕಾರ ಗಳಿಸಿದ ಕೂಡಲೆ ಆಯತುಲ್ಲಾ ಖುಮೈನಿ ಇರಾನಿನ ಜನತೆಯ ಜೀವನ ಶೈಲಿಯನ್ನು ಬಹಿರಂಗವಾದ ಅಥವಾ ರಹಸ್ಯವಾದ ವಿದೇಶಿ ಪ್ರಭಾವಗಳಿಂದ ಮುಕ್ತಿಗೊಳಿಸುವ ಅಭಿಯಾನ ವನ್ನು ಕೈಗೊಂಡರಲ್ಲದೆ ನೆರೆಹೊರೆಯ ಮುಸ್ಲಿಮ್ ದೇಶಗಳಲ್ಲಿ ಸಮಾನವಾದ ಕ್ರಾಂತಿಯನ್ನುಂಟುಮಾಡಲು ತನ್ನನ್ನು ಬದ್ಧನನ್ನಾಗಿ ಮಾಡಿದರು. ಯಹೂದಿ ಶಕ್ತಿಗಳನ್ನು ಸೋಲಿಸಲು ಪಾಲೆಸ್ತೀನಿಗಳಿಗೆ ತಾನು ಬಲಯುತವಾದ ಸಹಾಯ ಮಾಡುವುದಾಗಿ ಅವರು ಮುಸ್ಲಿಮ್ ಲೋಕಕ್ಕೆ ಬಹಿರಂಗಪಡಿಸಿದರು. ಮುಸ್ಲಿಮ್ ದೇಶಗಳಾಗಲಿ ಇಸ್ರಾಯೇಲ್ ರಾಷ್ಟ್ರವಾಗಲಿ ಇರಾನಿನ ಕ್ರಾಂತಿಯ ಓಲೆಕಾರರನ್ನು ತೆರೆದ ಬಾಹುಗಳಿಂದ ಸ್ವೀಕರಿಸಲು ಸಿದ್ಧರಿರಲಿಲ್ಲ. ಆದುದರಿಂದ ಖುಮೈನಿ ಉದ್ದೇಶಿಸಿದ ರಫ್ತು ನ್ಯಾಯಬದ್ಧ ಶಾಂತಿ ಮಾರ್ಗದಿಂದ ನಡೆಯಲು ಸಾಧ್ಯವಿರಲಿಲ್ಲ. ನೆರೆಹೊರೆಯ ಮುಸ್ಲಿಮ್ ದೇಶಗಳಿಗೆ ಕ್ರಾಂತಿಯ ಸಾಮಗ್ರಿಗಳನ್ನು ತಲಪಿಸಲು ಇರಾನ್ ಶಕ್ತವಾಗಲಿಲ್ಲ. ಅದಕ್ಕೆ ಪಾಲೆಸ್ತೀನ್-ಇಸ್ರಾಯೇಲ್ ಪ್ರದೇಶದಲ್ಲಿ ಸ್ವಲ್ಪ ಮಟ್ಟಿನ ಜಯ ನಿಶ್ಚಯವಾಗಿಯೂ ದೊರಕಿತು. ಈ ಪ್ರದೇಶದಲ್ಲಿ ನಡೆಸಲಾದ ಭಯೋತ್ಪಾದಕ ದಾಳಿಗಳು-ಇಸ್ರಾಯೇಲ್ ವಿರುದ್ಧವಾಗಲಿ ಪಾಶ್ಚಿಮಾತ್ಯ ಶಕ್ತಿಗಳ ಪ್ರತಿನಿಧಿಗಳ ಮೇಲಾಗಲಿ ನಡೆಸಿದುದಕ್ಕೆ ಅನುಮತಿ ಪತ್ರವನ್ನು ಪಡೆದುದು ಇಸ್ಲಾಮಿನಿಂದಲ್ಲ. ಅದನ್ನು ಪಡೆದುದು ಇರಾನಿನ ಕ್ರಾಂತಿಯ ವಿಚಾರಧಾರೆಯಿಂದ ಮಾತ್ರವಾಗಿದೆ.

ಕಾದಾಟ ಮತ್ತು ಶಕ್ತಿಪ್ರಯೋಗದ ಬಗ್ಗೆ ನಾವು ಆಲಿಸುತ್ತಿರುವ ಮಾತುಗಳನ್ನು ಜಾಗರೂಕತೆಯಿಂದ ವಿಶ್ಲೇಷಿಸಬೇಕು ಮತ್ತು ಈ ವಿಚಿತ್ರ ವಿದ್ಯಮಾನದ ಪ್ರಾಮುಖ್ಯತೆಯನ್ನು ಮನವರಿಕೆ ಮಾಡಿಕೊಳ್ಳಬೇಕು. ಸಂಕುಚಿತ, ಅಸಹಿಷ್ಣು ಮನೋಭಾವವು ಮುಸ್ಲಿಮ್ ಮುಲ್ಲಾಗಳಲ್ಲಿ ಹೆಚ್ಚು ಕಮ್ಮಿ ಎಲ್ಲಾ ಮುಸ್ಲಿಮ್ ರಾಜ್ಯಗಳಲ್ಲಿ ಹೆಚ್ಚು ಪ್ರಚಲಿತವಾಗಿದೆ. ಇದಕ್ಕೆ ಜವಾಬ್ದಾರಿಯಾಗಿರುವುದು ಮುಖ್ಯವಾಗಿ ಸೌದಿ ಅರೇಬಿಯಾ ಆಗಿದೆ. ಅದು ಮುಸ್ಲಿಮ್ ಲೋಕದ ಯೋಚನೆಗಳನ್ನು ಹಿಡಿದಿಟ್ಟುಕೊಳ್ಳಲು ಬಯಸುತ್ತದೆ ಮತ್ತು ತನ್ನ ರಾಜಕೀಯ ಪ್ರಭಾವವನ್ನು ಧಾರ್ಮಿಕ ವೇಷಧಾರಣೆ ಮಾಡಿಸಿ ಹರಡಲು ತೀರ್ಮಾನಿಸಿದಂತೆ ತೋರುತ್ತದೆ. ಮುಸ್ಲಿಮರ ಎರಡು ಪವಿತ್ರ ನಗರಗಳಾದ ಮಕ್ಕ ಮತ್ತು ಮದೀನದ ಮೇಲ್ವಿಚಾರಕರಾಗಿರುವ ಕಾರಣ ಅದು ತನ್ನ ಉಪಯೋಗಕ್ಕೆ ಈ ಸಂದರ್ಭವನ್ನು ಬಳಸುವ ಸ್ಥಿತಿಯಲ್ಲಿದೆ.

ಸೌದಿಗಳ ಧಾರ್ಮಿಕ ತತ್ವಶಾಸ್ತ್ರವು ವಹಾಬಿಗಳದ್ದಾಗಿದೆ. ವಹಾಬಿ ಗಳು ತಮ್ಮ ಸ್ಫೂರ್ತಿಯನ್ನು ಮಧ್ಯಕಾಲೀನ ಅಸಹಿಷ್ಣು ಇಸ್ಲಾಮಿನಿಂದ ಪಡೆದರೇ ಹೊರತು ಪವಿತ್ರ ಪ್ರವಾದಿಯವರ(ಸ) ಕಾಲದ ಕರುಣಾಳು ಇಸ್ಲಾಮಿನಿಂದಲ್ಲ. ಸೌದಿಗಳ ಪ್ರಭಾವವು ಹರಡಲು ಸೌದಿಗಳು ಗಳಿಸುತ್ತಿರುವ ಪೆಟ್ರೋಡಾಲರ್ ಮತ್ತು ಲೋಕದಾದ್ಯಂತ ದೊಡ್ಡ ಬ್ಯಾಂಕ್‌ಗಳಲ್ಲಿರುವ ಬೃಹತ್ ಗಾತ್ರದ ನಿಕ್ಷೇಪಗಳು ಸಹಾಯ ಮಾಡಿದವು. ಈ ನಿಕ್ಷೇಪಗಳಿಂದ ದೊರಕುವ ಬಡ್ಡಿ ಮುಸ್ಲಿಮರು ಹೆಚ್ಚಾಗಿ ಇರುವ ಬಡದೇಶಗಳಿಗೆ ಸಹಾಯಧನವಾಗಿ ಹರಿಯುತ್ತಿದೆ. ಈ ಹಣ ಹೆಚ್ಚಾಗಿ ಆ ದೇಶಗಳ ದುರ್ಬಲ ಆರ್ಥಿಕ ವ್ಯವಸ್ಥೆಯನ್ನು ಸುಧಾರಣೆ ಮಾಡಲು ಬಳಸುವುದಕ್ಕೆ ಬದಲಾಗಿ ಮಸ್‌ಜಿದ್‌ಗಳನ್ನು ಮತ್ತು ಮದರಸಗಳನ್ನು ಸ್ಥಾಪಿಸಿ ಸೌದಿ ತತ್ವಗಳಿಗೆ ಒಲವುಳ್ಳ ಮತ ಪಂಡಿತರನ್ನು ಸೃಷ್ಟಿಸಲು ಬಳಸಲಾಗುತ್ತಿದೆ.

ಆದುದರಿಂದ ಸೌದಿ ಸಹಾಯಧನವು ಎಲ್ಲಿಗೆ ಹರಿದು ಹೋಗುತ್ತಿದೆಯೋ ಅಲ್ಲಿ ಸಂಕುಚಿತ, ಅಸಹಿಷ್ಣು ಮುಲ್ಲಾಗಳು ಬೇಗಬೇಗನೆ ವರ್ಧಿಸುತ್ತಾ ಇರುವುದು ಕಾಣುತ್ತದೆ. ಈ ಜನರು ಮುಸ್ಲಿಮೇತರ ಮೌಲ್ಯಗಳನ್ನು ಖಂಡಿಸಿ ಮುಸ್ಲಿಮೇತರ ಸರಕಾರಗಳ ವಿರುದ್ಧ ಜಿಹಾದ್ ಕರೆ ನೀಡುತ್ತಿರುವುದನ್ನು ಆಲಿಸುವಾಗ ಅವರು ಜಿಹಾದಿಗೆ ನೀಡಿದ ಕರೆಯು ಕೃತಿರೂಪಕ್ಕೆ ಇಳಿಸಲ್ಪಡುವುದೆಂದು ಕ್ರೈಸ್ತ ಲೋಕ ಭಾವಿಸುತ್ತದೆ. ಆದರೆ ವಾಸ್ತವಿಕವಾಗಿ ಸಂಭವಿಸುವುದು ಬೇರೆಯೇ ಆಗಿದೆ.

ಮುಸ್ಲಿಮ್ ಮುಲ್ಲಾ ವರ್ಗ ಪವಿತ್ರಯುದ್ಧದ ಬಗ್ಗೆ ಮತ್ತು ಮುಸ್ಲಿಮೇತರ ಶಕ್ತಿಗಳ ನಾಶದ ಕುರಿತು ಬಹಳ ಧ್ವನಿಯೆತ್ತಿ ಮಾತಾಡುತ್ತವೆ. ಆದರೆ ಅವರು ಮುಸ್ಲಿಮೇತರ ಶಕ್ತಿಗಳು ಎಂದು ಹೇಳುವುದು ಕ್ರೈಸ್ತ, ಯಹೂದಿ, ಬುದ್ಧಮತದ ಅಥವಾ ನಾಸ್ತಿಕ ಶಕ್ತಿಗಳ ಕುರಿತಲ್ಲ. ಅವರ ಅಭಿಪ್ರಾಯ ಪ್ರಕಾರ ಅವರು ಸ್ವತಃ ಮುಸ್ಲಿಮರ ಯಾವ ಗುಂಪಿಗೆ ಸೇರಿದ್ದಾರೋ ಆ ಗುಂಪಿನ ಹೊರತು ಉಳಿದ ಎಲ್ಲಾ ಮುಸ್ಲಿಮ್ ಗುಂಪುಗಳು ಮುಸ್ಲಿಮೇತರ ಸ್ವಭಾವ ಹೊಂದಿವೆ ಮತ್ತು ಆ ಗುಂಪುಗಳು ಅಲ್ಲಾಹನ ಮತ್ತು ಅವನ ನಿಜವಾದ ಸೇವಕರ ಕೋಪವನ್ನು ಸಂಪಾದಿಸುವ ರೀತಿಯ ವಿಶ್ವಾಸಗಳನ್ನು ಹೊಂದಿವೆ. ಅವರ ಪ್ರಕಾರ ಇಸ್ಲಾಮಿನ ನಿಜವಾದ ಶತ್ರುಗಳು ಮುಸ್ಲಿಮೇತರರಲ್ಲ. ತಮ್ಮದಲ್ಲದ ಗುಂಪಿಗೆ ಸೇರಿದ ಮುಸ್ಲಿಮ್ ವಿಭಾಗಗಳಾಗಿವೆ. ಮುಸ್ಲಿಮರ ಹೋರಾಟ ಮನೋಭಾವವು ಒಂದು ಗುಂಪಿನ ಮುಸ್ಲಿಮರಿಂದ ಇನ್ನೊಂದು ಗುಂಪಿನ ಮುಸ್ಲಿಮರ ವಿರುದ್ಧ ಕ್ರಿಯಾಶೀಲವಾಗಿದೆಯೇ ಹೊರತು ಮುಸ್ಲಿಮೇತರರ ವಿರುದ್ಧವಲ್ಲ. ಇದೇ ಕಾರಣದಿಂದ ಧರ್ಮತ್ಯಾಗಕ್ಕೆ ಮರಣದಂಡನೆಯನ್ನು ವಿಧಿಸುವ ಕುರಿತು ತೀವ್ರವಾಗಿ ಪ್ರತಿಪಾದಿಸಲಾಗುತ್ತಿದೆ. ಒಂದು ದೇಶದ ಬಹು ಸಂಖ್ಯಾತ ಮುಸ್ಲಿಮರ ಗುಂಪಿನೊಂದಿಗೆ ಭಿನ್ನಾಭಿಪ್ರಾಯ ಹೊಂದಿರುವ ಮುಸ್ಲಿಮರ ವಿರುದ್ಧ ಉಪಯೋಗಿಸಬಹುದಾದ ಆಯುಧ ಇದಾಗಿದೆ. ಈ ಭಿನ್ನಾಭಿಪ್ರಾಯ ಹೊಂದಿದ ವಿಭಾಗಗಳು ಮರಣದಂಡನೆಗೆ ಎರಡು ಹಂತಗಳಲ್ಲಿ ತುತ್ತಾಗುತ್ತವೆ. ಮೊದಲನೆಯದಾಗಿ, ಅವರ ವಿಶ್ವಾಸಗಳು ಅನಿಸ್ಲಾಮಿಕವೆಂದು ಘೋಷಿಸಲಾಗುತ್ತದೆ ಮತ್ತು ಅದರ ಫಲಸ್ವರೂಪವಾಗಿ ಅವರು ಧರ್ಮತ್ಯಾಗಿಗಳಾಗಿ ಗಣಿಸಲ್ಪಡುತ್ತಾರೆ. ಎರಡನೆಯದಾಗಿ, ಧರ್ಮತ್ಯಾಗಕ್ಕಿರುವ ಶಿಕ್ಷೆ ಮರಣದಂಡನೆಯಾದ ಕಾರಣ ಅವರು ಮರಣದಂಡನೆಗೆ ಅರ್ಹರೆಂದು ವಿಧಿಸಲ್ಪಡುತ್ತಾರೆ.

ಒಬ್ಬ ನಿಷ್ಪಕ್ಷಪಾತಿ ವೀಕ್ಷಕನಿಗೆ ಹೀಗೆ ತೋರುವುದು: ಮುಸ್ಲಿಮರಲ್ಲಿರುವ ಹೋರಾಟ ಮನೋಭಾವ ಮುಸ್ಲಿಮರ ಮಧ್ಯೆ ಅಸ್ತವ್ಯಸ್ತತೆಯನ್ನೂ ಗಲಭೆ ಗೊಂದಲಗಳನ್ನೂ ಸೃಷ್ಟಿಸುತ್ತದೆ ಮತ್ತು ಅದು ಒಂದು ವಿಭಾಗದ ವಿರುದ್ಧ ಇನ್ನೊಂದು ವಿಭಾಗ ತೀವ್ರತರವಾದ ದ್ವೇಷವನ್ನು ಹೃದಯಗಳಲ್ಲಿ ಹೊಂದುವುದಕ್ಕೆ ಕಾರಣವಾಗುತ್ತದೆ.

ಮುಸ್ಲಿಮೇತರ ಶಕ್ತಿಗಳಿಗೆ ಸಂಬಂಧಿಸಿ ಹೇಳುವುದಾದರೆ, ಅವರು ಸಂಪೂರ್ಣವಾಗಿ ಸುರಕ್ಷಿತರಾಗಿರುವರು ಮತ್ತು ಅವರಿಗೆ ಮುಸ್ಲಿಮ್ ಹೋರಾಟಗಾರರಿಂದ ಯಾವ ಅಪಾಯವೂ ಇಲ್ಲವೆಂದು ಮನವರಿಕೆ ಮಾಡಿಕೊಳ್ಳಬೇಕು. ಇದನ್ನು ಪ್ರತ್ಯಕ್ಷರೂಪದಲ್ಲಿ ಕಾಣಬೇಕಾದರೆ ಸೌದಿ ಅರೇಬಿಯಾದ ಸಂಬಂಧ ಪಾಶ್ಚಿಮಾತ್ಯ ರಾಷ್ಟ್ರಗಳೊಂದಿಗೆ ಮತ್ತು ವಿಶಿಷ್ಟವಾಗಿ ಅಮೇರಿಕ ಮತ್ತು ಅದರ ಸ್ನೇಹಿತರೊಂದಿಗೆ ಹೇಗಿದೆ ಎಂದು ನೋಡಬೇಕು. ಸೌದಿ ಅರೇಬಿಯಾ ಅಥವಾ ಅದರೊಂದಿಗೆ ಸ್ನೇಹಸಂಬಂಧ ಹೊಂದಿದ ರಾಜ್ಯಗಳು ಅಮೇರಿಕ ಮತ್ತು ಅದರ ಸ್ನೇಹಿತರ ವಿರುದ್ಧ ಖಡ್ಗ ಎತ್ತುವುದನ್ನು ಕನಸಿನಲ್ಲಿಯೂ ಊಹಿಸಲಾರವು. ಸೌದಿ ಅರೇಬಿಯಾ ತನ್ನ ಅಸ್ತಿತ್ವಕ್ಕೆ ನೂರು ಶತಮಾನ ಅಮೇರಿಕವನ್ನು ಹೊಂದಿಕೊಂಡಿದೆ. ಸೌದಿ ಅರೇಬಿಯಾದ ಆಡಳಿತೆ ನಡೆಸುವವರ ಸಂಪೂರ್ಣ ಸಂಪತ್ತು ಅಮೇರಿಕದ ಮತ್ತು ಇತರ ಪಾಶ್ಚಿಮಾತ್ಯ ರಾಷ್ಟ್ರಗಳ ಬ್ಯಾಂಕ್‌ಗಳಲ್ಲಿವೆ. ಎಲ್ಲಕ್ಕಿಂತ ಹೆಚ್ಚಾಗಿ ಆಂತರಿಕ ಮತ್ತು ಬಾಹ್ಯ-ಭದ್ರತೆಗೆ ಅವರು ಪಾಶ್ಚಿಮಾತ್ಯ ರಾಷ್ಟ್ರಗಳನ್ನು ಅವಲಂಬಿಸಿರುವುದು ಎಷ್ಟರ ಮಟ್ಟಿಗೆ ಸ್ಪಷ್ಟವೆಂದರೆ ಆ ಕುರಿತು ಇಲ್ಲಿ ಚರ್ಚಿಸಬೇಕಾಗಿಲ್ಲ. ಈ ಎರಡು ಕಾರಣಗಳಿಂದ ಸೌದಿ ಅರೇಬಿಯಾ ಮತ್ತು ಅದರ ಪ್ರಭಾವ ಕ್ಕೊಳಗಾಗಿರುವ ದೇಶಗಳು ಮುಸ್ಲಿಮೇತರ ಪಾಶ್ಚಿಮಾತ್ಯ ರಾಷ್ಟ್ರಗಳಿಗೆ ಅಪಾಯ ಒಡ್ಡುವ ಸಾಧ್ಯತೆಗಳಿರುವುದಿಲ್ಲ. ಇದಲ್ಲದೆ ಯಾವುದೇ ಮುಸ್ಲಿಮ್ ರಾಷ್ಟ್ರ ಆಯುಧದ ನಿರ್ಮಾಣದಲ್ಲಿ ಸ್ವಯಂಪೂರ್ಣವಾಗಿಲ್ಲ ಮತ್ತು ಅವುಗಳು ಪೂರ್ವ ಅಥವಾ ಪಶ್ಚಿಮದ ದೇಶಗಳನ್ನು ಆಕ್ರಮಣಕಾರಿ ಮತ್ತು ಪ್ರತಿರೋಧಕ ಆಯುಧಗಳಿಗಾಗಿ ಅವಲಂಬಿಸಿರುವುದು ಅವುಗಳು ಮುಸ್ಲಿಮೇತರ ದೇಶಗಳೊಂದಿಗೆ ಶಾಂತಿಯುತ ಸಂಬಂಧವನ್ನು ಸ್ಥಾಪಿಸಿ ಮುಂದುವರಿಯುವುದನ್ನು ಖಾತರಿಪಡಿಸುತ್ತದೆ. ಇದೇ ತತ್ವವು ಪಾಶ್ಚಿಮಾತ್ಯ ರಾಷ್ಟ್ರಗಳಿಗಿಂತ ಪೌರ್ವಾತ್ಯ ರಾಷ್ಟ್ರಗಳೊಂದಿಗೆ ಸ್ನೇಹ ಸಂಬಂಧಗಳನ್ನು ಹೊಂದಿದ ಲಿಬಿಯಾ ಮತ್ತು ಸಿರಿಯಾ ದೇಶಗಳಿಗೂ ಅನ್ವಯಿಸುತ್ತದೆ.

ಆಧುನಿಕ ಯುದ್ಧಗಳ ಕುರಿತು ಸ್ವಲ್ಪ ಅರಿವಾದರೂ ಇರುವವನು ಕೂಡ ಈ ತಥಾಕಥಿತ ಇಸ್ಲಾಮಿಕ ಹೋರಾಟಗಾರರಿಂದ ಯಾವುದಾದರೂ ನಿಜವಾದ ಅಪಾಯವಿರುವುದನ್ನು ಊಹಿಸಲಾರ.

ಆದರೆ ಈ ಹೋರಾಟ ಮನೋಭಾವದಿಂದ ಅಪಾಯವು ಇದೆ ಮತ್ತು ಅದರಿಂದ ಗಾಬರಿಯಾಗುವುದು ಸಹಜವೇ ಆಗಿದೆ. 'ಇಸ್ಲಾಮಿಕ' ಹೋರಾಟ ಮನೋಭಾವ ಇಸ್ಲಾಮಿಗೆಯೇ ಹಾನಿಕರವಾಗಿದೆ. ಈ ಆಂತರಿಕ ಅಪಾಯವು ಲೋಕದಾದ್ಯಂತ ಮುಸ್ಲಿಮರ ಶಾಂತಿಯನ್ನು ಕೆಡಿಸುತ್ತದೆ. ಅಸಹಿಷ್ಣುತೆ, ಸಂಕುಚಿತ ಮನೋಭಾವನೆ, ಮತಾಂಧತೆ ಇಂದು ಮುಸ್ಲಿಮರಲ್ಲಿ ಕಂಡುಬರುತ್ತಿದ್ದು ಅದು ಮುಸ್ಲಿಮರ ಶಾಂತಿಯನ್ನೇ ನಾಶಗೊಳಿಸುತ್ತಾ ಇದೆ. ಅಕಟಾ!

ಭಯೋತ್ಪಾದನೆ ಎಂಬುದರ ಅರ್ಥದಲ್ಲಿ ಭಯಪಡಿಸುವುದು, ಬಾಂಬ್ ಸ್ಫೋಟನೆ ಮಾಡುವುದು ಮೊದಲಾದುವು ಸೇರಿವೆ ಎಂದು ನನಗೆ ತಿಳಿದಿದೆ. ಆದರೆ ಲೋಕವು ಇಂದು ಅನುಭವಿಸುತ್ತಿರುವ ಭಯೋತ್ಪಾದನೆ ಇದಕ್ಕೆ ಮಾತ್ರ ಸೀಮಿತವಾಗಿದೆ ಎಂದು ನಾನು ನಂಬುವುದಿಲ್ಲ. ಸರಕಾರಗಳು ಕೈಗೊಳ್ಳುವ ದಬ್ಬಾಳಿಕೆಯ ಕ್ರಮಗಳು, ತನ್ನದೇ ಜನತೆಯ ಧ್ವನಿಯನ್ನು ಮತ್ತು ಅಭಿಪ್ರಾಯ ವ್ಯತ್ಯಾಸವನ್ನು ದಬಾಯಿಸಲು ಮಾಡುವ ಕೃತ್ಯಗಳನ್ನೂ ಸಹ ಭಯೋತ್ಪಾದನೆಯಾಗಿ ಗಣಿಸಿ ಅವುಗಳನ್ನೂ ಇತರ ಭಯೋತ್ಪಾದಕ ಕುಕೃತ್ಯಗಳಂತೆ ತೀವ್ರವಾಗಿ ಖಂಡಿಸಬೇಕಾಗಿದೆ ಎಂದು ನಾನು ನಂಬುತ್ತೇನೆ. ಸರಕಾರಗಳು ತಮ್ಮ ದೇಶದ ಬಲ ಅಥವಾ ಎಡ ಪಕ್ಷಗಳ ವಿರುದ್ಧ ಕೈಗೊಳ್ಳುವ ಕ್ರೂರ ಕೃತ್ಯಗಳನ್ನು ಅತ್ಯಂತ ಕೆಟ್ಟ ಭಯೋತ್ಪಾದನೆಯಾಗಿ ನಾನು ಭಾವಿಸುತ್ತೇನೆ.

ವಿದೇಶ ಸರಕಾರಗಳ ವಿರುದ್ಧ ಭಯೋತ್ಪಾದಕ ಕೃತ್ಯ ನಡೆದಾಗ, ಬಾಂಬ್‌ಸ್ಫೋಟ ಆದಾಗ, ವಿಮಾನಗಳನ್ನು ಅಪಹರಿಸಿಕೊಂಡು ಹೋದಾಗ ಆ ಘಟನೆಗಳು ಜಾಗತಿಕ ಶ್ರದ್ಧೆಗೆ ಪಾತ್ರವಾಗುತ್ತವೆ. ಅಂತಹ ಭಯೋತ್ಪಾದನೆಗೆ ಒಳಗಾದವರ ಬಗ್ಗೆ ಲೋಕದಾದ್ಯಂತ ಸಹಾನುಭೂತಿ ತಲೆದೋರುತ್ತದೆ. ಅದು ಹಾಗೆಯೇ ಆಗಬೇಕಾದದ್ದೇ. ಅವುಗಳ ಪರಿಣಾಮವಾಗಿ ಮುಂದೆ ಅಂತಹ ಘಟನೆಗಳು ನಡೆಯದಂತೆ ಮತ್ತು ಮುಂಚಿತವಾಗಿ ತಡೆಯವಂತೆ ಕ್ರಮಗಳು ಕೈಗೊಳ್ಳಲ್ಪಡುತ್ತವೆ. ಆದರೆ ಕ್ರೂರ, ನಿರ್ದಯ ಸರಕಾರಗಳ ದೌರ್ಜನ್ಯಗಳಿಗೆ ತುತ್ತಾಗುವ ಪ್ರಜೆಗಳ ಪಾಡನ್ನು ವಿಚಾರಿಸುವವರು ಯಾರಿದ್ದಾರೆ? ಅವರ ಕೂಗು ಮತ್ತು ಯಾತನೆ ಹೊರಗೆ ಕೇಳಿಸುವುದು ಬಹಳ ವಿರಳವಾಗಿ. ಅವರ ಪ್ರತಿಭಟನೆಯ ಕೂಗು ಆಂತರಿಕ ಕ್ರಮಗಳ ಮೂಲಕ ದಬಾಯಿಸಲ್ಪಡುತ್ತವೆ. ಅಮ್ನೇಸ್ಟಿ ಇಂಟರ್‌ನೇಶನಲ್ ಹಾಗೆ ಇರುವ ಮಾನವ ಹಕ್ಕುಗಳನ್ನು ಸಂರಕ್ಷಿಸುವ ಪರೋಪಕಾರಿ ಸಂಸ್ಥೆಗಳು ಅಂತಹ ಕ್ರೂರ ಹಿಂಸೆ ಮತ್ತು ಮಾನವನ ಮೂಲಭೂತ ಹಕ್ಕುಗಳ ಅಪಹಾರದ ಬಗ್ಗೆ ಲೋಕದ ಗಮನ ಸೆಳೆಯಲು ಪ್ರಯತ್ನಿಸಿದರೂ ಅವುಗಳನ್ನು ಬಹಳ ಮೃದುವಾಗಿ ಲೋಕದ ಸರಕಾರಗಳು ಖಂಡಿಸುತ್ತವೆ. ಅವುಗಳು ಆಯಾ ದೇಶಗಳ

ಆಂತರಿಕ ವಿಷಯಗಳೆಂದು ಅವುಗಳನ್ನು ಬಿಟ್ಟುಬಿಡಲಾಗುತ್ತದೆ. ಇಂತಹ ಕೃತ್ಯಗಳನ್ನು ಭಯೋತ್ಪಾದಕ ಕೃತ್ಯಗಳೆಂದು ಖಂಡಿಸುವುದಕ್ಕೆ ಪ್ರತಿಯಾಗಿ ಅವುಗಳನ್ನು ಆ ದೇಶದ ಭಯೋತ್ಪಾದಕ ಕೃತ್ಯಗಳನ್ನು ಕೊನೆಗೊಳಿಸಿ ಶಾಂತಿ ಮತ್ತು ಕಾನೂನು ಕಾಯಿದೆ ಸ್ಥಾಪಿಸುವ ಕೃತ್ಯಗಳಾಗಿ ಹೆಚ್ಚು ಹೆಚ್ಚಾಗಿ ಪರಿಗಣಿಸಲಾಗುತ್ತಿದೆ.

ಜನರ ಚಳುವಳಿಗಳನ್ನು ಮತ್ತು ವಿರೋಧವನ್ನು ಅದುಮಿ ಹಾಕಲು ಸರಕಾರಗಳು ಕೈಗೊಳ್ಳುವ ಶಿಕ್ಷೆಯ ಕ್ರಮಗಳು ಆ ಸರಕಾರಗಳಿಗೆ ನ್ಯಾಯ ಬದ್ಧವಾಗಿರುವ ಅಧಿಕಾರದ ಸೀಮೆಯನ್ನು ದಾಟಿಹೋಗಿ ಅವುಗಳು ತಮ್ಮದೇ ಜನತೆಯ ವಿರುದ್ಧ ನಡೆಸುವ ಬರ್ಬರ ಕೃತ್ಯಗಳಾಗಿರುತ್ತವೆ ಎಂದು ನಾನು ದೃಢವಾಗಿ ನಂಬುತ್ತೇನೆ.

ಭಯೋತ್ಪಾದಕರ ಕೃತ್ಯಗಳಿಗಿಂತ ಈ ರೀತಿ ದೇಶಗಳು ನಡೆಸುವ ಭಯೋತ್ಪಾದಕ ಕೃತ್ಯಗಳಿಂದ ಮಾನವರು ಹೆಚ್ಚು ಕಷ್ಟಪಟ್ಟಿದ್ದಾರೆ. ಇಸ್ಲಾಮಿನ ಬಗ್ಗೆ ಹೇಳುವುದಾದರೆ, ಅದು ಭಯೋತ್ಪಾದಕ ಕೃತ್ಯವನ್ನು ತಿರಸ್ಕರಿಸುತ್ತದೆ ಮತ್ತು ಸ್ಪಷ್ಟವಾಗಿ ಖಂಡಿಸುತ್ತದೆ. ಯಾವುದೇ ಹಿಂಸಾತ್ಮಕ ಕೃತ್ಯ ಅದು ವ್ಯಕ್ತಿ, ಗುಂಪು ಅಥವಾ ಸರಕಾರದಿಂದ ಮಾಡಲ್ಪಟ್ಟರೂ ಅದನ್ನು ಇಸ್ಲಾಮ್ ಧರ್ಮ ನ್ಯಾಯಬದ್ಧವೆಂದು ಹೇಳುವುದಿಲ್ಲ.

ಮುಸ್ಲಿಮ್ ಲೋಕದಲ್ಲಿ ಕೆಲವು ಅಶಾಂತ ಪ್ರದೇಶಗಳಿವೆ. ಅಲ್ಲಿ ಗುಂಪುಗಳು, ಸಂಘಟನೆಗಳು ಮತ್ತು ಕೆಲವು ಸಾರಿ ಸರಕಾರಗಳು ಸಹ ಭಯೋತ್ಪಾದನೆ, ಹಿಂಸಾಚಾರ ಮತ್ತು ವಿಧ್ವಂಸಕ ಕೃತ್ಯಗಳನ್ನು ನಡೆಸುತ್ತಿವೆ. ಪ್ಯಾಲೆಸ್ತೀನ್, ಲೆಬನಾನ್ ಮತ್ತು ಸಿರಿಯಾ ಆಗಾಗ್ಗೆ ಸುದ್ದಿಯಲ್ಲಿರುತ್ತವೆ. ಬಹುತೇಕ ಸಂದರ್ಭಗಳಲ್ಲಿ ಇದರಲ್ಲಿ ಮುಸ್ಲಿಮರು ಭಾಗವಹಿಸುತ್ತಾರೆ. ಆದರೆ ಕೆಲವು ಅಪವಾದಗಳೂ ಇವೆ. ಪ್ಯಾಲೆಸ್ತೀನಿ ಯರಲ್ಲಿ ಕೆಲವರು ಕ್ರೈಸ್ತ ಮತಾವಲಂಬಿಗಳಾದರೂ ಇಸ್ರಾಯೇಲ್ ವಿರುದ್ಧ ಭಯೋತ್ಪಾದಕ ಕೃತ್ಯ ನಡೆಸಲು ಪ್ರತಿಜ್ಞೆ ಮಾಡಿದವರಾಗಿದ್ದಾರೆ. ಪಾಶ್ಚಿಮಾತ್ಯ ವಾರ್ತಾ ಮಾಧ್ಯಮಗಳು ತಮ್ಮ ಅನುಕೂಲಕ್ಕಾಗಿ ಅಥವಾ ತಿಳಿವಳಿಕೆಯಿಲ್ಲದೆ ಅವರೆಲ್ಲರನ್ನು ಇಸ್ಲಾಮಿಕ ಭಯೋತ್ಪಾದಕರೆಂದು ಹೆಸರಿಸುತ್ತವೆ. ಲೆಬನಾನಿನಲ್ಲಿ ಮುಸ್ಲಿಮ್ ಭಯೋತ್ಪಾದಕರೂ ಕ್ರೈಸ್ತ ಭಯೋತ್ಪಾದಕರೂ ಇದ್ದಾರೆ. ಇಸ್ರಾಯೇಲ್ ಸೈನಿಕರು ಮತ್ತು ಏಜೆಂಟರು ಸಹ ಎಂತಹ ಭಯೋತ್ಪಾದಕ ಕೃತ್ಯಗಳನ್ನು ಮಾಡುತ್ತಾರೆಂದರೆ ಮನುಷ್ಯನ ಬುದ್ಧಿಯನ್ನು ಭಯಚಕಿತಗೊಳಿಸುತ್ತವೆ. ಆದರೆ ಲೆಬನಾನಿನಲ್ಲಿ ನಡೆಯುವ ಭಯೋತ್ಪಾದಕ ಕೃತ್ಯಗಳನ್ನು "ಯಹೂದಿ ಭಯೋತ್ಪಾದನೆ", "ಕ್ರೈಸ್ತ ಭಯೋತ್ಪಾದನೆ" ಎಂಬ ಹೆಸರಿನಲ್ಲಿ ಆಲಿಸಲಾರಿರಿ, ಎಲ್ಲಾ ಭಯೋತ್ಪದಕ ಕೃತ್ಯಗಳನ್ನು ಒಟ್ಟಿಗೆ ಸೇರಿಸಿ "ಇಸ್ಲಾಮಿಕ ಭಯೋತ್ಪಾದನೆ" ಎಂದು ಕರೆಯಲಾಗುತ್ತದೆ.

ಸಲ್ಮಾನ್ ರಶ್ದಿಯ ಬಗ್ಗೆ ಹೇಳುವುದಾದರೆ, ಪವಿತ್ರ ಖುರ್‌ಆನ್ ಬಗ್ಗೆ ಜ್ಞಾನವಿರುವವನು ಇಮಾಮ್ ಖುಮೈನಿ ವಿಧಿಸಿದ ಮರಣದಂಡನೆಯ ಶಿಕ್ಷೆ ಇಸ್ಲಾಮಿಕ ಆದೇಶಗಳಿಗನುಸಾರವಾಗಿದೆ ಎಂದು ಅಂಗೀಕರಿಸಲಾರನು. ದೇವನಿಂದೆಗೆ ಇಂತಹ ಶಿಕ್ಷೆ ಪವಿತ್ರ ಖುರ್‌ಆನ್‌ನಲ್ಲಾಗಲೀ ಹದೀಸುಗಳಲ್ಲಾಗಲೀ ಇಲ್ಲ. ದೇವನಿಂದೆಯ ಕುರಿತು ಪವಿತ್ರ ಖುರ್‌ಆನ್ ಹೀಗೆ ಹೇಳಿದೆ:

"ಅಲ್ಲಾಹನ ಹೊರತು ಅವರು ಕರೆದು ಪ್ರಾರ್ಥಿಸುವವರನ್ನು ನೀವು ಹೀಯಾಳಿಸಬೇಡಿರಿ. ಆಗ ವಿರೋಧದಿಂದ ಅವರು ಸಹ ತಿಳುವಳಿಕೆಯಿಲ್ಲದೆ ಅಲ್ಲಾಹನನ್ನು ನಿಂದಿಸುವರು." (6 : 109)

ದೇವನಿಂದೆಗೆ ಯಾವುದೇ ಶಿಕ್ಷೆ ವಿಧಿಸುವ ಅಧಿಕಾರ ಯಾರಿಗೂ ನೀಡಲಾಗಿಲ್ಲ.

ಯೇಸುವಮಾತೆ ಮೇರಿಯ ವಿರುದ್ಧ ನಿಂದೆ ಮಾಡಿದ ಯಹೂದಿಯರ ಕುರಿತು ಪವಿತ್ರ ಖುರ್‌ಆನ್ ಹೀಗೆ ಹೇಳಿದೆ:

"ಅವರ ಅವಿಶ್ವಾಸ ಮತ್ತು ಮರ್‌ಯುಮಳ ಹೆಸರಿನಲ್ಲಿ ಗುರುತರವಾದ ಅಪವಾದ ಹೊರಿಸುವ ಕಾರಣದಿಂದಲೂ" (4:157)

ಇಲ್ಲಿ ಸಹ ನಿಂದೆಗೆ ಶಿಕ್ಷೆ ವಿಧಿಸಿಲ್ಲ – ದೇವನು ಸ್ವತಃ ವಿಧಿಸುವ ಶಿಕ್ಷೆಯ ಹೊರತು. ಇಮಾಮ್ ಖುಮೈನಿ ಮರಣದಂಡನೆಯ ಶಿಕ್ಷೆಯನ್ನು ವಿಧಿಸಿ ಇಸ್ಲಾಮಿಗೆ ಕೆಟ್ಟ ಹೆಸರು ಬರುವಂತೆ ಮಾಡಿದರು ಮತ್ತು ಇಸ್ಲಾಮನ್ನು ಸಂರಕ್ಷಿಸುವುದಕ್ಕೆ ಪ್ರತಿಯಾಗಿ ಅವರು ಇಸ್ಲಾಮಿನ ಹೆಸರನ್ನು ಲೋಕದಲ್ಲಿ ಕೆಡಿಸುವುದಕ್ಕೆ ಕಾರಣರಾದರು.

ಈಜಿಪ್ಟಿನ ಅಝ್ಹರ್ ಮಸ್‌ಜಿದಿನ ಇಮಾಮ್‌ರವರು ಖುಮೈನಿಯನ್ನು ಖಂಡಿಸಿರುವರು ಮತ್ತು ಅನೇಕ ಶಿಯಾ ಮುಸ್ಲಿಮರು ಖುಮೈನಿಯರೊಂದಿಗೆ ಭಿನ್ನಾಭಿಪ್ರಾಯ ಹೊಂದಿರುವರೆಂದು ನಾನು ದೃಢವಾಗಿ ನಂಬುತ್ತೇನೆ.

ಇಲ್ಲಿ ಮುಖ್ಯ ವಿಷಯವನ್ನು ಕಡೆಗಣಿಸುವುದು ಸರಿಯಲ್ಲ. ಕೆಲವು ರಾಜಕೀಯ ಧುರೀಣರು, ವಿದ್ವಾಂಸರು ಸಲ್‌ಮಾನ್ ರಶ್ದಿಯನ್ನು ಸಹ ಖಂಡಿಸದೆ ಬರೇ ಇಮಾಮ್ ಖುಮೈನಿಯನ್ನು ಖಂಡಿಸಿರುವುದು ನ್ಯಾಯಬದ್ಧವಾದುದಲ್ಲ. ರಶ್ದಿಯು ಬರೆದ ಪುಸ್ತಕದ ಭಾಷೆಯು ಉದ್ದೇಶಪೂರ್ವಕವಾಗಿ ಮುಸ್ಲಿಮರಿಗೆ ನೋವನ್ನುಂಟುಮಾಡುವ ರೀತಿಯಲ್ಲಿ ಹೊಲಸಾಗಿದೆ. ಇಷ್ಟು ಮಾತ್ರವಲ್ಲ, ಅದು ಮುಸ್ಲಿಮರ ಮತ್ತು ಕ್ರೈಸ್ತರ ಮಧ್ಯೆ ಶಾಂತಿಯ ಸಂಬಂಧವನ್ನು ಕೆಡಿಸಿದೆ. ಪತ್ರಿಕೆಗಳಿಗೆ ಬರೆಯಲಾದ ಪತ್ರಗಳಿಂದ ತಿಳಿಯುವುದೇನೆಂದರೆ ವರ್ಣದ್ವೇಷದ ಶಕ್ತಿಗಳನ್ನೂ ಅದು ಬಡಿದೆಬ್ಬಿಸಿದೆ.

ನಾನು ಯಾವುದೇ ರೀತಿಯ ಭಯೋತ್ಪಾದನೆಯನ್ನು ನ್ಯಾಯೀಕರಿಸುವುದಿಲ್ಲ. ಭಯೋತ್ಪಾದನೆ ಯಾವುದೇ ವರ್ಣ, ಜಾತಿ ಅಥವಾ ಭಾವನೆಯ ಪ್ರಾತಿನಿಧ್ಯವಹಿಸುವುದಾದರೂ ನಾನು ಅದನ್ನು ಒಪ್ಪುವುದಿಲ್ಲ. ಇಸ್ಲಾಮ್ ನನ್ನ ಧರ್ಮವಾಗಿದೆ. ಇಸ್ಲಾಮ್ ಯಾವುದೇ ಅಶಾಂತಿ, ಅಸ್ತವ್ಯಸ್ತತೆಯನ್ನು ಇಷ್ಟಪಡುವುದಿಲ್ಲ. ಇಸ್ಲಾಮ್ ಭಯೋತ್ಪಾದನೆಯನ್ನು ಉಪದೇಶಿಸುವುದರಿಂದ ಬಹಳ ದೂರವಿದೆ. ಕರ್ನಲ್‌ಖದ್ದಾಫೀ ತನ್ನ ಪೆಟ್ರೋಡಾಲರ್‌ನಿಂದ ನಡೆಸುವ ಭಯೋತ್ಪಾದನೆಯ ಧರ್ಮ ಯಾವುದೆಂದು ಯಾರಾದರೂ ಕೇಳಬಹುದು. ಸಿರಿಯಾ ಹಿಂದೆ ನಡೆಸುತ್ತಿದ್ದ ಭಯೋತ್ಪಾದಕ ಕೃತ್ಯಗಳ ಜಾತಿ ಯಾವುದು? ಅದು ಇಸ್ಲಾಮೋ? ಅದು ಇಸ್ಲಾಮ್ ಆಗಿದ್ದರೆ ಅದಕ್ಕೂ ವೈಜ್ಞಾನಿಕ ಸೋಶಿಯಲಿಸಮಿಗೂ ಇರುವ ವ್ಯತ್ಯಾಸವೇನು? ಕರ್ನಲ್ ಖದ್ದಾಫಿಯ ಗ್ರೀನ್ ಬುಕ್ ಅದರ ಹೊದಿಕೆ ಮಾತ್ರ ಹಸುರಾಗಿದೆ. ಅದರೊಳಗೆ ಬರೆದಿರುವುದು ಕೆಂಪು ಕೆಂಪೇ ಆಗಿದೆ.

ಇರಾನ್ ಅಥವಾ ಲಿಬಿಯಾದ ಮೂಲಭೂತವಾದಿ ಮುಸ್ಲಿಮರ ಭಯೋತ್ಪಾದಕ ಚಟುವಟಿಕೆಗಳನ್ನು "ಇಸ್ಲಾಮಿಕ ಭಯೋತ್ಪಾದನೆ" ಎಂದು ಗಣಿಸುವುದಾದರೆ ಅವರ ಇಸ್ಲಾಮಿನ ಬಣ್ಣ ಕಡು ಹಸಿರಾಗಿ ತೋರುವುದು. ಇಸ್ಲಾಮಿನ ವಿಚಾರಗಳು ಅದಕ್ಕೇ ವಿರುದ್ಧನಾಗಿರುವುದಾರೂ ಇಸ್ಲಾಮ್ ಒಂದೇ ಸಮಯದಲಿ "ಹಸಿರು" ಮತ್ತು "ಕೆಂಪು" ಆಗಿರುವುದಾದರೂ ಹೇಗೆ? ಲಿಬಿಯಾದ ಭಯೋತ್ಪಾದನೆ ವೇಷಮರೆಸಿದ ರಾಷ್ಟ್ರೀಯ ಭಯೋತ್ಪಾದನೆಯಾಗಿದೆ ಎಂದು ಹೇಳಬಹುದು. ಈ ಸಂದರ್ಭದಲ್ಲಿ ಕ್ಯೂಬಾದ ಫಿಡೆಲ್ ಕಾಸ್ಟ್ರೋ ನೆನಪಿಗೆ ಬರುತ್ತಾರೆ. ಅವರು ಹಿಂಸಾಚಾರ ಮತ್ತು ಭಯೋತ್ಪಾದನೆಯಲ್ಲಿ ಕರ್ನಲ್ ಖದ್ದಾಫಿಗಿಂತ ಹೆಚ್ಚು ಮುಂದೆ ಸಾಗುತ್ತಿದ್ದಾರೆ. ಹೀಗಿದ್ದರೂ ಅವರ ಕೃತ್ಯಗಳನ್ನು ಕ್ರೈಸ್ತ ಭಯೋತ್ಪಾದನೆ

ಎಂದು ವರ್ಣಿಸಿದ್ದನ್ನು ಕಾಣಲಾರೆವು.

ಒಂದು ವಿಷಯ ಇನ್ನೊಂದಕ್ಕೆ ತಲಪಿಸುತ್ತದೆ. ಭಯೋತ್ಪಾದನೆಯ ಬಗ್ಗೆ ಚರ್ಚೆಯು ಚರಿತ್ರೆಯ ವಿವಿಧ ಘಟ್ಟಗಳನ್ನು ನಮ್ಮ ಕಣ್ಣ ಮುಂದೆ ತರುತ್ತದೆ. ಕ್ರೈಸ್ತ ಧರ್ಮವು ಬಹಳ ಕ್ರೂರ ಹಿಂಸಾತ್ಮಕ ಕೃತ್ಯಗಳನ್ನು ಮಾಡಿದೆ ಮತ್ತು ಕೆಲವು ಕ್ರೈಸ್ತ ಅರಸರು ಬರ್ಬರ ಹಿಂಸಾಚಾರಗಳನ್ನು ತಾವು ಕ್ರಿಸ್ತನ ಧರ್ಮಕ್ಕೆ ಸೇವೆ ಮಾಡುತ್ತೇವೆ ಎಂಬ ತಪ್ಪು ಗ್ರಹಿಕೆಯಿಂದ ಮಾಡಿರುತ್ತಾರೆ.

ಬ್ಲ್ಯಾಕ್‌ಡೆತ್ ಕಾಲದಲ್ಲಿ (1348-1349) ಹಲವಾರು ಯಹೂದಿಯರನ್ನು ಅವರ ಮನೆಗಳಲ್ಲಿ ಜೀವಂತವಾಗಿ ಸುಟ್ಟುಹಾಕಿರಲಿಲ್ಲವೇ? ಸ್ಪಾನಿಶ್ ಇಂಕ್ವಿಝಿಷನ್ ಕಾಲದಲ್ಲಿ ಕೆಲವು ಕ್ರೈಸ್ತ ಪುರೋಹಿತರ ನಿರ್ದೇಶನ ಪ್ರಕಾರ ದೀರ್ಘಕಾಲ ಭಯೋತ್ಪಾದಕ ಆಳ್ವಿಕೆ ಜಾರಿಗೊಂಡಿದ್ದವು. ಹಲವಾರು ಅಸಹಾಯಕ ಮಹಿಳೆಯರನ್ನು ಮಾಟಗಾರ್ತಿಯರು ಎಂದು ಆಪಾದಿಸಿ, ಮಾಟಗಾರ್ತಿಯರಿಗಿರುವ ಶಿಕ್ಷೆಯು ಕೊಂದುಹಾಕುವುದೆಂದು ಕ್ರೈಸ್ತ ಧರ್ಮದ ಪ್ರಕಾರ ಘೋಷಿಸಿ ಕೊಲ್ಲಲಾಯಿತು.

ಈ ಹಿಂಸಾತ್ಮಕ ಕೃತ್ಯಗಳು ಕ್ರೈಸ್ತಧರ್ಮದೊಂದಿಗೆ ನೇರವಾಗಿ ಸಂಬಂಧ ಹೊಂದಿದ್ದರೂ ಮಾನವೀಯತೆಗೆ ವಿರುದ್ಧವಾದ ಈ ಕೃತ್ಯಗಳು ಅಜ್ಞಾನವು ಸರ್ವಾಧಿಪತ್ಯ ನಡೆಸುತ್ತಿದ್ದ ಮಧ್ಯಕಾಲದ ಫಲಗಳು ಆಗಿವೆ. ಧರ್ಮದ ಪಾಠ ಮತ್ತು ಮನುಷ್ಯನ ವರ್ತನೆಯ ನಡುವೆ ಇರುವ ವ್ಯತ್ಯಾಸವನ್ನು ಮನುಷ್ಯರು ತಿಳಿಯುವುದಾದರೂ ಯಾವಾಗ? ಇವೆರಡನ್ನು ಕಲಸುಮೇಲೋಗರಗೊಳಿಸಿ ಒಂದು ಧರ್ಮದ ಅನುಯಾಯಿಗಳ ವರ್ತನೆಯನ್ನು ಆಧಾರವಾಗಿಟ್ಟುಕೊಂಡು ಧರ್ಮವನ್ನು ತಿಳಿಯಲು ಪ್ರಯತ್ನಿಸುವುದಾದರೆ ಅನೇಕ ಪ್ರಶ್ನೆಗಳು ಉದ್ಭವಿಸುತ್ತವೆ. ಒಂದು ಧರ್ಮದವರ ನಡೆವಳಿಕೆಗಳು ದೇಶದಿಂದ ದೇಶಕ್ಕೆ, ಪಂಗಡದಿಂದ ಪಂಗಡಕ್ಕೆ, ಕಾಲದಿಂದ ಕಾಲಕ್ಕೆ ಮತ್ತು ವ್ಯಕ್ತಿಯಿಂದ ವ್ಯಕ್ತಿಗೆ ವ್ಯತ್ಯಾಸವಾಗಿರುತ್ತವೆ.

ಯೇಸುಕ್ರಿಸ್ತರ ಶಿಷ್ಯರ ನಡೆವಳಿಕೆಗಳು ಚಿಲಿಯ ಪಿನೋಶೆ, ದಕ್ಷಿಣ ಆಫ್ರಿಕದ ಬಿಳಿಯರ ನಡೆವಳಿಕೆಗಿಂತ ಎಷ್ಟು ಭಿನ್ನವಾಗಿದೆ? ಯಾರ ನಡೆವಳಿಕೆ ಕ್ರೈಸ್ತಧರ್ಮವನ್ನು ಪ್ರತಿನಿಧೀಕರಿಸುತ್ತದೆ?

ಲಕ್ಷಗಟ್ಟಲೆ ಜನರು ಕೊಲ್ಲಲ್ಪಟ್ಟ ಪ್ರಥಮ ಮಹಾಯುದ್ಧ ಮತ್ತು ದ್ವಿತೀಯ ಮಹಾಯುದ್ಧಗಳನ್ನು ಮಾನವತೆಯ ವಿರುದ್ಧ ಕ್ರೈಸ್ತರು ನಡೆಸಿದ ಯುದ್ಧಗಳೆಂದು ಕರೆಯಲು ನಮಗೆ ಹಕ್ಕಿದೆಯೇ? ಎರಡನೆಯ ಮಹಾಯುದ್ಧದಲ್ಲಿ ರಶ್ಯಾದ 61 ಲಕ್ಷ ಸೈನಿಕರು ಕೊಲ್ಲಲ್ಪಟ್ಟರೆಂದು ಅಂದಾಜಿಸಲಾಗಿದೆ. ಬೋಸ್ನಿಯಾದ ಜನಸಂಖ್ಯೆಯ ಮುಕ್ಕಾಲು ಭಾಗ ನಾಶಗೊಳಿಸಲ್ಪಟ್ಟಿತು. ಆಸ್ತಿಪಾಸ್ತಿಗಳ ನಷ್ಟ ಎಷ್ಟೆಂದು ಇನ್ನೂ ಅಂದಾಜು ಮಾಡಲಾಗಿಲ್ಲ. ಈ ಕೃತ್ಯಗಳನ್ನು ಕ್ರೈಸ್ತಧರ್ಮದ ಕೆಲಸಗಳೆಂದು ಹೇಳಬಹುದೆ? ಹಿಂಸೆಗೆ ಪ್ರತಿಹಿಂಸೆ ಮಾಡುವ ಬದಲು, ಒಂದು ಕೆನ್ನೆಗೆ ಹೊಡೆದರೆ ಇನ್ನೊಂದು ಕೆನ್ನೆ ತೋರಿಸಿದಂತಹ ಮತ್ತು ಕ್ರೂರ ಮೃಗಗಳಿಗೆ ಆಹಾರವಾಗಿ ನೀಡಲ್ಪಟ್ಟ ಮತ್ತು ಮನೆಗಳಲ್ಲಿ ಜೀವಂತವಾಗಿ ಸುಡಲ್ಪಟ್ಟ ಕ್ರೈಸ್ತರು – ಇವರಲ್ಲವೇ ನೈಜ ಕ್ರೈಸ್ತರು? ನಾನು ಇವರನ್ನೇ ನಿಜವಾದ ಕ್ರೈಸ್ತರೆಂದು ಗಣಿಸುತ್ತೇನೆ.

ಒಂದು ಮುಸ್ಲಿಮ್ ದೇಶದಲ್ಲಿ ನಡೆಯುವ ಯುದ್ಧಕ್ಕೆ ಸಂಬಂಧಿಸಿದ ಕೃತ್ಯವನ್ನು ಇಸ್ಲಾಮಿಕ ಭಯೋತ್ಪಾದನೆಯ ವಿಸ್ತಾರವೆಂದು ಪಾಶ್ಚಿಮಾತ್ಯರು ಗಣಿಸುತ್ತಾರೆ. ಆದರೆ ಬೇರೆ ದೇಶಗಳಲ್ಲಿ ಅಂತಹ ಘಟನೆ ನಡೆದರೆ ಅದನ್ನು ರಾಜಕೀಯ ವಿವಾದವೆಂದು ಹೇಳುತ್ತಾರೆ. ಈ ರೀತಿ ನ್ಯಾಯ ವ್ಯವಸ್ಥೆಯಲ್ಲಿ ದ್ವಿಮುಖ ನೀತಿ ಏಕೆ? ಕ್ರೈಸ್ತ ನಾಗರಿಕತೆಯ ಮೇಲಿಂದ ಮೇಲೆ ತೋರುವ ಶಾಂತ ಮೇಲ್ಮುಖದ ಕೆಳಗೆ ಇಸ್ಲಾಮಿನ ವಿರುದ್ಧ ದ್ವೇಷದ ಒಳಹರಿವು ಇದೆ ಎಂದು ಅನುಮಾನಿಸುವಂತಿದೆ. ಮುಸ್ಲಿಮರ ವಿರುದ್ಧ ಶತಮಾನಗಳ ತನಕ ನಡೆಸಿದ ಕ್ರೂರ ಸೇಡುಗಳಿಂದ ಉಂಟಾದ ಕೆಟ್ಟ ಪರಿಣಾಮವೂ ಇದು ಆಗಿರಬಹುದು ಅಥವಾ ಇಸ್ಲಾಮಿನ ವಿರುದ್ಧ ಪೌರಸ್ತ್ಯ ಸಂಸ್ಕೃತಿ ಶಾಸ್ತ್ರಜ್ಞರು (Orientalists) ತಯಾರಿಸಿದ ವಿಷದ ಮದ್ಯವು ಹೊಸ ಬಾಟಲಿಗಳಲ್ಲಿ ಸರಬರಾಜು ಆಗುತ್ತಿದೆಯೇ? ಇಸ್ಲಾಮ್ ಖಡ್ಗಬಲದಿಂದ ಪ್ರಚಾರಗೊಂಡಿತೆಂಬ ವಿಚಾರವು ಅತ್ಯಂತ ಪ್ರಶ್ನಿಸಲ್ಪಡಬೇಕಾದುದಾಗಿದೆ. ಮುಸ್ಲಿಮ್ ಸರಕಾರಗಳು ನಡೆಸಿದ ಯುದ್ಧಗಳನ್ನು ಆಯಾಕಾಲದ ರಾಜಕೀಯ ಪರಿಸ್ಥಿತಿ ಮತ್ತು ಅಂತಾರಾಷ್ಟ್ರೀಯ ಸಂಬಂಧವನ್ನು ಒರೆಗೆ ಹಚ್ಚಿ ತೀರ್ಮಾನಿಸಬೇಕಾಗಿದೆಯಲ್ಲದೆ ಧರ್ಮವನ್ನು ಆಧಾರವಾಗಿಟ್ಟುಕೊಂಡಲ್ಲ.

ಸಮಾಜದಲ್ಲಿರುವ ಅನೇಕ ರೋಗಗಳ ಚಿಹ್ನೆಯಾಗಿ ಹಿಂಸಾಚಾರವು ಪ್ರಕಟವಾಗುತ್ತದೆ. ಮುಸ್ಲಿಮ್ ಲೋಕಕ್ಕೆ ತಾನು ಎತ್ತ ಕಡೆಗೆ ತಿರುಗಬೇಕೆಂದು ತಿಳಿಯದು. ತಮಗೆ ನಿಯಂತ್ರಿಸಲು ಸಾಧ್ಯವಿಲ್ಲದ ಅನೇಕ ಸಂಗತಿಗಳ ಬಗ್ಗೆ ಜನರು ಅತೃಪ್ತರಾಗಿದ್ದಾರೆ. ಅವರು ಭ್ರಷ್ಟ ನಾಯಕರಿಂದ ಮತ್ತು ವಿದೇಶಿಯರ ಏಜೆಂಟರಿಂದ ಶೋಷಣೆಗೆ ಪಾತ್ರರಾಗುವ ಜೀವರಹಿತ ಮಾಂಸಖಂಡಗಳಾಗಿದ್ದಾರೆ. ಪಾಕಿಸ್ತಾನದ ಝಿಯಾವುಲ್ ಹಖ್ ಕಾಲದಲ್ಲಿ ನಡೆದಂತೆ ಮುಸ್ಲಿಮ್ ದೇಶಗಳಲ್ಲಿ ಇರುವ ನಾಯಕರು ತಮ್ಮ ಹಿಂಸಾಚಾರ ಕೃತ್ಯಗಳಿಗೆ ಮತ್ತು ದಬ್ಬಾಳಿಕೆಗೆ ಇಸ್ಲಾಮಿನ ಅಂಗೀಕಾರವನ್ನು ಪಡೆಯಲೆತ್ನಿಸುತ್ತಾರೆ. ರಕ್ತಪಾತದ ಕ್ರಾಂತಿಗಳು ಇಸ್ಲಾಮಿನ ವಿಚಾರಧಾರೆಗೆ ವಿರುದ್ಧವಾಗಿದೆ ಮತ್ತು ಇಸ್ಲಾಮಿಕ ದೇಶಗಳಲ್ಲಿ ಅವುಗಳಿಗೆ ಸ್ಥಾನವಿಲ್ಲ.

ನಾನು ಒಂದು ಧಾರ್ಮಿಕ ಸಮುದಾಯದ ನಾಯಕನಾಗಿರುವೆನು. ನಮ್ಮ ಸಮುದಾಯ ಒಂದು ನೂರು ವರ್ಷಗಳ ಹಿಂಸಾಚಾರ, ಭಯ ಮತ್ತು ಕ್ರೌರ್ಯವನ್ನು ಎದುರಿಸಿದೆ. ನಾನು ಎಲ್ಲಾ ರೀತಿಯ ಹಿಂಸಾಚಾರವನ್ನು ಖಂಡಿಸುತ್ತೇನೆ. ನನ್ನ ದೃಢ ವಿಶ್ವಾಸವೇನೆಂದರೆ, ಇಸ್ಲಾಮ್ ಮಾತ್ರವಲ್ಲ ಯಾವುದೇ ಸತ್ಯಧರ್ಮ ಹಿಂಸಾಚಾರವನ್ನು ಹಾಗೂ ನಿರಪರಾಧಿ ಸ್ತ್ರೀ-ಪುರುಷರನ್ನು ಮತ್ತು ಮಕ್ಕಳನ್ನು ದೇವನಾಮದಲ್ಲಿ ಕೊಲ್ಲುವುದನ್ನು ಅನುಮತಿಸುವುದಿಲ್ಲ.

ದೇವನು ಪ್ರೀತಿ; ದೇವನು ಶಾಂತಿ;

ಪ್ರೀತಿಯಿಂದ ದ್ವೇಷ ಎಂದೂ ಹುಟ್ಟಲಾರದು

ಶಾಂತಿಯು ಎಂದೂ ಯುದ್ಧಕ್ಕೆ ಸಾಗಿಸದು.

**(ಮುಗಿಯಿತು)**

**ಇಂಗ್ಲಿಷ್‌ನಿಂದ ಭಾಷಾಂತರ: A. ಅಬ್ದುಸ್ಸಲಾಮ್**

## ಹಿಂದಿನ ಸಂಚಿಕೆಗಳನ್ನು ತಿರುವಿಹಾಕಿದಾಗ....



### ಸಂಪಾದಕರಿಗೆ ಪತ್ರ

ಮಾನ್ಯ ಸಂಪಾದಕರೆ,

ಜ್ಯಾತ್ಯತೀತ ರಾಷ್ಟ್ರದಲ್ಲಿ, ಮಾನವ ನಿರ್ಮಿತ ಮತೀಯ ಅಜ್ಞಾನವಿರುವ ಈ ವೇಳೆಯಲ್ಲಿ ಭಿನ್ನ ಧರ್ಮೀಯರಲ್ಲೂ ಸ್ನೇಹ ಬೆಳೆಸಲಿಕ್ಕಾಗಿ 'ಯುಗರಶ್ಮಿ' ಮಾಡುತ್ತಿರುವ ಪ್ರಯತ್ನ ಸ್ವಾಗತಾರ್ಹವಾದುದು.

ಎಲ್ಲಾ ಸಹೃದಯರಂತೆ ನಾನೂ ನಿಮ್ಮ ಪತ್ರಿಕೆಗೆ ಅಗತ್ಯದ ಸಹಾಯವನ್ನು ಮಾಡಲು ತಯಾರಿರುವೆನು.

ದಿನದಿಂದ ದಿನಕ್ಕೆ 'ಯುಗರಶ್ಮಿ'ಯ ಓದುಗರ ಸಂಖ್ಯೆ ಹೆಚ್ಚಿ, ಕರ್ನಾಟಕದಾದ್ಯಂತ ಮಾತ್ರವಲ್ಲ, ನೆರೆಯ ರಾಜ್ಯಗಳಲ್ಲೂ ಜನಪ್ರಿಯವಾಗಲಿ ಎಂದು ಹಾರೈಸುವ,

ನಿಮ್ಮವ,

**ಪೊಯಕ್ಕರ ಕೆ. ಗಣೇಶ್**
ಕಾಸರಗೋಡು
(ಯುಗರಶ್ಮಿ, ಜೂನ್ 1976)

---

ಮಾನ್ಯರೆ,

ಇಸ್ಲಾಂ ಮತ ತತ್ವ ವಿಷಯಕ ಪತ್ರಿಕೆಗಳ ಅಭಾವ ಕನ್ನಡದಲ್ಲಿದ್ದು ಅದನ್ನು ನೀವು ದೂರ ಮಾಡಿದ್ದೀರಿ. ಉರ್ದು ಬಾರದ ನನ್ನಂಥ ಕನ್ನಡಿಗನಿಗೆ ಈ ಪತ್ರಿಕೆ ತುಂಬ ಉಪಯುಕ್ತವಾಗಿದೆ. ಎಲ್ಲ ಮತದ ಜನರಲ್ಲಿ ಭಾವೈಕ್ಯತೆಯನ್ನು ಬೆಳೆಸಲು, ಪವಿತ್ರ ಮತ್ತು ಪ್ರಾಮಾಣಿಕ ಇಸ್ಲಾಂ ಧರ್ಮದ ಸಂದೇಶವನ್ನು ಬೀರಲು ನಿಮ್ಮ 'ಯುಗರಶ್ಮಿ' ತುಂಬ ಸಹಾಯಕವಾಗಿದೆ. ಹಿಂದೂ-ಮುಸ್ಲಿಮರಲ್ಲಿ ಐಕ್ಯತೆಯನ್ನು ಬೆಳೆಸಿ ಭಾರತದ ಭದ್ರತೆಗೆ - ಪ್ರಗತಿಗೆ ಬುನಾದಿಯಾಗಿ ಈ ಪತ್ರಿಕೆ ಪ್ರಯತ್ನಿಸುವುದೆಂದು ನಾನು ಭರವಸೆ ತಾಳಿದ್ದೇನೆ.

'ಯುಗರಶ್ಮಿ' ಕನ್ನಡಕ್ಕೂ ಕನ್ನಡದಾಚೆಗೂ ತನ್ನ ಬೆಳಕಿನ ಕಿರಣಗಳಿಂದ ಬೆಳಗಿ, ಎಲ್ಲ ಬಂಧುಗಳ ಹೃದಯದಲ್ಲಿಯೂ ಪ್ರಕಾಶವನ್ನು ಬೀರಲಿ ಎಂದು ಬಯಸುತ್ತೇನೆ. ಎಲ್ಲ ರೀತಿಯಿಂದ ನಿಮಗೆ ಯಶ ದೊರೆಯಲಿ.

**ದು. ನಿಂ. ಬೆಳಗಲಿ**
'ಕೃತಿ' ಸೌರಭ, ಬನಿಹಟ್ಟಿ (ಜಿ. ವಿಜಾಪುರ)
(ಯುಗರಶ್ಮಿ ಜೂನ್, 1976)

(ದು. ನಿಂ. ಬೆಳಗಲಿ ಇವರು ಮಕ್ಕಳ ಸಾಹಿತ್ಯದಲ್ಲಿ 1976ರಲ್ಲಿ ರಾಷ್ಟ್ರೀಯ ಪ್ರಶಸ್ತಿಯನ್ನು ಗಳಿಸಿದ್ದಾರೆ.
– ಸಂಪಾದಕ)

---

ಪ್ರಿಯ ಸಂಪಾದಕರಿಗೆ,

ಎಲ್ಲ ಧರ್ಮಗಳ ಒಳಿತಿರುಳು ಒಂದೇ. ಅದು ಆ ಪರಮಾತ್ಮನ ಮಹಾತ್ಮೆಯನ್ನು ಸಾರಿ ಜನತೆಯನ್ನು ಸನ್ಮಾರ್ಗದತ್ತ ಒಯ್ಯುವುದು. 'ಯುಗರಶ್ಮಿ' ಈ ದಿಸೆಯಲ್ಲಿ ತನ್ನ 'ಅಳಿಲ ಸೇವೆ' ಗೈಯುತ್ತಿರುವುದು ಸಂತಸ. ಇಸ್ಲಾಮ್ ಧರ್ಮದ ಕುರಿತು ಕೂಲಂಕಷ ಅರಿಯುವಲ್ಲಿ 'ಯುಗರಶ್ಮಿ'ಯು ಬೆಳಕನ್ನು ಸರ್ವತ್ರ ಚೆಲ್ಲಲಿ ಎಂದೇ ನನ್ನ ಹಾರೈಕೆ. ಸ್ವಧರ್ಮವನ್ನು ಅರಿಯುವುದರೊಂದಿಗೆ, ಅನ್ಯ ಧರ್ಮದ ಕುರಿತೂ 'ಯುಗರಶ್ಮಿ' ಲೇಖನಗಳನ್ನು ಪ್ರಕಟಿಸಲಿ. ತನ್ಮೂಲಕ ಮೂಢ, ಸಂಕುಚಿತ ದೃಷ್ಟಿಕೋನದಿಂದ ಮುಕ್ತವಾಗಿ ಮಾನವಧರ್ಮದತ್ತ ಜನತೆ ಸಾಗುವಂತಾದೀತು.

'ಯುಗರಶ್ಮಿ'ಗೆ ನನ್ನ ಶುಭ ಹಾರೈಕೆಗಳು.

**B. ನರಸಿಂಗ ರಾವ್, B.Sc.**
Free Lance Journalist.
(ಯುಗರಶ್ಮಿ ಸಪ್ಟೆಂಬರ್ 1976)



ಕ್ಯಾಲಗರಿ ನಗರದಲ್ಲಿ ನಿರ್ಮಿಸಲಾದ ಕೆನಡದ ಅತ್ಯಂತ ದೊಡ್ಡ ಅಹ್ಮದಿಯಾ ಮುಸ್ಲಿಂ ಮಸೀದಿ "ಮಸ್‌ಜಿದ್ ಬೈತುನ್ನೂರ್" 4-7-2008ರಂದು ಪಂಚಮ ಖಲೀಫರಿಂದ ಉದ್ಘಾಟಿಸಲ್ಪಟ್ಟಿತು. (ಪುಟ 6 ನೋಡಿರಿ)




ಚೆನ್ನೈ ಸೈಂಟ್ ಥಾಮಸ್ ಮೌಂಟ್‌ನಲ್ಲಿ ನಿರ್ಮಿಸಲಾದ "ಮಸ್‌ಜಿದ್ ಹಾದಿ" 24-11-2008ರಂದು ಅಹ್ಮದಿಯಾ ಪಂಚಮ ಖಲೀಫರಿಂದ ಉದ್ಘಾಟಿಸಲ್ಪಟ್ಟಿತು.

Registered with the Registrar of Newspapers for India No. R.N. 27354/75
YUGARASHMI Kannada Quarterly, JULY - 2009

ದಿನಂಪ್ರತಿ 24 ಗಂಟೆಗಳ ಕಾಲ ಪ್ರಸಾರಗೊಳ್ಳುತ್ತಿರುವ
ಪ್ರಪ್ರಥಮ ಇಸ್ಲಾಮೀ ಟಿ.ವಿ. ಚ್ಯಾನೆಲ್

ಮುಸ್ಲಿಂ ಟೆಲಿವಿಷನ್ ಅಹ್ಮದಿಯಾ
ಇಂಟರ್‌ನೇಶನಲ್

THE FIRST ISLAMIC SATELLITE CHANNEL

BROADCASTING ROUND THE CLOCK

SATELLITE : ASIASAT 3S
POSITION : 105.5° EAST
FREQUENCY : 3760 MHZ
MIN. DISH SIZE : 1.8 METRE

POLARISATION : HORIZONTAL
SYMBOL RATE : 26000 MBPS
FEC : 7/8

E-Mail : info@alislam.org
Website : http:www.alislam.org/mta.tv




ಅಹ್ಮದಿಯಾ ಮುಸ್ಲಿಂ ಜಮಾಅತಿನ
ವತಿಯಿಂದ ಪ್ರಕಟಿಸಲ್ಪಟ್ಟ

ಪವಿತ್ರ ಖುರ್‌ಆನ್
ಕನ್ನಡ ಭಾಷಾಂತರ

ಬೆಲೆ : ರೂ. 200/-

ದೊರೆಯುವ ವಿಳಾಸ

AHMADIYYA MUSLIM MISSION
No.1, 3rd Cross Road,
Wilson Garden,
Bangalore - 560 027
Phone : 080 - 22246133

NAZARAT NASHR-O-ISHAAT
Sadr Anjuman Ahmadiyya
QADIAN - 143516
(PUNJAB)

Edited and Published by Muhammad Yusuf on behalf of Jamath Ahmadiyya at 10-23-1008/1,
Ist Floor, Ansari Road, Mangalore - 575 001.
Printed at 'Karavali Printers', Azizuddin Road, Mangalore on behalf of Jubilee Printing Press, Mangalore.
Typeset at 'We Are Designers', Car street, Mangalore - 575 001